ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-03 • ಡಿಸೆಂಬರ್ 2023



Downloaded From:www.kpscvaani.com



ನವೆಂಬರ್ 19 ರಂದು ದಿವಂಗತ ಇಂದಿರಾಗಾಂಧಿ ಅವರ ಜನ್ಮ ದಿನಾಚರಣೆ ಅಂಗವಾಗಿ ಆಚರಿಸಲಾಗುವ ರಾಷ್ಟ್ರೀಯ ಐಕ್ಯತೆ ದಿನದ ಅಂಗವಾಗಿ ಮುಖ್ಯಮಂತ್ರಿ ಅವರು ಐಕ್ಯತಾ ಪ್ರಮಾಣ ವಚನವನ್ನು ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೋಧಿಸಿದರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಾದ ವಂದಿತಾ ಶರ್ಮ, ಅಭಿವೃದ್ಧಿ ಆಯುಕ್ತರಾದ ಶಾಲಿನಿ ರಜನೀಶ್, ಸಚಿವರಾದ ಭೈರತಿ ಸುರೇಶ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಯಾದ ರಜನೀಶ್ ಗೋಯಲ್ ಉಪಸ್ಥಿತರಿದ್ದರು.



ನವೆಂಬರ್ 14 ರಂದು ಜವಾಹರ ಲಾಲ್ ನೆಹರು ಅವರ ಜನ್ಮ ದಿನಾಚರಣೆ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ನೆಹರೂ ಅವರ ಪ್ರತಿಮೆ ಬಳಿ ಇರಿಸಲಾಗಿದ್ದ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪ ನಮನ ಸಲ್ಲಿಸಿದ ಸಂದರ್ಭ. ಈ ಸಂದರ್ಭದಲ್ಲಿ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರು ಉಪಸ್ಥಿತರಿದ್ದರು.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-03 • ಡಿಸೆಂಬರ್ 2023


**06** ಉದ್ಘಾಟನೆಗೊಂಡ ಯರಗೋಳು ಕುಡಿಯುವ ನೀರಿನ ಯೋಜನೆ

**09** ಮಾಹಿತಿಗಳ ಆಗರ 2023ನೇ ಸಾಲಿನ ಕೃಷಿ ಮೇಳ
• ಉಮೇಶ್ ಕೂಲಿಗೆರೆ

**14** ಸರ್ಕಾರದ ಆರು ತಿಂಗಳ ಅನನ್ಯ ಸಾಧನೆಯ ಕಿರುನೋಟ

**16** ಹಂಪಿಯಲ್ಲಿ ಕನ್ನಡ ಜ್ಯೋತಿ ರಥಯಾತ್ರೆಗೆ ಚಾಲನೆ
• ಧನಂಜಯ.ಬಿ

**18** ಬಬ್ಬೂರು ಕೃಷಿ ಫಾರಂಗೆ ಶತಮಾನೋತ್ಸವ ಸಂಭ್ರಮ
• ತುಕಾರಾಂರಾವ್ ಬಿ.ವಿ

**21** ಹವಾನಿಯಂತ್ರಣ ರಹಿತ ಸ್ಲೀಪರ್ "ಪಲ್ಲಕ್ಕಿ" ಬಸ್‌ಗಳ ಲೋಕಾರ್ಪಣೆ
• ಮುನಿರಾಜ.ಎಂ

**23** ಪತ್ರಿಕಾ ವಿತರಕರಿಗೆ ಮೊದಲ ಬಾರಿಗೆ ಒಲಿದ ರಾಜ್ಯೋತ್ಸವ ಪ್ರಶಸ್ತಿ
• ಅಂಶಿ ಪ್ರಸನ್ನಕುಮಾರ್

**24** ಊಹಾಪೋಹ ಪತ್ರಿಕೋದ್ಯಮ ಅಪಾಯಕಾರಿ
• ಬಿ.ಕೆ. ರಾಮಲಿಂಗಪ್ಪ

**25** ವನ್ಯ ಜೀವಿಗಳ ಅಂಗಾಂಗ ಇರಿಸಿಕೊಳ್ಳುವುದು ಅಪರಾಧ
• ನಂಜುಂಡಪ್ಪ.ವಿ.

**28** ಏಡ್ಸ್ ನಿಯಂತ್ರಣಕ್ಕೆ ಜನಜಾಗೃತಿಯೇ ಮದ್ದು
• ಡಾ.ವರ ಪ್ರಸಾದ್ ರಾವ್ ಪಿ.ವಿ.

**30** ಗಿಗ್ ಕಾರ್ಮಿಕರಿಗೆ ವಿಮಾ ಸೌಲಭ್ಯ
• ಕೆ. ಎಸ್. ರಾಜಮನ್ನಾರ್

**32** ಕನ್ನಡದ ಮೊಟ್ಟ ಮೊದಲ ರಾಷ್ಟ್ರೀಯವಾದಿ ಪತ್ರಿಕೆ ಚಂದ್ರೋದಯ
• ದಿನೇಶ ನಾಯಕ್





**35** ಮಾನವತಾವಾದಿ ಸಿದ್ಧಾಂತ ಪ್ರತಿಪಾದಕರು ರಾಷ್ಟ್ರಕವಿ ಕುವೆಂಪು
• -ಲಕ್ಷ್ಮೀಕಾಂತರಾಜು ಎಂ.ಜಿ

**37** ಝೀಕಾ ವೈರಾಣು ಸೋಂಕಿನ ಬಗ್ಗೆ ತಿಳಿದಿರಬೇಕಾದ ವಿಷಯಗಳು
• ಡಾ.ಅನ್ವಯ್ ಬಿ.ಎಸ್

**39** ಆತ್ಮಹತ್ಯೆಯು ಮನುಕುಲದ ನಷ್ಟ
• ಡಾ. ಹರ್ಷಿತಾ ವಿ. ಹೆಚ್

**41** ಸರ್ಕಾರದ ಕಾರ್ಯಕ್ರಮಗಳ ಯಶಸ್ಸಿಗೆ ಕ್ಷೇತ್ರಪ್ರಚಾರದ ಮಹತ್ವ
• ಎನ್. ರವಿಶಂಕರ್

**44** ಬರಡು ನೆಲದಲ್ಲೂ ಬೆಳೆಯುವ ನವಣೆ
• ಆರ್. ಎಸ್. ಪಾಟೀಲ

**46** ನಿಸರ್ಗದ ಮಧ್ಯೆ ಕೂಡಲಗಿ
• ಗಣಪತಿ ಹಾಸ್ಪುರ

**47** ಚದುರಂಗದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತಿರುವ ಬಾಲಕಿ
• ರಮೇಶ್

**50** ಪದಬಂಧ- 49



**ಪ್ರಧಾನ ಸಂಪಾದಕರು**
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
ಪಲ್ಲವಿ ಹೊನ್ನಾಪುರ (ಹೆ.ಪ್ರ)
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

**ಉಪ ಸಂಪಾದಕರು**
ಬಿ. ಜೆ. ಪೂರ್ಣಿಮ

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ನವೆಂಬರ್ ವಾರ್ತಾ ಜನಪದ ಸಂಚಿಕೆಯಲ್ಲಿ ನಾಡಹಬ್ಬ ದಸರಾದ ಸಾಂಪ್ರದಾಯಿಕ ಹಾಗೂ ಅರ್ಥಪೂರ್ಣ ಆಚರಣೆ ಬರಗಾಲದ ನಡುವೆಯೂ ಜನರ ಸಂಭ್ರಮಕ್ಕೆ ಕಾರಣವಾಯಿತು. ನಾಡದೇವತೆ ಚಾಮುಂಡೇಶ್ವರಿ ನಾಡಿನ ಸಂಕಷ್ಟಗಳ ನಿವಾರಣೆ ಮಾಡಲಿ ಎಂದು ಪ್ರಧಾನ ಸಂಪಾದಕರು ಸಂಪಾದಕೀಯದಲ್ಲಿ ಸಂದೇಶವನ್ನು ನೀಡಿರುವುದು ರಾಜ್ಯದ ಜನತೆ ಮೇಲೆ ಎಷ್ಟು ಅಭಿಮಾನ ಮೂಡಿಸಿದ್ದಾರೆ ಎಂಬುದು ತಿಳಿದು ಬರುತ್ತದೆ.

ಆಲೂರು ವೆಂಕಟರಾಯರು ನಮ್ಮ ಕನ್ನಡ ಚಳುವಳಿಯ ಪಿತಾಮಹ ಎನಿಸಿದವರು. ಕನ್ನಡ ಭಾಷೆಗೆ ಪ್ರಾಮುಖ್ಯತೆ ಕೊಡಿಸುವ ನಿಟ್ಟಿನಲ್ಲಿ ಇವರ ಜೊತೆಗೆ ಕವಿಗಳಾದ ಪಂಪ, ರನ್ನ ರಿಂದ ಹಿಡಿದು ಸಮಸ್ತ ಕವಿಗಳು, ಸಾಹಿತಿಗಳ ಪಾತ್ರ ಪ್ರಮುಖವಾದುದು. ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವ ಬಗ್ಗೆ ಉತ್ತಮ ಲೇಖನ ಬರೆದಿರುತ್ತಾರೆ. ಅವರಿಗೆ ನನ್ನ ಅಭಿನಂದನೆಗಳು. ಮುಖಪುಟದ ಚೆಲುವ ಕನ್ನಡ ನಾಡಿಗೆ ಸುವರ್ಣ ಮಹೋತ್ಸವ ಚಿತ್ರಣ ಚನ್ನಾಗಿ ಬಂದಿದೆ.

ಮೈಸೂರು ದಸರಾ ಮೆರವಣಿಗೆಯಲ್ಲಿ ಸಾಗಿದ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗೆ ಸ್ತಬ್ಧಚಿತ್ರವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಿದ್ಧಪಡಿಸಿರುವುದು ಜನರ ಮನಸ್ಸಿಗೆ ರಾಜ್ಯದ ಪ್ರಗತಿಯ ಅರಿವನ್ನು ಮೂಡಿಸಿದೆ. ಇಲಾಖೆಗೆ ಅಭಿನಂದನೆಗಳು. ಹುಲಿ ಕೆರೆ ಕಲ್ಯಾಣಿಯ ಕುರಿತು ಲೇಖನ ಮತ್ತು ಕಲ್ಯಾಣಿಯ ಚಿತ್ರ ಚನ್ನಾಗಿ ಮೂಡಿಬಂದಿದೆ. ಈ ಸಂಚಿಕೆಯಲ್ಲಿ ಉತ್ತಮ ಲೇಖನಗಳನ್ನು ಆಯ್ಕೆ ಮಾಡಿ ಪ್ರಕಟಿಸಿರುವುದಕ್ಕೆ ಅಭಿನಂದನೆಗಳು.


**–ಎಸ್.ಮಹದೇವಶೆಟ್ಟಿ, ಸೋಸಲೆ ಗ್ರಾಮ**

ಸುವರ್ಣ ಮಹೋತ್ಸವದಲ್ಲಿ ಕರ್ನಾಟಕ ಎಂದು ನಾಮಕರಣವಾಗಲು ನಡೆದು ಬಂದ ದಾರಿಯ ಪೂರ್ಣ ಇತಿಹಾಸ ಮನಮುಟ್ಟುವಂತೆ ವಿವರಿಸಿದ್ದಾರೆ. ಹಾಗೂ ನಮ್ಮ ಕನ್ನಡ ಭಾಷಾ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಉಳಿಸಿ ಅಭಿವೃದ್ಧಿ ಪಡಿಸುವಲ್ಲಿ ಹೋರಾಟಗಾರರ ಪಾತ್ರವನ್ನು ಸುಸ್ಪಷ್ಟವಾಗಿ ತಿಳಿಸಿ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರಿಂದ ಹುಯಿಲಗೋಳ ನಾರಾಯಣರಾಯರವರೆಗೆ ಹಾಗೂ ಡಾ॥ ರಾಜ್‌ಕುಮಾರ್ ರಿಂದ ಗೋಕಾಕ್ ವರದಿ ಕುರಿತು ಶ್ರಮಿಸಿದವರನ್ನು ಪೂರ್ಣವಾಗಿ ವಿವರಿಸಿದ್ದಾರೆ. ಇದು ನಿಜಕ್ಕೂ ಪ್ರತಿ ಕನ್ನಡಿಗನು ತಿಳಿದಿರಬೇಕಾದ ಮಾಹಿತಿಯ ಖಣಜವೇ ನವೆಂಬರ್ ತಿಂಗಳ ಸಂಚಿಕೆ ಎಂದು ಹೇಳಬಹುದು. ಮಾಹಿತಿಗಾಗಿ ಚಿರಋಣಿಯಾಗಿರುವೆವು.

**–ಸುಮಂತ.ರಾ.ತುಪ್ಪದ, ಹಾನಗಲ್**

* * *

ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಹಲವು ಹೋರಾಟಗಾರರ ಪಾತ್ರ ಲೇಖನವು ಕರ್ನಾಟಕ ಸುವರ್ಣ ಸಂಭ್ರಮಾಚರಣೆಗೆ ಸೂಕ್ತವಾದ ಲೇಖನ ಎನಿಸಿತು. ಕನ್ನಡ ಮತ್ತು ಕರ್ನಾಟಕಕ್ಕಾಗಿ ಹೋರಾಡಿದವರನ್ನು ನಾವು ಈ ಸಮಯದಲ್ಲಾದರೂ ನೆನೆಯುವುದು ಧರ್ಮ. ಹಾಗಾಗಿ ನಮ್ಮ ನಾಡಿನ ಭಾಷೆ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಉಳಿಸಿ ಬೆಳೆಸುವಲ್ಲಿ ಹಲವು ಹೋರಾಟಗಾರರು ಪ್ರಮುಖ ಪಾತ್ರವಹಿಸಿದ್ದಾರೆ. ಅಂತಹವರನ್ನು ಇಂದಿನ ಪೀಳಿಗೆಯವರಿಗೆ ಪರಿಚಯಿಸಿದಂತ್ತಾಗಿದೆ. ಲೇಖನದ ಜೊತೆಗೆ ಆದಿನದ ಅಪರೂಪದ ಛಾಯಾಚಿತ್ರವನ್ನು ಬಳಸಿರುವುದು ಲೇಖನಕ್ಕೆ ಮತ್ತಷ್ಟು ಘನತೆಯನ್ನು ಹೆಚ್ಚಿಸಿತು.




**–ಸಂಗಮೇಶ, ಗದಗ**

* * *

ಮೈಸೂರು ನಗರದ ಹೆಸರುವಾಸಿ ರಾಮಸ್ವಾಮಿ ವೃತ್ತದ ಹೆಸರು ಇಲ್ಲಿ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಅವರ ಹೆಸರು ಎಂದು ನಾನು ಭಾವಿಸಿದ್ದೆ. ಆದರೆ ಅದು ಆ ಸ್ಥಳದಲ್ಲಿ ಮೈಸೂರು ಚಲೋ ಪ್ರತಿಭಟನೆಯಲ್ಲಿ ಜಿಲ್ಲಾಧಿಕಾರಿಯ ಗುಂಡೇಟಿಗೆ ಬಲಿಯಾದ ರಾಮಸ್ವಾಮಿ ಎಂಬ ವಿದ್ಯಾರ್ಥಿಯ ಹೆಸರು ಎಂಬುದು ನನಗೆ ಈವರೆಗೂ ತಿಳಿದಿರಲಿಲ್ಲ. ಲೇಖಕರಿಗೂ, ಜನಪದಕ್ಕೂ ಧನ್ಯವಾದಗಳು.

**–ಲಕ್ಷ್ಮೀಕಾಂತರಾಜು ಎಂ.ಜಿ, ಮಶಗ್ರಾಮ**

* * *

ಕರ್ನಾಟಕ ರಾಜ್ಯೋತ್ಸವದ ಲೇಖನ ಚನ್ನಾಗಿ ಮೂಡಿ ಬಂದಿದೆ. ಕರ್ನಾಟಕಕ್ಕೆ 50 ವರ್ಷಗಳ ಸುವರ್ಣ ಸಂಭ್ರಮ ಲೇಖನ ಬಹಳ ಅರ್ಥ ಪೂರ್ಣವಾಗಿತ್ತು. ಕರ್ನಾಟಕ ಅಭಿವೃದ್ಧಿಗಾಗಿ ಹಲವು ಹೋರಾಟಗಾರರ ಪಾತ್ರ ಪ್ರಮುಖವಾಗಿತ್ತು. ರಾಷ್ಟ್ರಧ್ವಜ ತಯಾರಿಸುವ ಗರಗ ಸೇವಾ ಸಂಘಕ್ಕೆ ಮಹಾತ್ಮಗಾಂಧಿ ಪ್ರಶಸ್ತಿ ದೊರಕಿದ್ದು ಹೆಮ್ಮೆಯ ಸಂಗತಿಯಾಗಿದೆ.

ಅಂದಕಾರವನ್ನು ಹೋಗಲಾಡಿಸುವ ದೀಪಾವಳಿಯ ಲೇಖನ ಬಹಳ ಅರ್ಥಪೂರ್ಣವಾಗಿತ್ತು. ಪರಿಸರ ಮಾಲಿನ್ಯ ಮಾಡುವ ಪಟಾಕಿ ಬಿಟ್ಟು ದೀಪವನ್ನು ಹಚ್ಚುವುದನ್ನು ತಿಳಿಸಿಕೊಟ್ಟಿದ್ದು ಒಳ್ಳೆಯ ಸಂದೇಶವಾಗಿತ್ತು. ನವೆಂಬರ್‌ನಲ್ಲಿ ಮೂಡಿ ಬಂದ ಡಿಜಿಟಲ್ ಗ್ರಂಥಾಲಯ ಲೇಖನದಿಂದ ಬಹಳ ವಿಷಯ ತಿಳಿದು ಬಂತು. ಇದರಿಂದ ಮನೆ ಬಾಗಿಲಿಗೆ ಗ್ರಂಥಾಲಯ ಬಂದಷ್ಟು ಸಂತೋಷವಾಯಿತು. ಇದರಿಂದ ಪುಸ್ತಕ ಓದುವ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಬಹಳ ಅನುಕೂಲವಾಗಲಿದೆ.

**–ಚನ್ನಪ್ಪ ಶಿ. ಬಳಿಗಾರ, ಇರಕಲ್‌ಗಡಾ**

ಸರ್ಕಾರವು ತಂತ್ರಜ್ಞಾನವನ್ನು ಎಲ್ಲಾ ಕ್ಷೇತ್ರದಲ್ಲೂ ಅಳವಡಿಸಿಕೊಳ್ಳುತ್ತಿದೆ ಎಂಬುದಕ್ಕೆ ರಾಜ್ಯದಲ್ಲಿ 'ಆರೋಗ್ಯ ಮಿತ್ರ' ಯೋಜನೆ ಆರಂಭವಾಗಿರುವುದಕ್ಕೆ ನಿದರ್ಶನವಾಗಿದೆ. ಹಣ ನೀಡುವ ಎಟಿಎಂ ಮಷಿನ್‌ಗಳಂತೆ ಈ ಹೆಲ್ತ್ ಹೆಟಿಹೆಚ್ ಗಳು ಹತ್ತು ನಿಮಿಷದಲ್ಲಿ ಸುಮಾರು 50 ಕ್ಕೂ ಹೆಚ್ಚು ಪರೀಕ್ಷೆಗಳನ್ನು ಮಾಡಿ ರಿಪೋರ್ಟ್ ನೀಡುತ್ತದೆ ಎಂದರೆ ತಂತ್ರಜ್ಞಾನ ಎಷ್ಟು ಮುಂದುವರೆದಿದೆ ಎಂಬುದು ತಿಳಿಯುತ್ತದೆ. ಸದ್ಯ ಕಲಬುರಗಿಯಲ್ಲಿ ಪ್ರಾಯೋಗಿಕವಾಗಿ ಸ್ಥಾಪಿಸಲಾಗಿರುವ ಈ ಹೆಲ್ತ್ ಹೆಟಿಹೆಚ್ ಮಷಿನ್‌ಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ಸ್ಥಾಪಿಸುವಂತೆ ಪತ್ರಿಕೆ ಮೂಲಕ ಸರ್ಕಾರಕ್ಕೆ ಕೋರುವೆ.

**–ಲಕ್ಷ್ಮೀಶ ಹೆಚ್. ಕೆ, ಕೋಲಾರ**


'ವಾರ್ತಾ ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ https://sevasindhu.karnataka.gov.in ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

**ಪ್ರಿಯ ಓದುಗ ಮಿತ್ರರೇ,**

**ಎಲ್ಲರಿಗೂ ಕ್ರಿಸ್ಮಸ್ ಹಬ್ಬದ ಶುಭಾಶಯಗಳು.**

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಇದೇ ನವೆಂಬರ್ 20 ರಂದು ಆರು ತಿಂಗಳ ಅಧಿಕಾರಾವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಸರ್ಕಾರವು ಐದು ಗ್ಯಾರಂಟಿ ಯೋಜನೆಗಳಲ್ಲಿ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ.

ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಒದಗಿಸುವ ಶಕ್ತಿ ಯೋಜನೆಯಡಿ ನೀಡಲಾಗುವ ಶೂನ್ಯ ದರ ಟಿಕೆಟ್‌ಗಳ ಸಂಖ್ಯೆ ನೂರು ಕೋಟಿಯ ಗಡಿ ದಾಟಿದೆ. ಗೃಹ ಲಕ್ಷ್ಮಿ ಯೋಜನೆಯಡಿ 1.10 ಕೋಟಿ ಮಹಿಳೆಯರಿಗೆ 2,000 ರೂ. ನಗದು ವರ್ಗಾವಣೆ ಮಾಡಲಾಗುತ್ತಿದೆ. 200 ಯುನಿಟ್ ವರೆಗೆ ಉಚಿತ ವಿದ್ಯುತ್ ನೀಡುವ ಗೃಹ ಜ್ಯೋತಿ ಯೋಜನೆಯಡಿ 1.50 ಕೋಟಿ ಕುಟುಂಬಗಳು ಪಡೆದುಕೊಂಡಿವೆ. ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡುದಾರರಿಗೆ ಐದು ಕೆ.ಜಿ. ಹೆಚ್ಚುವರಿ ಉಚಿತ ಅಕ್ಕಿಯ ಬದಲಿಗೆ ಪ್ರತಿ ಫಲಾನುಭವಿಗೆ 170 ರೂ. ನಂತೆ 3.92 ಕೋಟಿ ಫಲಾನುಭವಿಗಳಿಗೆ 2444 ಕೋಟಿ ರೂ. ನಗದು ವರ್ಗಾವಣೆ ಮಾಡಲಾಗಿದೆ.

ಪದವೀಧರ ಯುವಜನರು ಉದ್ಯೋಗ ಪಡೆಯುವವರೆಗೆ ಬೆಂಬಲ ನೀಡುವ ಸಲುವಾಗಿ ನಿರುದ್ಯೋಗ ಭತ್ಯೆ ನೀಡುವ ಐದನೇ ಗ್ಯಾರಂಟಿ, 'ಯುವನಿಧಿ' ಯೋಜನೆಯನ್ನು ಸರ್ಕಾರವು ಜನವರಿ ತಿಂಗಳಿನಿಂದ ಜಾರಿಗೆ ತರಲು ಸಿದ್ಧತೆ ಮಾಡಿಕೊಂಡಿದ್ದು, ಸುಮಾರು ನಾಲ್ಕೂವರೆ ಲಕ್ಷ ಯುವಜನತೆಗೆ ನೆರವಾಗುವ ನಿರೀಕ್ಷೆ ಇದೆ. ರಾಜ್ಯದ ಬಹುತೇಕ ಎಲ್ಲಾ ಜನರು ಒಂದಲ್ಲ ಒಂದು ಯೋಜನೆಯ ಫಲಾನುಭವಿಗಳಾಗಿದ್ದು, ಜಾತಿ, ಮತ, ಬಡವ, ಬಲ್ಲಿದನೆಂಬ ಭೇದವಿಲ್ಲದ ಎಲ್ಲರನ್ನೂ ಒಳಗೊಂಡ ಕರ್ನಾಟಕ ಮಾದರಿ ಅಭಿವೃದ್ಧಿಗೆ ಅಭೂತಪೂರ್ವ ಜನಸ್ಪಂದನೆ ದೊರಕಿದೆ.

ನವೆಂಬರ್ ತಿಂಗಳು ಸರ್ಕಾರದ ಹಲವು ಪ್ರಮುಖ ಯೋಜನೆಗಳ ಉದ್ಘಾಟನೆ ಹಾಗೂ ಪ್ರಮುಖ ತೀರ್ಮಾನಗಳಿಗೆ ಸಾಕ್ಷಿಯಾಯಿತು. ಬರದ ಜಿಲ್ಲೆಯೆಂದೇ ಹಣೆಪಟ್ಟಿ ಹೊತ್ತಿರುವ ಕೋಲಾರ ಜಿಲ್ಲೆಯ ಮೂರು ಪಟ್ಟಣಗಳು ಹಾಗೂ ಸುತ್ತಮುತ್ತಲಿನ 45 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯರಗೋಳ ಯೋಜನೆಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು. ಕುಡಿಯುವ ನೀರಿಗೆ ಬಹುತೇಕ ಅಂತರ್ಜಲವನ್ನೇ ಅವಲಂಬಿಸಿದ್ದ ಕೋಲಾರ ಜಿಲ್ಲೆಯ ಇತಿಹಾಸದಲ್ಲಿ ಇದೊಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಬಾರಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಜರುಗಿದ 2023 ನೇ ಸಾಲಿನ ಕೃಷಿ ಮೇಳದಲ್ಲಿ ಕೃಷಿ ವಿಜ್ಞಾನಿಗಳು 32 ಕ್ಕೂ ಹೆಚ್ಚು ತಂತ್ರಜ್ಞಾನಗಳನ್ನು ಹಾಗೂ 5 ಹೊಸ ತಳಿಯ ಬೆಳೆಗಳನ್ನು ಕೃಷಿಕರಿಗೆ ಪರಿಚಯಿಸಿರುವುದು ಗಮನಾರ್ಹ. ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸದಾ ಹಸಿರು ಕ್ರಾಂತಿ ನಡೆಯಬೇಕೆಂದು ಮುಖ್ಯಮಂತ್ರಿಯವರು ಆಶಿಸಿದ್ದು, ಸುಸ್ಥಿರ ಕೃಷಿಯ ಪ್ರಾಮುಖ್ಯವನ್ನು ಎತ್ತಿ ಹಿಡಿಯುತ್ತದೆ.

ರಾಜ್ಯದ ರೈತರ ಅನುಕೂಲಕ್ಕಾಗಿ ಕೃಷಿ ಹೊಂಡಗಳನ್ನು ನಿರ್ಮಿಸುವ ಕೃಷಿ ಭಾಗ್ಯ ಯೋಜನೆಯನ್ನು 200 ಕೋಟಿ ರೂ. ವೆಚ್ಚದೊಂದಿಗೆ 106 ತಾಲ್ಲೂಕುಗಳಲ್ಲಿ ಮರು ಜಾರಿಗೊಳಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದರೊಂದಿಗೆ ಹೈಟೆಕ್ ಹಾರ್ವೆಸ್ಟರುಗಳ ಖರೀದಿ ಮೂಲಕ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ಬಲ ಪಡಿಸುವ ಮೂಲಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೂ ಕೃಷಿ ಯಾಂತ್ರೀಕರಣದ ಅನುಕೂಲ ದೊರಕಿಸಲು ಸರ್ಕಾರ ಮುಂದಾಗಿದೆ.

ಈ ಸಂಚಿಕೆಯು ಯರಗೋಳ ಯೋಜನೆ, ಕೃಷಿ ಮೇಳ 2023ರ ಸಮಗ್ರ ಚಿತ್ರಣದ ಜೊತೆಗೆ ಆರೋಗ್ಯ, ವನ್ಯಜೀವಿ ಕಾಯ್ದೆ ಮತ್ತಿತರ ಹಲವು ವಿಚಾರಗಳತ್ತ ಬೆಳಕು ಚೆಲ್ಲುವ ಲೇಖನಗಳೊಂದಿಗೆ ನಿಮ್ಮ ಮುಂದಿದೆ. ನಿಮ್ಮ ಪ್ರೋತ್ಸಾಹದ ನಿರೀಕ್ಷೆಯಲ್ಲಿ ಸಂಚಿಕೆಯನ್ನು ನಿಮ್ಮ ಕೈಗಿರಿಸಿದ್ದೇವೆ.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



## ಉದ್ಘಾಟನೆಗೊಂಡ

# ಯರಗೋಳು ಕುಡಿಯುವ ನೀರಿನ ಯೋಜನೆ



ನವೆಂಬರ್ 11 ರಂದು ಕೋಲಾರ, ಬಂಗಾರಪೇಟೆ, ಮಾಲೂರು ತಾಲ್ಲೂಕಿನ ಜನರಿಗೆ ಕುಡಿಯುವ ನೀರು ಒದಗಿಸುವ ಯರಗೋಳು ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡಿದರು.

ಅಂದು ಕೋಲಾರ, ಬಂಗಾರಪೇಟೆ, ಮಾಲೂರು ತಾಲ್ಲೂಕುಗಳಿಗೆ ಕುಡಿಯುವ ನೀರನ್ನು ಒದಗಿಸುವ ಯರಗೋಳು ಯೋಜನೆ ಹಾಗೂ ಜಿಲ್ಲೆಯ ವಿವಿಧ ಅಭಿವೃದ್ಧಿ ಯೋಜನೆಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಒಂದು ಕಾಲದಲ್ಲಿ ಕೋಲಾರ, ಬಂಗಾರಪೇಟೆ ಮತ್ತು ಮಾಲೂರಿಗೆ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ನೀಡುವ ಪರಿಸ್ಥಿತಿ ಇತ್ತು. ಕುಡಿಯುವ ನೀರು ಸಿಗುತ್ತಿರಲಿಲ್ಲದ ಕಾರಣ ಯೋಚಿಸಿ ಮಾರ್ಕಾಂಡೇಯ ನದಿಗೆ ಯರಗೋಳು ಗ್ರಾಮದ ಬಳಿ ಅಣೆಕಟ್ಟು ನಿರ್ಮಿಸಿ ನೀರು ಶೇಖರಿಸಿ ಮೂರೂ ಪಟ್ಟಣಗಳಿಗೆ ಕುಡಿಯುವ ನೀರು ಕೊಡುವ ಯೋಜನೆ ರೂಪಿಸಲಾಯಿತು. ಇದು ಕಾರ್ಯಗತವಾಗುತ್ತಿರುವ ಹಿಂದೆ ಮಾಜಿ ಸಚಿವ ಶ್ರೀನಿವಾಸಗೌಡ ಅವರ ಕೊಡುಗೆಯನ್ನು ಸ್ಮರಿಸಬೇಕು ಎಂದರು.

ಟೀಚರ್ ಚಂದ್ರಪ್ಪ, ನಾರಾಯಣಸ್ವಾಮಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು. ಯರಗೋಳು ಯೋಜನೆ 2006 ರಲ್ಲಿ ಪ್ರಾರಂಭವಾದರೂ, ಕಾರ್ಯಗತವಾಗಲಿಲ್ಲ. ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿಯವರು ಒತ್ತಾಯ ಮಾಡಿ ಚಾಲನೆ ನೀಡಿದರು. ಹಾಗಾಗಿ ಇದಕ್ಕೆ ಚಾಲನೆ ದೊರಕುತ್ತಿದೆ. 38.1 ಗಜ ಆಳದಲ್ಲಿ ನೀರು ನಿಲ್ಲಲಿದೆ. ಈ ಮೂರು ಪಟ್ಟಣಗಳಿಗೆ ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ನೀರು



Downloaded From:www.kpscvaani.com

## ಕೆಜಿಎಫ್‌ನಲ್ಲಿ ಕೈಗಾರಿಕಾ ಟೌನ್ ಶಿಪ್

ಮುಂದಿನ ಬಜೆಟ್‌ನಲ್ಲಿ ಕೆಜಿಎಫ್‌ನಲ್ಲಿರುವ 965 ಕೈಗಾರಿಕಾ ಪ್ರದೇಶವನ್ನು ಬಿ.ಇ.ಎಂ.ಎಲ್ ನಿಂದ ಹಿಂಪಡೆದು ಅಲ್ಲಿ ಹೊಸ ಕೈಗಾರಿಕಾ ಟೌನ್‌ಶಿಪ್ ನಿರ್ಮಾಣ ಮಾಡಲಾಗುವುದು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು.



ಸಾಕಾಗುತ್ತದೆ ಎನ್ನುವುದು ನನ್ನ ಭಾವನೆ. ಕೆಜಿಎಫ್ ಶಾಸಕಿ ರೂಪ ಅವರೂ ಕೂಡ ಕೆಜಿಎಫ್‌ಗೆ ಯರಗೋಳು ಯೋಜನೆಯಿಂದ ನೀರು ಒದಗಿಸಲು ಕೋರಿದ್ದು, ಈ ಬಗ್ಗೆ ಚರ್ಚೆ ಮಾಡಿ ನೀರು ಸಿಕ್ಕರೆ ಎಷ್ಟೇ ಖರ್ಚಾದರೂ ನೀರು ಕೊಡುತ್ತೇವೆ ಎಂದು ಭರವಸೆ ನೀಡಿದರು.

**ಯರಗೋಳು ಯೋಜನೆಗೆ 23 ಸಾವಿರ ಕೋಟಿ ರೂ ವೆಚ್ಚ**

ಕೋಲಾರ, ಚಿತ್ರದುರ್ಗ ಬರಗಾಲಕ್ಕೆ ತುತ್ತಾಗಿರುವ ಜಿಲ್ಲೆಗಳು. ರಾಜಸ್ಥಾನ ಬಿಟ್ಟರೆ ಅತಿ ಹೆಚ್ಚು ಬರಗಾಲಕ್ಕೆ ತುತ್ತಾಗಿರುವ ರಾಜ್ಯ ಕರ್ನಾಟಕ. ಹೆಚ್.ಎನ್.ವ್ಯಾಲಿ, ಕೆ.ವ್ಯಾಲಿ, ಪುಷ್ಪಾವತಿ ವ್ಯಾಲಿ ಜಾರಿ ಮಾಡಿದ ನಾವು ಎತ್ತಿನಹೊಳೆ ಯೋಜನೆಯನ್ನು ಜಾರಿ ಮಾಡಲೇಬೇಕೆಂದು ಒತ್ತಾಯ ಮಾಡಿದ್ದು ಮಹಾಜನತೆ. ಯೋಜನೆ ಕಾರ್ಯಸಾಧುವಾಗಿದ್ದರೆ ಎಷ್ಟೇ ಖರ್ಚಾದರೂ ಯೋಜನೆ ಜಾರಿ ಮಾಡಲಾಗುವುದು ಎಂದು ಭರವಸೆ ನೀಡಲಾಗಿತ್ತು. ಯರಗೋಳು ಯೋಜನೆಗೆ 23 ಸಾವಿರ ಕೋಟಿ ರೂ ವೆಚ್ಚವಾಗಿದೆ. ಕೆ.ಸಿ.ವ್ಯಾಲಿಗೆ 1800 ಕೋಟಿ ರೂ ಹಾಗೂ ಹೆಚ್.ಎನ್.ವ್ಯಾಲಿಗೆ 800 ಕೋಟಿ ರೂ.ವೆಚ್ಚವಾಗಿದೆ. ಕೋಲಾರದಲ್ಲಿ ಕೆರೆಗಳು ತುಂಬಿರುವುದರಿಂದ ಹಣ್ಣು ತರಕಾರಿ, ರೇಷ್ಮೆ ಬೆಳೆಯಲಾಗುತ್ತಿದೆ. 1200 ಅಡಿಗಳವರೆಗೆ ಕೊರೆದರೂ ನೀರು ಸಿಗದ ಕಾಲವೊಂದಿತ್ತು. ಆದ್ದರಿಂದ ನೀರು ತುಂಬಿ ಅಂತರ್ಜಲ ಮಟ್ಟ ಹೆಚ್ಚಾಗಬೇಕು ಎಂದು ಒತ್ತಾಯಿಸಿದ್ದರು. ಇಲ್ಲಿ ಯಾವುದೇ ಪ್ರಮುಖ ನದಿ ಇಲ್ಲದಿರುವುದರಿಂದ



**ಕೋಲಾರ ಜಿಲ್ಲೆಯ ನೆರೆ ಮತ್ತು ಬರ ಪರಿಹಾರ ಕ್ರಮಗಳು:**

2023-24 ನೇ ಸಾಲಿನ ಪ್ರಾರಂಭದಲ್ಲಿ ಅಕಾಲಿಕ ಮಳೆಯಿಂದ ಕೋಲಾರ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆ ನಷ್ಟವಾಗಿದ್ದು, ಒಟ್ಟು 6205 ರೈತರುಗಳ ಖಾತೆಗೆ ರೂ. 786.3 ಲಕ್ಷಗಳ ಪರಿಹಾರಧನವನ್ನು ನೇರವಾಗಿ ಡಿಬಿಟಿ ಮೂಲಕ ಫಲಾನುಭವಿಗಳಿಗೆ ನೀಡಲಾಗಿರುತ್ತದೆ.

ಪ್ರಸ್ತುತ ಕೋಲಾರ ಜಿಲ್ಲೆಯ 6 ತಾಲ್ಲೂಕುಗಳನ್ನು ತೀವ್ರ ಬರಪೀಡಿತ ತಾಲ್ಲೂಕುಗಳೆಂದು ಸರ್ಕಾರವು ಘೋಷಿಸಿದ್ದು, ಬರ ಪರಿಹಾರ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಎಸ್‌ಡಿಆರ್‌ಎಫ್ ನಿಧಿಯಿಂದ ಈಗಾಗಲೇ ಕೋಲಾರ ಜಿಲ್ಲೆಗೆ ರೂ. 9.00 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗಿದೆ.

ಪ್ರತ್ಯೇಕವಾಗಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆಗೆ ತುರ್ತು ಕ್ರಮಗಳನ್ನು ಕೈಗೊಳ್ಳಲು ರೂ. 1.00 ಕೋಟಿ ಅನುದಾನವನ್ನು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.

ಜಾನುವಾರು ಮೇವಿಗೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮವಾಗಿ ಮಿನಿಕಿಟ್‌ಗಳನ್ನು ವಿತರಿಸುವುದಕ್ಕಾಗಿ ರೂ. 28.60 ಲಕ್ಷ ಅನುದಾನವನ್ನು ಪಶು ಸಂಗೋಪನಾ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.



Downloaded From:www.kpscvaani.com



ಕೆರೆಗಳು ತುಂಬುವುದು ಅವಶ್ಯ. ಕುಡಿಯುವ ನೀರು ನೀಡುವುದು ಅತ್ಯಂತ ಅಗತ್ಯ ಎಂದು ಮನಗಂಡು ಮಂಜೂರು ಮಾಡಲಾಯಿತು. ಯರಗೊಳ್ ಯೋಜನೆಗೆ ಅಂದು 13 ಕೋಟಿ ಇದ್ದದ್ದು, ಇಂದು 23 ಕೋಟಿ ರೂ. ವೆಚ್ಚವಾಗುತ್ತಿದೆ. ಎಲ್ಲಾ ಯೋಜನೆಗಳನ್ನು ಈ ಅವಧಿ ಮುಗಿಯುವುದರೊಳಗೆ ಪೂರ್ಣಗೊಳಿಸಲಾಗುವುದು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಭರವಸೆ ನೀಡಿದರು. ಹಾಗೆಯೇ ರಮೇಶ್ ಕುಮಾರ್, ನಂಜೇಗೌಡ, ನಾರಾಯಣಸ್ವಾಮಿ, ಕೆ.ಹೆಚ್.ಮುನಿಯಪ್ಪ, ಕೃಷ್ಣ ಬೈರೇಗೌಡ, ಇವರೆಲ್ಲರೂ ಕೆ.ಸಿ.ವ್ಯಾಲಿ ಆಗಬೇಕು, ಕೆರೆಗಳನ್ನು ತುಂಬಿಸಬೇಕು ಎಂದು ಒತ್ತಾಯಿಸುತ್ತಿದ್ದರು ಎಂಬುದನ್ನು ಅವರು ನೆನೆದರು.

ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ 2223 ಕೋಟಿ ರೂ.ಗಳ ಬೃಹತ್ ಮೊತ್ತದ ಕಾಮಗಾರಿಗಳಿಗೆ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ನೆರವೇರಿಸಲಾಯಿತು. ಬರಗಾರವಿದ್ದರೂ 2263 ಕೋಟಿ ರೂ.ಗಳನ್ನು ಜಿಲ್ಲೆಯ ಅಭಿವೃದ್ಧಿಗಾಗಿ ನೀಡಿದ್ದೇವೆ. ಕೆ.ಹೆಚ್.ಮುನಿಯಪ್ಪ ಅವರು ಸಚಿವರಾಗಿದ್ದಾಗ 83 ಕೋಟಿ ರೂ.ಗಳನ್ನು ಮಂಜೂರು ಮಾಡಿಸಿರುವುದಕ್ಕಾಗಿ ಹಾಗೂ ಯೋಜನೆಗೆ ಸಹಕರಿಸಿದ ಎಲ್ಲರಿಗೂ ಮುಖ್ಯಮಂತ್ರಿಗಳು ಧನ್ಯವಾದಗಳನ್ನು ಅರ್ಪಿಸಿದರು.

ಹಿಂದೆ ಪ್ರತ್ಯೇಕವಾಗಿದ್ದ ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟವನ್ನು ಒಂದು ಮಾಡಲಾಗಿತ್ತು. ಮತ್ತೆ ಹಿಂದಿನಂತೆ ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಪ್ರತ್ಯೇಕ ಹಾಲು ಮಹಾಮಂಡಲ ಸ್ಥಾಪನೆಗೆ ಮಂಜೂರಾತಿಯನ್ನು ನೀಡಲಾಯಿತು. ಪ್ರತಿ ತಿಂಗಳು 2 ತಿಂಗಳು ವಿದ್ಯುತ್ ಬಿಲ್ಲು ಕಟ್ಟಲಾಗುತ್ತಿತ್ತು. ಅದನ್ನು ತಪ್ಪಿಸಲು 50 ಎಕರೆ ಜಾಗದಲ್ಲಿ ಸ್ವಂತ ವಿದ್ಯುತ್ ಉತ್ಪಾದಿಸಲು ಸೋಲಾರ್ ಘಟಕ ಸ್ಥಾಪನೆಗೆ ಪರವಾನಗಿ ನೀಡಲಾಗಿದೆ. ಇದರಿಂದ ಕೋಲಾರ ಹಾಲು ಒಕ್ಕೂಟದಿಂದ ರೈತರಿಗೆ ಅನುಕೂಲವಾಗಲಿದೆ.

**ಕೋಲಾರ ಮಲೆನಾಡು ಆಗುವ ದಿನಗಳು ದೂರವಿಲ್ಲ**

ನೀರನ್ನು ಪರೀಕ್ಷೆ ಮಾಡಿಸಿದ್ದು ಹಾನಿಕಾರಕ ಪದಾರ್ಥ ಇಲ್ಲ ಎಂದು ವಿಶ್ವಸಂಸ್ಥೆಯವರು ಭೇಟಿ ನೀಡಿ ಮೆಚ್ಚುಗೆ ನೀಡಿದ್ದಾರೆ. ಕೇರಳದ ಸಮಾಲೋಚಕರೂ ಕೂಡ ಇದನ್ನು ಇತರೆ ರಾಜ್ಯಗಳಲ್ಲಿ ಅನುಕರಿಸಬೇಕು ಎಂದಿದ್ದಾರೆ. ಕೇವಲ ರಾಜಕೀಯಕ್ಕಾಗಿ ಸುಮ್ಮನೆ ಯಾರೂ ಕೂಡ ಟೀಕೆ ಮಾಡಬಾರದು ಎಂದರು. ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನರೇ ಮಾಲೀಕರು. ಜನರ ಸಮಸ್ಯೆಗಳಿಗೆ, ಜನರ ವಿರುದ್ಧವಾಗಿ, ದಾರಿತಪ್ಪಿಸುವ ಕೆಲಸವನ್ನು ಮಾಡಬಾರದು. ಕೋಲಾರ ಮಲೆನಾಡು ಆಗುವ ದಿನಗಳು ದೂರವಿಲ್ಲ. ಇದಕ್ಕೆ ಈ ಭಾಗದ ಜನಪ್ರತಿನಿಧಿಗಳು ಕಾರಣ ಎಂದರು.

ಕಳೆದ ವರ್ಷವೇ ಈ ಯೋಜನೆ ಜಾರಿಯಾಗಿದ್ದರೆ ಎಲ್ಲರಿಗೂ ನೀರು ದೊರಕುತ್ತಿತ್ತು. ನಮ್ಮ ಅವಧಿಯಲ್ಲಿ ಎತ್ತಿನಹೊಳೆ ಸಂಪೂರ್ಣ ಯೋಜನೆ ಮುಗಿಸಿ ಈ ಭಾಗದ ಜನರಿಗೆ ಕುಡಿಯುವ ನೀರನ್ನು ಕೊಟ್ಟೇಕೊಡುತ್ತೇವೆ. ನಮ್ಮನ್ನು ಟೀಕಿಸುವವರಿಗೆ ಹೊಟ್ಟೆ ಉರಿಯುವಂತೆ ಕೆಲಸವನ್ನು ಮಾಡುತ್ತೇವೆ ಎಂದರು.

ಸರ್ಕಾರವು ಕೆ.ಸಿ ವ್ಯಾಲಿ, ಹೆಚ್.ಎನ್ ವ್ಯಾಲಿ, ಪುಷ್ಪಾವತಿ ಕೆರೆಗಳನ್ನು ತುಂಬಿಸುವ ಕಾರ್ಯವನ್ನು ಮಾಡುತ್ತಿರುವುದರಿಂದಾಗಿ ಇಂದು ಕೋಲಾರ ಜಿಲ್ಲೆ ಹಸಿರಾಗುತ್ತಿದೆ. ಕಾರ್ಯಕ್ರಮದಲ್ಲಿ ಸಚಿವರಾದ ಡಾ: ಹೆಚ್.ಸಿ.ಮಹದೇವಪ್ಪ, ಕೆ.ಹೆಚ್.ಮುನಿಯಪ್ಪ, ಶಾಸಕರು ಹಾಗೂ ಕೋಲಾರ-ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ವೈ.ನಂಜೇಗೌಡ ಹಾಗೂ ಶಾಸಕರಾದ ಎಸ್.ಎನ್. ನಾರಾಯಣಸ್ವಾಮಿ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.


Downloaded From:www.kpscvaani.com





# ಮಾಹಿತಿಗಳ ಆಗರ: 2023ನೇ ಸಾಲಿನ ಕೃಷಿ ಮೇಳ

ಉಮೇಶ್ ಕೊಲಿಗೆರೆ

**ನವೆಂಬರ್ 17 ರಿಂದ ನಾಲ್ಕು ದಿನಗಳ ಕಾಲ ಜರುಗಿದ ಕೃಷಿ ಮೇಳವು ಜನಸಾಮಾನ್ಯರಿಗೆ ಮತ್ತು ರೈತರಿಗೆ ಮಾಹಿತಿಯ ಆಗರವಾಗಿತ್ತು.**

ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ನಾಣ್ಣುಡಿ ಎಂದೆಂದಿಗೂ ನಿತ್ಯನೂತನ. ಊಟ ಬಲ್ಲವನಿಗೆ ಆಹಾರ ಮತ್ತು ಅದರ ಪದಾರ್ಥಗಳ ತಿಳುವಳಿಕೆ ಅತ್ಯಗತ್ಯವಾಗಿದೆ. ಬೆಂಗಳೂರಿನಲ್ಲಿ ಪ್ರತಿವರ್ಷ ನಡೆಯುವ ಕೃಷಿ ಮೇಳಕ್ಕೆ ಒಮ್ಮೆ ಭೇಟಿ ನೀಡಿದರೆ ಆಹಾರ, ಕೃಷಿ ಉತ್ಪನ್ನಗಳ ತಿಳುವಳಿಕೆಯಷ್ಟೆ ಅಲ್ಲ, ಖುದ್ದು ಕೃಷಿಕರಾಗುವ ಅಥವಾ ಕೃಷಿ ಆಧಾರಿತ ಉದ್ಯಮಿಯಾಗಲು ಪ್ರೇರಣೆ ದೊರೆಯುತ್ತದೆ.

ನವೆಂಬರ್ 17 ರಿಂದ 20ರವರೆಗೂ ನಡೆದ 2023ನೇ ಸಾಲಿನ ಕೃಷಿ ಮೇಳ ಮಾಹಿತಿಗಳ ಆಗರವಾಗಿತ್ತು. 1966ರಲ್ಲಿ ಕ್ಷೇತ್ರೋತ್ಸವ ಎಂದು ಆರಂಭವಾದ ತಿಳುವಳಿಕೆಯ ಜಾತ್ರೆ ಕಾಲ ಕ್ರಮೇಣ ಕೃಷಿ ಮೇಳವಾಗಿ ಪರಿವರ್ತನೆಯಾಗಿದೆ. ಬೆಳೆ ಬೆಳೆಯುವ ಮಾಹಿತಿ ನೀಡುವುದಕ್ಕಷ್ಟೆ ಸೀಮಿತಗೊಳ್ಳದ ಕೃಷಿ ಮೇಳವು ಸಮಗ್ರ ಮಾಹಿತಿಯ ಕಣಜವಾಗಿತ್ತು. ಕೃಷಿ ಉತ್ಪಾದನೆ, ಮಾರುಕಟ್ಟೆ ಮೌಲ್ಯವರ್ಧನೆ ಸೇರಿದಂತೆ ಅನೇಕ ಆಯಾಮಗಳಲ್ಲಿ ತಿಳುವಳಿಕೆ ನೀಡುವಲ್ಲಿ ಯಶಸ್ವಿಯಾಯಿತು.

ಈ ಬಾರಿಯ ಕೃಷಿ ಮೇಳದಲ್ಲಿ ಕೃಷಿ ಸಂಬಂಧಿತ ನೂತನ ತಂತ್ರಜ್ಞಾನಗಳ ಪರಿಚಯ, ಜಲಾನಯನ ನಿರ್ವಹಣೆ, ತೋಟಗಾರಿಕೆ ಬೆಳೆಗಳ ನಿಖರ ಕೃಷಿ ಪ್ರಾತ್ಯಕ್ಷಿಕೆಗಳು, ಪಶುಸಂಗೋಪನೆ, ಹೈನುಗಾರಿಕೆ, ಕುರಿ, ಕೋಳಿ ಹಾಗೂ ಮೀನು ಸಾಕಾಣಿಕೆ, ಸಿರಿಧಾನ್ಯಗಳ ಮಹತ್ವ, ಔಷಧೀಯ, ಸುಗಂಧಯುಕ್ತ ಸಸ್ಯಗಳ



Downloaded From:www.kpscvaani.com

ಕೃಷಿ, ನೂತನ ತಳಿಗಳ ಪ್ರಾತ್ಯಕ್ಷಿಕೆ, ಮಳೆ, ಮೇಲ್ಛಾವಣಿ ನೀರಿನಕೊಯ್ಲು, ಸಮಗ್ರ ಪೀಡೆರೋಗ, ಪೋಷಕಾಂಶಗಳ ನಿರ್ವಹಣೆ, ಮಣ್ಣು ಪರೀಕ್ಷೆಗನುಗುಣವಾಗಿ ಬೆಳೆ ಸ್ಪಂದನೆ ಪ್ರಾತ್ಯಕ್ಷಿಕೆ, ಕೃಷಿಯಲ್ಲಿ ಡ್ರೋನ್ ಬಳಕೆ, ಜೈವಿಕ–ನವೀಕರಿಸಲ್ಪಡುವ ಇಂಧನಗಳು, ಸಾವಯವ ಕೃಷಿ ಪದ್ಧತಿಗಳು, ಮಾರುಕಟ್ಟೆ ನೈಪುಣ್ಯತೆ, ಕೊಯ್ಲಿನೋತ್ತರ ತಾಂತ್ರಿಕತೆಗಳು, ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಬಿತ್ತನೆ ಬೀಜಗಳ ಮೊಳಕೆ ಪರೀಕ್ಷೆ, ಶೇಖರಣೆ, ಸಮಗ್ರ ಬೇಸಾಯ ಪದ್ಧತಿ ಪ್ರಾತ್ಯಕ್ಷಿಕೆಗಳು, ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ, ಹವಾಮಾನ ಚತುರ ಕೃಷಿ, ಖುಷ್ಕಿ ಬೇಸಾಯಕ್ಕೆ ಸೂಕ್ತವಾದ ಬೆಳೆ ಪದ್ಧತಿಗಳು, ಹನಿ–ತುಂತುರು ನೀರಾವರಿ, ಮಣ್ಣು ರಹಿತ ಕೃಷಿ, ರೈತರ ಆವಿಷ್ಕಾರಗಳು ಮತ್ತು ಕೃಷಿ ನವೋದ್ಯಮಗಳ ಬಗ್ಗೆ ಸವಿಸ್ತಾರವಾದ ವಿವರಣೆ ನೀಡಲಾಗಿತ್ತು.

ಸಸ್ಯ ರೋಗಶಾಸ್ತ್ರ, ಕೃಷಿ ಇಂಜಿನಿಯರಿಂಗ್ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗಿದೆ. ಪ್ರಗತಿಪರ ಹಾಗೂ ಕೃಷಿ ಸಾಧಕರನ್ನು ಸನ್ಮಾನಿಸುವ ಜೊತೆಗೆ ಪರಸ್ಪರ ಅನುಭವಗಳ ವಿನಿಮಯಕ್ಕೂ ವೇದಿಕೆ ಕಲ್ಪಿಸಿಕೊಡಲಾಗಿತ್ತು. ನಾಲ್ಕು ದಿನಗಳ ಮೇಳಕ್ಕೆ ಮೊದಲ ದಿನ ಒಂದು ಲಕ್ಷ 31 ಸಾವಿರ ಜನ ಭೇಟಿ ನೀಡಿದರೆ, ಎರಡನೇ ದಿನ 5.48, ಮೂರನೇ ದಿನ ಐಸಿಸಿ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿ ಇದ್ದು, ಫೈನಲ್‌ನಲ್ಲಿ ಭಾರತ ಆಸ್ಟ್ರೇಲಿಯಾ ನಡುವಿನ ಕುತೂಹಲಕಾರಿ ಪಂದ್ಯವಿದ್ದರೂ ಅದನ್ನು ಮೀರಿ ಐದು ಲಕ್ಷ 10 ಸಾವಿರ ಜನ ಕೃಷಿ ಮೇಳಕ್ಕೆ ಭೇಟಿ ನೀಡಿದ್ದರು. ನಾಲ್ಕನೆ ದಿನ ವಾರದ ಆರಂಭದ ಸೋಮವಾರವಾಗಿದ್ದರೂ ಮೂರು ಲಕ್ಷ 78 ಸಾವಿರ ಜನರು ಮೇಳಕ್ಕೆ ಆಗಮಿಸಿದ್ದರು. ನಾಡಿನಾದ್ಯಂತ ವಿವಿಧ ಜಿಲ್ಲೆಗಳಿಂದ ಸಾರಿಗೆ ಬಸ್‌ಗಳಲ್ಲಿ, ಖಾಸಗಿ ವಾಹನಗಳಲ್ಲಿ ರೈತರು ತಂಡೋಪತಂಡವಾಗಿ ಆಗಮಿಸಿ ಮಾಹಿತಿ ಪಡೆದುಕೊಂಡರು.

ಉದ್ಯಮ–ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಬಂಡವಾಳ ಹೂಡಿಕೆದಾರರ ಸಮಾವೇಶ, ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಹಲವು ಟೆಕ್ ಸಮಿಟ್‌ಗಳು ಪದೇ ಪದೇ ನಡೆಯುತ್ತವೆ. ಅವುಗಳನ್ನು ಮೀರಿ ಕೃಷಿ ಮೇಳಕ್ಕೆ ಜನ ಭೇಟಿ ನೀಡುವ ಮೂಲಕ ದಾಖಲೆ ಬರೆಯುತ್ತಿದ್ದಾರೆ. ಈ ವರ್ಷದ ಮೇಳದಲ್ಲಿ





**ಹಸಿರು ಕ್ರಾಂತಿ ನಿರಂತರವಾಗಿ ಆಗಬೇಕು**

ಹಸಿರು ಕ್ರಾಂತಿ ನಿರಂತರವಾಗಿ ಆಗಬೇಕು. ಇದು ಆಗಬೇಕಾದರೆ ಹೊಸ ತಳಿಗಳು, ಹೊಸ ಔಷಧ, ಮಣ್ಣಿನ ಫಲವತ್ತತೆ, ತಂತ್ರಜ್ಞಾನ, ರೈತರಿಗೆ ನ್ಯಾಯಯುತ ಬೆಲೆ, ಆಹಾರ ಸಂಗ್ರಹಣೆಗೆ ಗೋದಾಮುಗಳು ಆಗಬೇಕು. ಆಗ ಮಾತ್ರ ಸುಸ್ಥಿರವಾದ ಕೃಷಿ ಬೆಳವಣಿಗೆ ಆಗುತ್ತದೆ. ಕೃಷಿ ವಿಶ್ವವಿದ್ಯಾಲಯವು ಕೇವಲ ಕೃಷಿ ಪದವೀಧರರನ್ನು ತಯಾರು ಮಾಡುವ ಸಂಸ್ಥೆಯಲ್ಲ. ಕೃಷಿ ವಿದ್ಯಾರ್ಥಿಗಳನ್ನು ತಯಾರಿಸುವ ಜೊತೆಗೆ ಸಂಶೋಧನೆಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಕೃಷಿಯು ಲಾಭದಾಯಕವಾಗದೇ ಹೋದರೆ ಬಹಳಷ್ಟು ರೈತರು ಕೃಷಿಯನ್ನು ಬಿಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಹಾಗಾಗಿ ಕೃಷಿ ಮಾಡಿ ಬದುಕಬಹುದು ಎಂಬ ಪರಿಸ್ಥಿತಿ ನಿರ್ಮಿಸುವ ಕಡೆಗೆ ಕೃಷಿ ವಿವಿಗಳಲ್ಲಿ ಕೆಲಸ ಮಾಡುವ ವಿಜ್ಞಾನಿಗಳು, ಅಧ್ಯಾಪಕರು ಹೆಚ್ಚಿನ ಒತ್ತು ನೀಡಬೇಕು.

ಈ ಬಾರಿ 223 ತಾಲ್ಲೂಕುಗಳಲ್ಲಿ ಬರಗಾಲ ಘೋಷಣೆಯಾಗಿದೆ. ನಮ್ಮ ರಾಜ್ಯವು ಬರಗಾಲಕ್ಕೆ ತುತ್ತಾಗುತ್ತಲೇ ಇರುತ್ತದೆ. ಹಾಗಾಗಿ ನೀರು ಕಡಿಮೆ ಇದ್ದಾಗಲೂ ಬೆಳೆಯುವಂತಹ ಮತ್ತು ರೋಗನಿರೋಧಕ ಶಕ್ತಿ ಇರುವಂತಹ ತಳಿಗಳನ್ನು ಅಭಿವೃದ್ಧಿ ಪಡಿಸಬೇಕು. ರೈತರು ವರ್ಷ ಪೂರ್ತಿ ಜಮೀನಿನಲ್ಲಿ ದುಡಿಯುತ್ತಾರೆ. ಈ ಶ್ರಮಜೀವಿಗಳ ಜೀವನವನ್ನು ಹಸನುಗೊಳಿಸಲು ಕೃಷಿ ವಿವಿಗಳು ಸಂಶೋಧನೆಗೆ ಹೆಚ್ಚಿನ ಒತ್ತು ನೀಡಬೇಕು.

**–ಸಿದ್ದರಾಮಯ್ಯ, ಮುಖ್ಯಮಂತ್ರಿಗಳು**



Downloaded From:www.kpscvaani.com

5 ಕೋಟಿ 28 ಲಕ್ಷ ರೂಪಾಯಿ ವಹಿವಾಟು ನಡೆದಿದೆ. ಕೈಗಾರಿಕೆಗಿಂತಲೂ ಹೆಚ್ಚು ಉದ್ಯೋಗ ಸೃಷ್ಟಿಯ ಕ್ಷೇತ್ರವಾಗಿರುವ ಕೃಷಿಯ ಬಗ್ಗೆ ಎಷ್ಟೆ ಮೂಗೆಳೆದರೂ ಜನರಲ್ಲಿ ಆಸಕ್ತಿ ಮಾತ್ರ ಕಡಿಮೆಯಾಗಿಲ್ಲ.

ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟ ಕೃಷಿ ಸಾಧಕರ ಸಾಧನೆಗಳನ್ನು ಅವಲೋಕಿಸಿದರೆ ಎಂತವರಿಗಾದರೂ ತಾವು ಕೃಷಿಕರಾಗಬೇಕು ಎಂಬ ಅಭಿಲಾಷೆಗಳು ಗರಿಗೆದರುವುದು ಸಹಜ. ಬೇಸಾಯ ನಂಬಿ ಬದುಕು ಅಸಾಧ್ಯ ಎಂಬುದಕ್ಕೆ ಅಪವಾದವೆಂಬಂತೆ ಭೂಮಿಯನ್ನೆ ನಂಬಿ ವರ್ಷಕ್ಕೆ ಲಕ್ಷಾಂತರ ರೂಪಾಯಿ ದುಡಿಯುವ ಮೂಲಕ ಸ್ವಾವಲಂಬಿಯಾಗಿರುವುದು ನಿಜಕ್ಕೂ ಯಶೋಗಾಥೆಯೇ ಸರಿ.

ಮೂಲ ಕೃಷಿಯ ಜೊತೆಗೆ ಮಿಶ್ರ ಬೇಸಾಯ, ಉಪಕಸುಬುಗಳು, ಉಪಕೃಷಿ, ಉಪಉತ್ಪನ್ನ ಎಂದೆಲ್ಲಾ ಒಂದಕ್ಕೊಂದು ಸೇರಿ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡವರ ಸಂಖ್ಯೆ ಅಪಾರವಾಗಿದೆ. ಅವರಲ್ಲಿ ಎಲ್ಲರೂ ಕೃಷಿ ವಿಶ್ವವಿದ್ಯಾಲಯ, ಕೃಷಿ, ತೋಟಗಾರಿಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ತಂತ್ರಜ್ಞರೊಂದಿಗೆ ನಿರಂತರ ಸಂಪರ್ಕ ನಿರ್ವಹಣೆ ಮಾಡಿ ಸಲಹೆ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ.

ಕೃಷಿಗೆ ಪ್ರಸ್ತುತ ದಿನಮಾನಗಳಲ್ಲಿ ನೀರಿನ ಕೊರತೆ ಹಾಗೂ ಮಾನವ ಸಂಪನ್ಮೂಲದ ಅಲಭ್ಯತೆ ಸವಾಲಾಗಿದೆ. ಇಂತಹ ಕಾಲಾನುಕ್ರಮದ ಸಂದಿಗ್ಧತೆಗೆ ವಿಶ್ವವಿದ್ಯಾಲಯಗಳು ಪರಿಹಾರ ಒದಗಿಸಬಲ್ಲವು. ದೇಶದಲ್ಲೇ ರಾಜಸ್ಥಾನ ಹೊರತು ಪಡಿಸಿದರೆ ಕರ್ನಾಟಕವೇ ಹೆಚ್ಚು ಒಣ ಭೂಮಿ ಹೊಂದಿರುವ ರಾಜ್ಯವಾಗಿದೆ. ಇಲ್ಲಿ ಮೂರರಿಂದ ನಾಲ್ಕು ವರ್ಷಕ್ಕೆ ಬರ ಪರಿಸ್ಥಿತಿ ಮರುಕಳಿಸುತ್ತಲೇ ಇರುತ್ತೆ. ಸಮಶೀತೋಷ್ಣ ಹಾಗೂ ಕೃಷಿಗೆ ಯೋಗ್ಯ ಹವಾಮಾನ ಹೊಂದಿದ್ದರೂ, ಅತಿವೃಷ್ಟಿ, ಅನಾವೃಷ್ಟಿ ಎರಡು ಸಮಾನ ಸಮಸ್ಯೆಗಳಾಗಿವೆ.  ಜೊತೆಗೆ ಬದಲಾಗುವ ಹವಮಾನ ವೈಪರಿತ್ಯಕ್ಕೆ ಅನುಗುಣವಾಗಿ ಎದುರಾಗುವ ಸವಾಲುಗಳಿಗೆ ಎದೆಯೊಡ್ಡುವಂತೆ ಕೃಷಿ ವ್ಯವಸ್ಥೆಯನ್ನು ಸಜ್ಜುಗೊಳಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯದ ಕೃಷಿ ವಿಶ್ವವಿದ್ಯಾಲಯಗಳು ಸಾಕಷ್ಟು ಬೇವರಿಳಿಸುತ್ತಿವೆ. ಒಣ ಭೂಮಿ, ಬರ ಸನ್ನಿವೇಶಕ್ಕೆ ತಕ್ಕಂತಹ ತಳಿಗಳ ಸಂಶೋಧನೆ ನಿರಂತರವಾಗಿ ನಡೆಯುತ್ತಿದೆ.

ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯ ಅಭಿವೃದ್ಧಿ ಪಡಿಸಿರುವ ಒಟ್ಟು ಐದು ತಳಿಗಳನ್ನು ಪ್ರಸಕ್ತ ಕೃಷಿಮೇಳದಲ್ಲಿ ಬಿಡುಗಡೆ ಮಾಡಲಾಯಿತು. ಬಿತ್ತನೆಯಾದ 105 ರಿಂದ 110 ದಿನಗಳಲ್ಲಿ ಕಟಾವಿಗೆ ಬರುವ ಅಲ್ಪಾವಧಿಯ ರಾಗಿ ಎಂ.ಎಲ್-322 ತಳಿಯನ್ನು ಹಸಿರು ಕ್ರಾಂತಿಗೆ ಸಮರ್ಪಿಸಲಾಗಿದೆ. ಡಾ.ಮೋಹನ್‌ರಾವ್ ಅವರು ಅಭಿವೃದ್ಧಿ ಪಡಿಸಿರುವ ರಾಗಿಯ ಪೈರು ಗಟ್ಟಿಮುಟ್ಟಾದ ಕಾಂಡವನ್ನು ಹೊಂದಿದ್ದು, ತೆನೆ ನೆಲಕ್ಕೆ ಬೀಳುವುದನ್ನು ತಡೆಯುತ್ತದೆ. ಒಕ್ಕಣೆ ಮಾಡುವಾಗ ಕಡಿಮೆ ಹೊಟ್ಟಿನ ಧೂಳು. ಬೆಂಕಿ ರೋಗ ನಿರೋಧಕ ಮತ್ತು ಬರ ಸಹಿಷ್ಣುತೆಯನ್ನು ಹೊಂದಿದೆ. ಪ್ರತಿ ಎಕರೆ ನೀರಾವರಿಯಲ್ಲಿ 15–20 ಕ್ವಿಂಟಾಲ್, ಖುಷ್ಕಿಯಲ್ಲಿ 10–12 ಕ್ವಿಂಟಾಲ್ ಇಳುವರಿ ನೀಡುವ ಸಾಮರ್ಥ್ಯ ಹೊಂದಿದೆ.

ಪ್ರಸ್ತುತ ದಿನಗಳಲ್ಲಿ ಸಿರಿಧಾನ್ಯ ಹೆಚ್ಚು ಮಹತ್ವ ಪಡೆದುಕೊಂಡಿವೆ. ಈ ಬಾರಿಯ ಕೃಷಿ ಮೇಳದ ಧ್ಯೇಯ ವಾಕ್ಯವೇ 'ಆಹಾರ–ಆರೋಗ್ಯ–ಆದಾಯಕ್ಕಾಗಿ ಸಿರಿಧಾನ್ಯಗಳು' ಎಂಬುದಾಗಿದೆ. ಈ ಹಿನ್ನೆಲೆಯಲ್ಲಿ ಸಿರಿಧಾನ್ಯ ಪ್ರಬೇಧವಾದ ಸಾಮೆ–ಜಿ.ಪಿ.ಯು.ಎಲ್–11 ತಳಿಯನ್ನು ಕೃಷಿ ವಿಜ್ಞಾನಿ ಡಾ: ಟಿ.ನಾಗರಾಜು ಸಂಶೋಧಿಸಿದ್ದಾರೆ. ಬಿತ್ತನೆಯಾದ 90–95 ದಿನಗಳ ನಂತರ ಕಟಾವಿಗೆ ಬರುವ ಅಲ್ಪಾವಧಿಯ  ಈ ತಳಿ ಮಧ್ಯಮ ಸಾಂದ್ರತೆ ಮತ್ತು ಆರ್ಕಿಡ್ ಆಕಾರದ ತೆನೆ ಹೊಂದಿದೆ. ಬೀಜಗಳು ಅಂಡಾಕಾರವಿದ್ದು ಬೂದು ಬಣ್ಣದಿಂದ ಕೂಡಿವೆ. ಎಲೆ ಅಂಗಮಾರಿ ರೋಗ ಮತ್ತು ತೆನೆಕಾಡಿಗೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಪ್ರತಿ ಎಕರೆಗೆ 6–8 ಕ್ವಿಂಟಾಲ್ ಬೆಳೆಯುವ ಸಾಮರ್ಥ್ಯ ಹೊಂದಿದೆ. ಮತ್ತೊಂದು ಸಿರಿಧಾನ್ಯವಾದ ಬರಗು ಜಿ.ಪಿ.ಯು.ಪಿ–32 ತಳಿಯನ್ನು ನಾಗರಾಜ್ ಅವರೇ ಅಭಿವೃದ್ಧಿ ಪಡಿಸಿದ್ದಾರೆ. ಇದು 80–85 ದಿನಗಳಲ್ಲಿ ಕಟಾವಿಗೆ ಬರಲಿದ್ದು, ಬೀಜಗಳು ಅಂಡಾಕಾರವಿದ್ದು ಹಳದಿ ಬಣ್ಣದಿಂದ ಕೂಡಿವೆ. ಎಲೆ ತೆನೆಕಾಡಿಗೆ ರೋಗ ಮತ್ತು






Downloaded From:www.kpscvaani.com

## ಕೃಷಿಯನ್ನು ಲಾಭದಾಯಕವಾಗಿಸಬೇಕು

ರೈತರು ವೈಜ್ಞಾನಿಕ ಹಾಗೂ ಸಮಗ್ರ ಬೇಸಾಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಕೃಷಿಯನ್ನು ಲಾಭದಾಯಕ ವೃತ್ತಿಯನ್ನಾಗಿ ಪರಿವರ್ತಿಸಲು ಕೃಷಿ ವಿವಿಗಳು ನೆರವಾಗಬೇಕು. ರೈತರ ಬದುಕನ್ನು ಸ್ಥಿರವಾಗಿಸಲು ರಾಜ್ಯ ಸರ್ಕಾರವು ಸದಾ ನೆರವಿಗೆ ನಿಲ್ಲಲಿದೆ. ಬೆಂಗಳೂರು ಕೃಷಿ ವಿವಿಯು 32 ಕ್ಕೂ ಹೆಚ್ಚು ತಂತ್ರಜ್ಞಾನವನ್ನು 5 ಹೊಸ ತಳಿಗಳನ್ನು ಈ ವರ್ಷ ಕೃಷಿಕರಿಗೆ ಪರಿಚಯಿಸಿರುವುದು ಅಭಿನಂದನಾರ್ಹವಾದುದು.

–ಎನ್. ಚಲುವರಾಯಸ್ವಾಮಿ, ಕೃಷಿ ಸಚಿವರು




ಕಂದು ಚುಕ್ಕೆ ರೋಗಕ್ಕೆ ನಿರೋಧಕತೆಯನ್ನು ಹೊಂದಿದೆ. ಎಕರೆಗೆ 7–8 ಕ್ವಿಂಟಾಲ್ ಇಳುವರಿ ನೀಡಲಿದೆ.

ಎಣ್ಣೆಕಾಳುಗಳಲ್ಲಿ ಮುಂಚೂಣಿಯಲ್ಲಿರುವ ಸೂರ್ಯಕಾಂತಿ ಕೆ.ಬಿ.ಎಸ್.ಹೆಚ್–85 ತಳಿಯನ್ನು ಡಾ: ಎಸ್.ಡಿ. ನೆಹರು ಅವರು ಅಭಿವೃದ್ಧಿ ಪಡಿಸಿದ್ದಾರೆ. 95–98 ದಿನಗಳಲ್ಲಿ ಕಟಾವಿಗೆ ಬರುವ ತಳಿ ಕೇದಿಗೆ ರೋಗ ನಿರೋಧಕ ಶಕ್ತಿ ಹೊಂದಿದೆ. ಎಕರೆಗೆ ನೀರಾವರಿಯಲ್ಲಿ 9 ರಿಂದ 10.5, ಖುಷ್ಕಿಯಲ್ಲಿ 6–7 ಕ್ವಿಂಟಾಲ್ ಇಳುವರಿಯ ಸಾಮರ್ಥ್ಯ ಹೊಂದಿದೆ. ತೈಲ ಸಾಮರ್ಥ್ಯ 3.6 ರಿಂದ 4.0 ಕ್ವಿಂಟಾಲ್ ಆಗಿರುವುದರಿಂದ ಆರ್ಥಿಕವಾಗಿ ಹೆಚ್ಚು ಲಾಭ ತಂದುಕೊಡಲಿದೆ.

ಮೂರು ವರ್ಷಕ್ಕೆ ಫಸಲು ಆರಂಭಿಸುವ ಕೆಂಪುತೊಳೆಯ ಜಿಕೆವಿಕೆ ಕೆಂಪು ಹಲಸು ತಳಿಯನ್ನು ಕೃಷಿ ವಿಜ್ಞಾನಿ ಡಾ: ಎಸ್.ಶಾಮಲಮ್ಮ ಅಭಿವೃದ್ಧಿ ಪಡಿಸಿದ್ದಾರೆ. 10 ವರ್ಷದ ವೇಳೆಗೆ ಪ್ರತಿ ಮರ 120–150 ಹಣ್ಣುಗಳನ್ನು ನೀಡಲಿದೆ. ಗಿಡ್ಡದಾದ ಗಿಡದಲ್ಲೇ ಹಣ್ಣುಗಳು ಜೋತಾಡುವುದನ್ನು ಕಾಣಬಹುದಾಗಿದೆ. ಕೆ.ಜಿ ಹಣ್ಣಿಗೆ 600 – 700 ಗ್ರಾಂ ತೂಕದ ತಾಮ್ರಕಡು ಕೆಂಪು ಬಣ್ಣದ ಉದ್ದವಾದ ರುಚಿಯಾದ ತೊಳೆಗಳು ದೊರೆಯುತ್ತವೆ. ಇದು ಅಂಟುರಹಿತ ತಳಿಯಾಗಿದ್ದು ಉಪಕೃಷಿಗೆ ಹೆಚ್ಚು ಪ್ರಸ್ತುತವಾಗಿದೆ. ಹಾಗೆಯೇ ಕೃಷಿ ಮೇಳದ ಹಿನ್ನೆಲೆಯಲ್ಲಿ ಸಿದ್ಧ ಪಡಿಸಿರುವ ತಾಕುಗಳ ಪ್ರಾತ್ಯಕ್ಷಿಕೆಯಲ್ಲಿ ನಾನಾ ರೀತಿಯ ಬೆಳೆ ಮಾದರಿಯನ್ನು ವಿವರಿಸಲಾಗಿತ್ತು.

ತೋಟಗಾರಿಕೆ ವಿಭಾಗದ ಪ್ರಾಧ್ಯಾಪಕರಾದ ಡಾ: ಕೆ.ಎನ್.ಶ್ರೀನಿವಾಸಪ್ಪ ಅವರ ಪ್ರಕಾರ, ಹಸಿರು ಮನೆ, ಪಾಲಿಹೌಸ್ ಅಥವಾ ನೆಟ್‌ಹೌಸ್‌ನಲ್ಲಿ ಬೆಳೆಯುವ ಹಲವಾರು ಬೆಳೆಗಳು ರೈತರ ಆದಾಯವನ್ನು ದುಪ್ಪಟ್ಟು ಮಾಡಲಿವೆ. ಸಾಮಾನ್ಯವಾದ ದುಂಡು ಅಥವಾ ಸಣ್ಣ ಬದನೆಗಿಂತಲೂ ಅರ್ಧ ಕೆಜಿಯಿಂದ ಒಂದು ಕೆಜಿವರೆಗೂ ತೂಗುವ ಬಾಟಲ್ ಬದನೆ ಕೃಷಿ ಆಕರ್ಷಣೆಯವಾಗಿತ್ತು. ಮೂರು ತಿಂಗಳಿಗೆ ಫಸಲು ಆರಂಭಿಸುವ ಬಾಟಲ್ ಬ್ರಿಂಜಾಲ್ ತಳಿ ಎಕರೆಗೆ 150 ಕ್ವಿಂಟಾಲ್ ಇಳುವರಿ ನೀಡಲಿದೆ. ನೆರಳು ಪರದೆಯಲ್ಲಿ ಇನ್ನೂ ಹೆಚ್ಚಿನ ಇಳುವರಿ ನೀಡಲಿದೆ. ಇತ್ತೀಚೆಗೆ ದಪ್ಪ ಬದನೆಕಾಯಿ ಆಹಾರ ಪದಾರ್ಥಗಳು ಹೆಚ್ಚು ಜನಪ್ರಿಯತೆ ಪಡೆಯುತ್ತಿರುವುದರಿಂದ ಬಾಟಲ್ ಬದನೆ ರೈತರ ಕಿಸೆ ತುಂಬಿಸಲಿದೆ.

ನಾಟಿ, ಆಪ್ಪಲ್ ಟಮೋಟೋಗಳನ್ನು ಹಿಂದಿಕ್ಕಿ ಗೊಂಚಲಾಗಿ ಬೆಳೆಯುವ ಚೆರ‍್ರಿ ಟಮೋಟೋ ಹೆಚ್ಚು ಪ್ರಖ್ಯಾತಿ ಪಡೆಯುತ್ತಿವೆ. ಫಾಸ್ಟ್‌ಫುಡ್ ಸೇರಿದಂತೆ ಅನೇಕ ಆಹಾರ ಪದಾರ್ಥಗಳಲ್ಲಿ ಸಣ್ಣಗಾತ್ರದ ಹುಳಿಯಾದ ಚೆರ‍್ರಿ ಟಮೋಟೋ ಬಳಕೆ ಮಾಡುವುದು ರೂಢಿಯಾಗುತ್ತಿದೆ. ಹಾಗಾಗಿ ಇವುಗಳ ಬೇಡಿಕೆಯೂ ವೃದ್ಧಿಸುತ್ತಿದೆ. ಹಿಂದೆ ರಾಗಿ ಹೊಲದಲ್ಲಿ ಕಟಾವಿನ ನಂತರ ಬೆಳೆದಿರುತ್ತಿದ್ದ ಟಮೋಟೋ ಗಿಡಗಳಲ್ಲಿ ಇಳಿ ಬಿದ್ದಿರುತ್ತಿದ್ದ ಚಿಟ್ಟೆ ಟಮೋಟೋಗಳನ್ನು ಕಿತ್ತು ಬಾಯಿಗೆ ಹಾಕಿಕೊಂಡು ಚಪ್ಪರಿಸಿದವರಿಗೆ ನೈಜ್ಯ ಸ್ವಾದದ ಅರಿವಿರುತ್ತದೆ. ಅದೇ ಮಾದರಿಯ ಚೆರ‍್ರಿ ಟಮೋಟೋಗಳನ್ನು ಗಿಡ್ಡ ಗಿಡಗಳ ಬದಲಾಗಿ ಎತ್ತರದ ಗಿಡಗಳಲ್ಲಿ ಬೆಳೆಯಲಾಗುತ್ತಿದೆ.

ಟಮೋಟೋ ಬೆಳೆದ ನಂತರ ಮುಂದಿನ ಕೃಷಿಗೆ ಯಾವ ಬೆಳೆ ಬೆಳೆಯಬೇಕು ಎಂಬುದು ಪ್ರಮುಖವಾದ ವಿಷಯವಾಗಿದೆ. ವಿಜ್ಞಾನಿಗಳ ಪ್ರಕಾರ ಟಮೋಟೋ ಬಳಿಕ ದೊಣ್ಣೆ ಮೆಣಸಿನಕಾಯಿ, ಬದನೆಕಾಯಿ ಬೆಳೆಯುವುದರಿಂದ ರೋಗಳ ಅಥವಾ ಕೀಟಬಾಧೆ ಹೆಚ್ಚುತ್ತದೆ. ಮಣ್ಣಿನ ಹದ ಹಾಗೂ ಫಲವತ್ತತೆ ಸಮಸ್ಥಿತಿಗೆ ಮರಳಲು ಸಹಕಾರಿಯಾಗುವುದಿಲ್ಲ. ಹಾಗಾಗಿ ವೈಜ್ಞಾನಿಕ ಬೆಳೆ ಪರಿವರ್ತನೆ ಅತ್ಯಗತ್ಯ. ಇದಕ್ಕೆ ಕೃಷಿ ತಜ್ಞರನ್ನು ಸಂಪರ್ಕಿಸುವುದು ಹೆಚ್ಚು ಪ್ರಯೋಜನಕಾರಿಯಾಗಿದೆ.

ಕೃಷಿ ಮೇಳ ದೇಶಿಯ ಕೃಷಿ ಪದ್ಧತಿ ಜೊತೆಗೆ ವಿದೇಶಿ ಮಾದರಿಗಳನ್ನು ಪರಿಚಯಿಸಿತು. ಮಿಶ್ರ ಬೇಸಾಯ ಪದ್ಧತಿಯಲ್ಲಿ ಒಂದೇ ಪಾಲಿಹೌಸ್‌ನಲ್ಲಿ ಹದಿನಾಲ್ಕಕ್ಕೂ ಹೆಚ್ಚು ಸೊಪ್ಪು ತರಕಾರಿಗಳನ್ನು ಬೆಳೆದು ರೈತರಿಗೆ ಪ್ರಾತ್ಯಕ್ಷಿಕೆ ನೀಡಲಾಯಿತು.

### ಆಕರ್ಷಕ ಮಾಹಿತಿ ಪ್ರದರ್ಶನ ಮಳಿಗೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರದರ್ಶನ ಮಳಿಗೆಯಲ್ಲಿ ಸರ್ಕಾರದ ಜನಪ್ರಿಯ ಹಾಗೂ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳು ಹಾಗೂ ಕನ್ನಡ ನಾಡು ನುಡಿಗೆ ಸಂಬಂಧಿಸಿದ ಪ್ರಮುಖ ಮಾಹಿತಿಗಳನ್ನು ಆಕರ್ಷಕ ವಿನ್ಯಾಸದೊಂದಿಗೆ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.


Downloaded From:www.kpscvaani.com




ಕೇಲ್, ಲೀಕ್, ಸಲರಿ, ಪಾಸಲೆ, ಐಸ್‌ಬರ್ಗ್, ಲೆಟ್ಯೂಸ್, ಹೆಡ್ ಲೆಟ್ಯೂಸ್, ಸ್ಪೆಂಲೆಟ್ಯೂಸ್, ಚೀನಿಸ್ ಕ್ಯಾಬೇಜ್, ರೆಡ್ ಕ್ಯಾಬೇಜ್, ಬ್ರೋಕೋಲಿನ್ ಸೇರಿದಂತೆ ಹಲವು ರೀತಿಯ ಸೊಪ್ಪುಗಳನ್ನು ಯಶಸ್ವಿಯಾಗಿ ಬೆಳೆಯಲಾಗಿತ್ತು. ಈ ಸೊಪ್ಪು ತರಕಾರಿಗಳು ಸಂವೃದ್ಧ ವಿಟಮಿನ್ಸ್ ಹಾಗೂ ಮಿನರಲ್ಸ್‌ಗಳನ್ನು ಹೊಂದಿವೆ. ಜೀವನ ಶೈಲಿಯ ರೋಗಗಳು ಹೆಚ್ಚುತ್ತಿರುವ ದಿನಮಾನಗಳಲ್ಲಿ ಹಸಿಯಾದ ಸೊಪ್ಪು-ತರಕಾರಿಗಳು ಆರೋಗ್ಯ ವರ್ಧಕ ಎನಿಸುತ್ತಿವೆ. ಅದಕ್ಕೆ ಬಳಕೆ ಮಾಡುವ ಈ ಸೊಪ್ಪುಗಳು ರೈತರ ಬಳಕೆಗೂ ಹಾಗೂ ಮಾರಾಟಕ್ಕೂ ಅನುಕೂಲವಾಗಿವೆ. ವಿದೇಶಿ ತಳಿಯ ಸೊಪ್ಪುಗಳನ್ನು ವರ್ಷಕ್ಕೆ ಐದರಿಂದ ಏಳು ಬೆಳೆಗಳನ್ನು ಬೆಳೆಯಬಹುದಾಗಿದೆ.

ಇನ್ನು ಸೂರ್ಯಕ್ರಾಂತಿ ಎಂದರೆ ಎಣ್ಣೆಕಾಳುಗಳ ಬೆಳೆ ಎಂದೇ ಭಾವಿಸಲಾಗುತ್ತದೆ. ವಿನ್ಸೆಂಟ್‌ಟೂಚಾಯ್ಸ್ ಎಂಬ ಗಿಡ್ಡವಾದ ಅಲಂಕಾರಿಕ ಸೂರ್ಯಕಾಂತಿ ತಳಿ ರೈತರ ಆದಾಯವನ್ನು ದುಪ್ಪಟ್ಟು ಮಾಡಲಿದೆ. 45 ದಿನಗಳಲ್ಲಿ ಬೆಳೆಯುವ ಇದನ್ನು ಅಲಂಕಾರಕ್ಕೆ ಬಳಕೆ ಮಾಡಲಾಗುತ್ತದೆ. ಎಕರೆಗೆ ಒಂದು ಲಕ್ಷ ಹೂಗಳನ್ನು ಬೆಳೆಬಹುದಾಗಿದೆ. ಕಡಿಮೆ ಉತ್ಪಾದನಾ ವೆಚ್ಚದಲ್ಲಿ ಹೆಚ್ಚು ಆದಾಯ ತಂದುಕೊಡುವ ಈ ರೀತಿಯ ಅನೇಕ ತಳಿಗಳನ್ನು ರೈತರಿಗೆ ಪರಿಚಯಿಸಲು ಕೃಷಿ ವಿಶ್ವವಿದ್ಯಾಲಯ ನಿರಂತರವಾಗಿ ಶ್ರಮಿಸುತ್ತಿದೆ.

ಏರುತ್ತಿರುವ ಜನರ ಸಂಖ್ಯೆಗೆ ಅನುಗುಣವಾಗಿ ಆಹಾರ ಒದಗಿಸಬೇಕಾದರೆ ಹಸಿರು ಕ್ರಾಂತಿ ನಿರಂತರವಾಗಿರಬೇಕಾದ ಅನಿವಾರ್ಯತೆಯಿದೆ. ಪ್ರತಿ ವರ್ಷವೂ ಇದು ಮುಂದುವರೆಯುತ್ತಲೇ ಇರಬೇಕಾಗಿದೆ. ಅವಿಷ್ಕಾರಗೊಂಡ ತಳಿಗಳು ಹಾಗೂ ಬೆಳೆ ಮಾದರಿಗಳ ಜೊತೆಗೆ ಕೃಷಿ ಯಾಂತ್ರೀಕರಣ ಬಹಳ ಮುಖ್ಯವಾಗಿದೆ. ಈ ಬಾರಿಯ ಕೃಷಿ ಮೇಳದಲ್ಲಿ ವೈಜ್ಞಾನಿಕ, ಆಧುನಿಕ ಮತ್ತು ಹೆಚ್ಚು ಬಳಕೆಗೆ ಬೇಕಾಗುವ ಪರಿಕರಗಳ ಪ್ರದರ್ಶನಕ್ಕೆ ಒತ್ತು ನೀಡಲಾಗಿತ್ತು.

ಕೃಷಿ ಮೇಳ ಮಹಾನಗರಿಯರಿಗೆ ಮೋಜಿನ ಪ್ರವಾಸದ ಜಾತ್ರೆಯಾಗಿದ್ದರೆ ಅನ್ನದಾತರಿಗೆ ಮಾಹಿತಿಯ ಕಣಜವಾಗಿತ್ತು. ಪ್ರತಿಯೊಂದು ಮಳಿಗೆಯಲ್ಲೂ ಅಪರೂಪದ, ಉಪಯೋಗವಾದ ತಿಳುವಳಿಕೆಗಳು ರೈತರಿಗೆ ವರದಾನವಾಗಿದ್ದವು. ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಕೃಷಿಗೆ ಪ್ರಚೋದನೆ ನೀಡುವ, ವಿಶ್ವವಿದ್ಯಾಲಯ ಮತ್ತು ಸಂಶೋಧಕರ ಮಾಹಿತಿ ಆಧಾರಿತವಾಗಿ ಬೇಸಾಯ ಮಾಡಿದರೆ, ಕೃಷಿ ಲಾಭದಾಯಕವಾಗಬಲ್ಲದು ಎಂಬ ವಿಶ್ವಾಸ ಮೂಡಿಸಿತ್ತು.

ಸುಧಾರಿತ ತಳಿಯಿಂದ ಆರಂಭಿಸಿ, ಬಿತ್ತನೆ ಬೀಜ, ಔಷಧೋಪಚಾರ, ನೀರು ನಿರ್ವಹಣೆ, ಕಟಾವು, ಒಕ್ಕಣೆ, ಸಂಸ್ಕರಣೆ, ಸಂಗ್ರಹಣೆ, ಮಾರುಕಟ್ಟೆ ಸೇರಿದಂತೆ ಎಲ್ಲಾ ಮಾಹಿತಿಗಳು ಒಂದೇ ಸೂರಿನಲ್ಲಿ ದೊರಕುವಂತೆ ವ್ಯವಸ್ಥೆ ಮಾಡಲಾಗಿತ್ತು. ವಿಜ್ಞಾನ ಮತ್ತು ಆಧುನಿಕತೆ ಬೆಳೆದು ಡಿಜಿಟಲೀಕರಣ ತೀವ್ರಗೊಂಡಿದೆ. ಬದುಕು, ಆರ್ಥಿಕತೆ ಯಾಂತ್ರೀಕೃತವಾಗಿ ವಿಕಸನಗೊಳ್ಳುತ್ತಿರುವ ಹಂತದಲ್ಲಿ ರೈತರ ಆಶೋತ್ತರಗಳು ದೊಡ್ಡದಾಗಿವೆ. ಅವುಗಳಿಗೆ ಸ್ಪಂದಿಸುವ ಸವಾಲನ್ನು ಕೃಷಿ ಮೇಳ ಯಶಸ್ವಿಯಾಗಿ ಸಂಧಿಸಿದೆ ಎಂದು ಹೇಳಬಹುದಾಗಿದೆ.

ರೋಗ-ರುಜಿನಗಳ ವಿವರಣೆ, ಅದನ್ನು ಯಶಸ್ವಿಯಾಗಿ ನಿಭಾಯಿಸಲು ಅನುಸರಿಸಬೇಕಾದ ಔಷಧೋಪಚಾರಗಳು, ಸಾವಯವ, ನೈಸರ್ಗಿಕ, ಸಾಂಪ್ರದಾಯಿಕ, ಮಿಶ್ರ ಬೆಳೆ, ಸಂರಕ್ಷಿತ ಬೇಸಾಯ, ಉಪಕಸುಬು, ಅರಣ್ಯಾಭಿವೃದ್ಧಿ ಸೇರಿದಂತೆ ಕೃಷಿಗೆ ಪೂರಕವಾದ ಎಲ್ಲಾ ಚಟುವಟಿಕೆಗಳ ಬಗ್ಗೆಯೂ ಇಂಚಿಂಚು ಮಾಹಿತಿ ಒದಗಿಸಲಾಗಿತ್ತು. ಕೃಷಿಗೆ ಬೆಂಬಲವಾಗಿರುವ ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ, ಯಾಂತ್ರೀಕರಣದ ಬಗ್ಗೆ ಗರಿಷ್ಠ ಮಟ್ಟದ ಪ್ರಾತ್ಯಕ್ಷಿಕೆಗಳು ಜನೋಪಯೋಗಿಯಾಗಿದ್ದವು.

ಇತ್ತೀಚಿನ ದಿನಗಳಲ್ಲಿ ಆಹಾರ ಸಂಸ್ಕರಣೆ, ಕೃಷಿ ಬೆಂಬಲಿತ ಕೈಗಾರಿಕೆಗಳು ಹೆಚ್ಚು ಪ್ರಾಮುಖ್ಯತೆ ಪಡೆದುಕೊಳ್ಳುತ್ತಿವೆ. ಮೌಲ್ಯವರ್ಧನೆಯಿಂದ ಕೃಷಿಕರ ಆದಾಯ ದುಪ್ಪಟ್ಟಾಗುತ್ತಿದೆ. ಅದಕ್ಕಾಗಿ ಗ್ರಾಮೀಣ ಭಾಗದಲ್ಲಿ ಸ್ವಸಹಾಯ ಸಂಘಗಳು ಹೆಚ್ಚು ಸಕ್ರಿಯವಾಗಿವೆ. ಪುರುಷರ ಹಾಗೂ ಸ್ತ್ರೀ ಸ್ವಸಹಾಯ ಸಂಘಗಳಿಗೆ ಸರ್ಕಾರ ಬೆನ್ನೆಲುಬಾಗಿ ನಿಂತಿದೆ. ಆರ್ಥಿಕ ನೆರವಿನ ಜೊತೆಗೆ ಕೃಷಿ ವಾಣಿಜ್ಯೋದ್ದೇಶಗಳಿಗೆ ಅಗತ್ಯ ಸಹಕಾರ ನೀಡುತ್ತಿದೆ. ಆದರೆ ಕ್ಷೇತ್ರದಲ್ಲಿ ಈ ಬಗ್ಗೆ ಅರಿವಿನ ಕೊರತೆ ಎದ್ದು ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಕೃಷಿ ಮೇಳದಲ್ಲಿ ಸ್ವಸಹಾಯ ಸಂಘಗಳಿಗಾಗಿ ಪ್ರತ್ಯೇಕ ಮಳಿಗೆಯ ಸಾಲನ್ನೇ ಮೀಸಲಿಡಲಾಗಿತ್ತು. ರೈತರು ಒಮ್ಮೆ ಅಲ್ಲಿಗೆ ಕಾಲಿಟ್ಟರೆ ಸಾಕು ಉತ್ಪಾದನೆ ಹಾಗೂ ಮಾರುಕಟ್ಟೆಯವರೆಗೂ ಹಾಗೂ ವಾಣಿಜ್ಯ ವ್ಯವಹಾರಗಳನ್ನು ನಿಭಾಯಿಸುವ ನೈಪುಣ್ಯತೆಯವರೆಗೂ ಎಲ್ಲಾ ರೀತಿಯ ತಿಳುವಳಿಕೆಗಳು ದೊರೆಯುವಂತೆ ವ್ಯವಸ್ಥೆ ಮಾಡಲಾಗಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೃಷಿಮೇಳ-2023 ಅನ್ನು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಅವರು ಮಣ್ಣು ಪರೀಕ್ಷಿಸುವ ಹೊಸ ಆ್ಯಪ್‌ಗೆ ಚಾಲನೆ ನೀಡುವ ಜೊತೆಗೆ ಕೃಷಿ ಕ್ಷೇತ್ರದ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕೃಷಿ ಮೇಳವು ನಾಲ್ಕು ದಿನಗಳ ಕಾಲ 15 ಲಕ್ಷದ 67 ಸಾವಿರ ಜನರ ವೀಕ್ಷಣೆಗೆ ಸಾಕ್ಷಿಯಾಯಿತು. ಅದು ಕೂಡ ಅರ್ಥಪೂರ್ಣವಾಗಿ ಸಮಾರೋಪಗೊಂಡಿತು. ಪ್ರತಿವರ್ಷವೂ ಹೊಸತನ, ಕುತೂಹಲಗಳಿಗೆ ಕಾರಣೀಭೂತವಾಗಿರುವ ಕೃಷಿ ಮೇಳಕ್ಕೆ ಮತ್ತೊಂದು ವರ್ಷ ಕಾಯಬೇಕಿದೆ. ■


Downloaded From:www.kpscvaani.com



# ಸರ್ಕಾರದ 6 ತಿಂಗಳ ಅನನ್ಯ ಸಾಧನೆಯ ಕಿರು ನೋಟ

ನವೆಂಬರ್ 20 ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ 'ಕರ್ನಾಟಕ ಮಾದರಿ'ಯ ರಾಜ್ಯ ಸರ್ಕಾರವು ಅಧಿಕಾರಕ್ಕೆ ಬಂದು ಆರು ತಿಂಗಳು ಪೂರೈಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಈ ಆರು ತಿಂಗಳ ಅವಧಿಯಲ್ಲಿ ಸರ್ಕಾರ ಜಾರಿ ಮಾಡಿದ ಗ್ಯಾರಂಟಿ ಯೋಜನೆಗಳ ಸಾಧನೆಗಳ ಬಗ್ಗೆ ಮುಖ್ಯಮಂತ್ರಿಗಳ ಅಧಿಕೃತ ಸಾಮಾಜಿಕ ಜಾಲತಾಣದಲ್ಲಿ "6 ತಿಂಗಳ ಅನನ್ಯ ಸಾಧನೆ' ಎಂಬ ಹ್ಯಾಷ್ ಟ್ಯಾಗ್‌ನಡಿ ಹಮ್ಮಿಕೊಳ್ಳಲಾದ ಅಭಿಯಾನಕ್ಕೆ ಸಾರ್ವಜನಿಕರಿಂದ ಅಭೂತ ಪೂರ್ವ ಸ್ಪಂದನೆ ದೊರಕಿದೆ.

ರಾಜ್ಯ ಸರ್ಕಾರವು ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಆರ್ಥಿಕ ಬೆಂಬಲ ನೀಡುವ ಉದ್ದೇಶದಿಂದ ಜಾರಿ ಮಾಡಿರುವ ಪಂಚ ಗ್ಯಾರಂಟಿ ಯೋಜನೆಗೆ ರಾಜ್ಯದ ಬಹುತೇಕ ಜನರು ಒಂದಲ್ಲ ಒಂದು ಯೋಜನೆಯ ಫಲಾನುಭವಿಗಳಾಗಿದ್ದಾರೆ. ಈ ಐದು ಗ್ಯಾರಂಟಿ ಯೋಜನೆಯು ಯಾವುದೇ ಜಾತಿ ತಾರತಮ್ಯವಿಲ್ಲದಂತೆ ಎಲ್ಲರನ್ನು ಒಳಗೊಂಡಿರುವಂತೆ ಮಾಡಿರುವುದು ದೇಶದಲ್ಲೇ ಮೊಟ್ಟಮೊದಲು. ಎಲ್ಲಾ ಯೋಜನೆಗಳಿಗೆ ಜನರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿರುವುದರಿಂದ, ಈ ಹಿಂದೆ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಟೀಕಿಸುತ್ತಿದ್ದವರ ಬಾಯಿಗೆ ಬೀಗ ಬಿದ್ದಿದೆ.

ಈ ಆರು ತಿಂಗಳಲ್ಲಿ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ವಿವರ ಈ ಕೆಳಕಂಡಂತಿದೆ.

**ಶಕ್ತಿ ಯೋಜನೆ**

ಶಕ್ತಿ ಯೋಜನೆ ಜಾರಿಯಾದಾಗಿನಿಂದ ನವೆಂಬರ್ 21 ರವರೆಗೆ ಒಟ್ಟಾರೆ 99.75 ಕೋಟಿ ಮಹಿಳಾ ಪ್ರಯಾಣಿಕರು ಉಚಿತ ಸಾರಿಗೆ ಸೌಲಭ್ಯದ ಸದುಪಯೋಗ ಪಡೆದುಕೊಂಡಿರುತ್ತಾರೆ. ನವೆಂಬರ್ ಮಾಹೆಯ ಅಂತ್ಯದೊಳಗೆ ಶೂನ್ಯ ದರ ಟಿಕೆಟ್‌ಗಳ ಸಂಖ್ಯೆ ನೂರು ಕೋಟಿ ದಾಟಲಿದೆ. ಪ್ರತಿ ತಿಂಗಳ ಪ್ರಯಾಣಿಕರ ಸಂಖ್ಯೆ ಏಪ್ರಿಲ್ 2023 ರಲ್ಲಿ 84.17 ಲಕ್ಷ ದಿಂದ ಶಕ್ತಿ ಯೋಜನೆ ಜಾರಿಯ ನಂತರ 1.08 ಕೋಟಿಯಿಂದ 1.15 ಕೋಟಿ ವರೆಗೆ ಹೆಚ್ಚಳವಾಗಿದೆ.

ಶಕ್ತಿ ಯೋಜನೆಯಿಂದ ಮಹಿಳೆಯರು ಧಾರ್ಮಿಕ ಸ್ಥಳಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿರುವುದರಿಂದ ಅವರ ಪ್ರಯಾಣಕ್ಕೆ ಅನುಕೂಲ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಬಸ್ ಸೌಲಭ್ಯಗಳನ್ನು ಒದಗಿಸಲು ಸಾರಿಗೆ ಇಲಾಖೆಯು ಕ್ರಮಕೈಗೊಂಡಿದೆ. ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳಿಗೆ ಒಟ್ಟು 828 ಸಾಮಾನ್ಯ ಹಾಗೂ 145 ವಿದ್ಯುತ್ ಚಾಲಿತ ಬಸ್‌ಗಳನ್ನು ಸೇರ್ಪಡೆಗೊಳಿಸಲಾಗುತ್ತಿದೆ. ಬಸ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

**ಅನ್ನಭಾಗ್ಯ**

ಅನ್ನಭಾಗ್ಯ ಯೋಜನೆಯಡಿ ಅಕ್ಟೋಬರ್ ತಿಂಗಳಲ್ಲಿ 1,10,96,413 ಕಾರ್ಡುದಾರರಿಗೆ ಡಿಬಿಟಿ ಮಾಡಲಾಗಿದೆ. 12.95 ಲಕ್ಷ ಚೀಟಿದಾರರ ಬ್ಯಾಂಕ್ ಖಾತೆಗೆ ಆಧಾರ್


Downloaded From:www.kpscvaani.com



**ನವೆಂಬರ್ ಅಂತ್ಯದವರೆಗಿನ ಸರ್ಕಾರದ ಪ್ರಮುಖ ಸಾಧನೆಗಳು:**

- 19 ಲಕ್ಷ ರೈತರಿಗೆ ರೂ. 1,500 ಕೋಟಿ ಬೆಳೆ ವಿಮೆ
- 40 ಸಾವಿರ ಕೃಷಿ ಹೊಂಡ ನಿರ್ಮಾಣ
- 9 ಲಕ್ಷ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ
- 16 ಲಕ್ಷ ರೈತರಿಗೆ ಬೆಳೆ ಸಾಲ
- 18,230 ಸ್ವಸಹಾಯ ಗುಂಪುಗಳಿಗೆ ಬಡ್ಡಿ ಸಾಲ
- 4.8 ಲಕ್ಷ ಯಶಸ್ವಿನಿ ಫಲಾನುಭವಿಗಳು
- 12,593 ಹೆ. ನೀರಾವರಿ ಸಾಮರ್ಥ್ಯ ರಚನೆ
- ರಸ್ತೆ ಅಭಿವೃದ್ಧಿ ಮತ್ತು ನಿಯಂತ್ರಣ ಪ್ರಾಧಿಕಾರ ಸ್ಥಾಪನೆ
- 10 ಕೋಟಿ ಮಾನವ ದಿನಗಳ ಸೃಜನೆ. ರೂ. 4,451 ಕೋಟಿ ಪಾವತಿ
- ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರರಿಗೆ 98,080 ಮನೆಗಳನ್ನು ನಿರ್ಮಿಸಲಾಗಿದೆ
- ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ
- ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ 9.5 ಲಕ್ಷ ವಿದ್ಯಾರ್ಥಿಗಳಿಗೆ ರೂ. 525 ಕೋಟಿ ವಿದ್ಯಾರ್ಥಿ ವೇತನ ನೀಡಿದೆ
- ಕಂದಾಯ ನ್ಯಾಯಾಲಯದಲ್ಲಿ 59,757 ಪ್ರಕರಣ ಇತ್ಯರ್ಥ
- ಕರ್ನಾಟಕ ರಾಜ್ಯ ಶಿಕ್ಷಣ ನೀತಿ ರೂಪಿಸಲು ಆಯೋಗ
- ಪ್ರತಿ ತಿಂಗಳು ತಾಲ್ಲೂಕು ಜಿಲ್ಲಾ ಮತ್ತು ರಾಜ್ಯಮಟ್ಟದ ಜನತಾದರ್ಶನ
- ಸಕಾಲ ಸೇವೆಗಳಡಿ 1.91 ಕೋಟಿ ಅರ್ಜಿಗಳ ವಿಲೇವಾರಿ

ಲಿಂಕ್ ಮಾಡುವ ಮೂಲಕ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ. 2.60 ಲಕ್ಷ ಹೊಸ ಖಾತೆಗಳನ್ನು ಅಂಚೆ ಕಚೇರಿಗಳಲ್ಲಿ ತೆರೆಯಲಾಗಿದೆ. ಈವರೆಗೆ 3.92 ಕೋಟಿ ಫಲಾನುಭವಿಗಳಿಗೆ ಒಟ್ಟು 2,444.11 ಕೋಟಿ ರೂ. ಮೊತ್ತವನ್ನು ಡಿಬಿಟಿ ಮೂಲಕ ವರ್ಗಾಯಿಸಲಾಗಿದೆ.

### ಗೃಹ ಜ್ಯೋತಿ

ಗೃಹಜ್ಯೋತಿ ಯೋಜನೆಯಡಿ ಈವರೆಗೆ 1.62 ಕೋಟಿ ಜನ ನೋಂದಾಯಿಸಿಕೊಂಡಿದ್ದು, 1.56 ಕೋಟಿಗೂ ಅಧಿಕ ಕುಟುಂಬಗಳಿಗೆ ಈ ಯೋಜನೆಯ ಸೌಲಭ್ಯ ದೊರೆಯುತ್ತಿದೆ. ಆಗಸ್ಟ್ ನಿಂದ ಈವರೆಗೆ ಇಂಧನ ಇಲಾಖೆಗೆ 2900 ಕೋಟಿ ರೂ. ಭರಿಸಲಾಗಿದೆ. ಗೃಹ ಜ್ಯೋತಿ ಯೋಜನೆಯಡಿ ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ, ಅಮೃತ ಜ್ಯೋತಿ ಯೋಜನೆಯ ಫಲಾನುಭವಿಗಳು ಇಲಾಖೆಯ ದತ್ತಾಂಶದಲ್ಲಿಯೇ ಗೃಹ ಜ್ಯೋತಿ ಯೋಜನೆಯಡಿ ಸೇರ್ಪಡೆಗೊಳಿಸಲಾಗಿದೆ.

### ಗೃಹಲಕ್ಷ್ಮಿ ಯೋಜನೆ

ನವೆಂಬರ್ ತನಕ 1.17 ಕೋಟಿ ಫಲಾನುಭವಿಗಳು ನೋಂದಣಿಯಾಗಿದ್ದು, 99.52 ಲಕ್ಷ ಫಲಾನುಭವಿಗಳ ಖಾತೆಗೆ ತಲಾ ಎರಡು ಸಾವಿರ ರೂ. ಗಳನ್ನು ನೇರವಾಗಿ ವರ್ಗಾವಣೆ ಮಾಡಲಾಗಿದೆ. ಈ ಯೋಜನೆಯಡಿ ಅರ್ಜಿ ಹಾಕಿರುವ 2 ಲಕ್ಷ ಫಲಾನುಭವಿಗಳಿಗೆ ಸಂಬಂಧಿಸಿದ ತೊಡಕನ್ನು ನಿವಾರಿಸಲಾಗುತ್ತಿದೆ.

ಖಾತೆಯ ಮಾಹಿತಿಯಲ್ಲಿ ಗೊಂದಲ, ಆಧಾರ್ ಲಿಂಕ್ ಆಗದಿರುವುದು ಮೊದಲಾದ ಕಾರಣಗಳಿಂದ ಬಹಳಷ್ಟು ಜನರಿಗೆ ಹಣ ವರ್ಗಾವಣೆಗೆ ತೊಡಕಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರು ಫಲಾನುಭವಿಗಳನ್ನು ಬ್ಯಾಂಕಿಗೆ ಕರೆದೊಯ್ದು ಸಮಸ್ಯೆ ಬಗೆಹರಿಸುತ್ತಿದ್ದಾರೆ. ಕೆಲವೇ ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಿ, ಎಲ್ಲ ಅರ್ಹ ಫಲಾನುಭವಿಗಳಿಗೆ ನೆರವು ಕ್ರಮ ಕೈಗೊಳ್ಳಲಾಗುತ್ತದೆ.

### ಯುವನಿಧಿ

ಸರ್ಕಾರವು ಐದು ಗ್ಯಾರಂಟಿ ಯೋಜನೆಗಳಲ್ಲಿ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಈಗಾಗಲೇ ಜಾರಿಗೊಳಿಸಿದೆ. ಪದವೀಧರ ಯುವಜನರು ತಮಗೆ ಸರಿಹೊಂದುವಂತಹ ಉದ್ಯೋಗವನ್ನು ದೊರಕಿಸಿಕೊಳ್ಳಲು ಸಮಯವು ಹಿಡಿಯುತ್ತದೆ. ಈ ಸಮಯದಲ್ಲಿ ಅವರು ಹತಾಶೆಗೆ ಒಳಗಾಗದಂತೆ ಅವರಿಗೆ ಆರ್ಥಿಕ ಭದ್ರತೆಯನ್ನು ನೀಡುವ ಸಲುವಾಗಿ 'ಯುವನಿಧಿ' ಯೋಜನೆಯನ್ನು ಸರ್ಕಾರವು ಜಾರಿಗೆ ತರಲು ಮುಂದಾಗಿದೆ. ಯುವಜನರಿಗೆ ನಿರುದ್ಯೋಗ ಭತ್ಯೆ ನೀಡುವ ಐದನೇ ಗ್ಯಾರಂಟಿ ಯೋಜನೆಯಾದ 'ಯುವನಿಧಿ' ಯೋಜನೆಯು ಜನವರಿಯಿಂದ ಜಾರಿಗೆ ಬರಲಿದೆ. ಇದರಿಂದ ಸುಮಾರು ನಾಲ್ಕೂವರೆ ಲಕ್ಷ ಯುವಜನತೆಗೆ ನೆರವಾಗಲಿದೆ.

ಒಟ್ಟಿನಲ್ಲಿ ಬಡವ ಬಲ್ಲಿದನೆಂಬ ಭೇದವಿಲ್ಲದ ಎಲ್ಲರನ್ನೂ ಒಳಗೊಳ್ಳುವ ಕರ್ನಾಟಕ ಮಾದರಿ ಅಭಿವೃದ್ಧಿಗೆ ಜನರಿಂದ ಅಭೂತಪೂರ್ವ ಸ್ಪಂದನೆ ದೊರಕುತ್ತಿದೆ.


Downloaded From:www.kpscvaani.com



# ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ

## ಹಂಪಿಯಲ್ಲಿ ಜ್ಯೋತಿ ರಥಯಾತ್ರೆಗೆ ಚಾಲನೆ



**ನವೆಂಬರ್ 1, 2024 ರ ವರೆಗೆ ಕರ್ನಾಟಕ ಸಂಭ್ರಮ-50 ಆಚರಿಸಲು ಸರ್ಕಾರವು ಉದ್ದೇಶಿಸಿದ್ದು, ಹಂಪಿಯಲ್ಲಿ ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಿದೆ.**

ಧನಂಜಯ. ಬಿ

ಸ್ವಾತಂತ್ರ್ಯ ಬಂದಾಗ ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಮೈಸೂರು ಪ್ರಾಂತ್ಯ ಈಗಿನ ಕರ್ನಾಟಕವು ವಿವಿಧ ರಾಜ್ಯಗಳಲ್ಲಿ ಹಂಚಿಕೆಯಾಗಿತ್ತು. 1956 ನವೆಂಬರ್ 1 ರಂದು ಏಕೀಕರಣ ನಂತರ ವಿಶಾಲ ಕರ್ನಾಟಕ ನೋಡಲು ಸಾಧ್ಯವಾಯಿತು. ಎಸ್. ನಿಜಲಿಂಗಪ್ಪ ಅವರು ಏಕೀಕರಣ ರಾಜ್ಯದ ಮೊದಲ ಮುಖ್ಯಮಂತ್ರಿ ಆದರು. 1973 ಕ್ಕಿಂತ ಮೊದಲು ಕರ್ನಾಟಕವನ್ನು ಮೈಸೂರು ರಾಜ್ಯ ಎಂದು ಕರೆಯುತ್ತಿದ್ದರು. 1973 ನವೆಂಬರ್ 1 ರಂದು ಕರ್ನಾಟಕದ ಸಾರ್ವಭೌಮತೆಯನ್ನು ಎತ್ತಿ ಹಿಡಿಯಲು ಅಂದಿನ ಮುಖ್ಯಮಂತ್ರಿಗಳು ಹಾಗೂ ಅಭಿವೃದ್ಧಿ ಹರಿಕಾರ ಡಿ.ದೇವರಾಜು ಅರಸು ಅವರು ಕರ್ನಾಟಕ ಎಂದು ನಾಮಕರಣ ಮಾಡಿದರು. ಮೈಸೂರು ರಾಜ್ಯವಾಗಿದ್ದ ನಾಡಿಗೆ ಕರ್ನಾಟಕ ಎಂದು ನಾಮಕರಣ ಮಾಡಿ 2023 ರ ನವೆಂಬರ್ 1 ಕ್ಕೆ ಐವತ್ತು ವರ್ಷಗಳಾಗಿವೆ.

ಕನ್ನಡಕ್ಕೆ ಎರಡು ಸಾವಿರ ವರ್ಷಕ್ಕಿಂತ ಹೆಚ್ಚು ಇತಿಹಾಸ ಇದೆ, ಷೇಕ್ಸ್‌ಫಿಯರ್‌ಗಿಂತ 600 ವರ್ಷ ಮೊದಲೇ ಆದಿ ಕವಿ ಪಂಪ ಬದುಕಿದ್ದರು. ವಿಜಯನಗರ ರಾಜರು, ಮೈಸೂರು ಮಹಾರಾಜರು ಸೇರಿದಂತೆ ಸ್ವಾತಂತ್ರ್ಯ ಪೂರ್ವದಲ್ಲಿ ಆಳ್ವಿಕೆ ಮಾಡಿದಂತಹ ಅನೇಕ ರಾಜರು ಕಲೆ, ಸಾಹಿತ್ಯ, ಸಂಸ್ಕೃತಿಗೆ ಹೆಚ್ಚಿನ ಒತ್ತು ನೀಡಿದ್ದರಿಂದ ಇಂದಿಗೂ ರಾಜ್ಯದ ಕಲೆ, ಸಂಸ್ಕೃತಿ, ಪರಂಪರೆ ಶ್ರೀಮಂತಿಕೆಯಿಂದ ಕೂಡಿದೆ. ನಾಡಿನ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ ಮತ್ತು ಪರಂಪರೆಯನ್ನು ಮತ್ತೆ ಮತ್ತೆ ಜಾಗೃತಿಗೊಳಿಸಿ ಮುಂದಿನ ಕಟ್ಟಾಳುಗಳಾದ ಯುವ ಜನರಲ್ಲಿ, ನಾಗರೀಕರಲ್ಲಿ ಹೃದಯ ಶ್ರೀಮಂತಿಕೆಯನ್ನು ಜಾಗೃತಿಗೊಳಿಸುವ ಮೂಲಕ ರಾಜ್ಯದ ಸಂಸ್ಕೃತಿ, ಸಂಸ್ಕಾರವನ್ನು ಎತ್ತಿ ಹಿಡಿಯುವುದು ಸರ್ಕಾರದ ಉದ್ದೇಶವಾಗಿದೆ.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷಗಳಾದ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಐತಿಹಾಸಿಕ, ಸಾಂಸ್ಕೃತಿಕತೆಯನ್ನು ಜಾಗೃತಿಗೊಳಿಸಲು 2024 ರ ನವೆಂಬರ್ 1 ರ ವರೆಗೆ ಕರ್ನಾಟಕ ಸಂಭ್ರಮ–50 ಕಾರ್ಯಕ್ರಮವನ್ನು ಜ್ಯೋತಿ ರಥ ಯಾತ್ರೆಯ ಮೂಲಕ ನಡೆಸಲಾಗುತ್ತಿದೆ.

**ಜ್ಯೋತಿ ರಥ ಯಾತ್ರೆಗೆ ಹಂಪಿಯಿಂದ ಚಾಲನೆ;**

1973 ರ ನವೆಂಬರ್ 1 ರಂದು ಕರ್ನಾಟಕ ಎಂದು ನಾಮಕರಣ ಮಾಡಿ



Downloaded From:www.kpscvaani.com

1973 ರ ನವೆಂಬರ್ 2 ರಂದು ಡಿ.ದೇವರಾಜ ಅರಸುರವರು ವಿಶ್ವ ಪಾರಂಪರಿಕ ತಾಣ ಹಂಪಿಯಿಂದಲೇ ಕರ್ನಾಟಕ ಜ್ಯೋತಿ ರಥ ಯಾತ್ರೆಗೆ ಜ್ಯೋತಿ ಪ್ರಜ್ವಲನೆ ಮಾಡಿ ಚಾಲನೆ ನೀಡಿದ್ದು ಇತಿಹಾಸ. ಅರಸುರವರು ಹಂಪಿಯ ವಿರೂಪಾಕ್ಷ, ಪಂಪಾದೇವಿ, ಭುವನೇಶ್ವರಿ ದೇವಿಯ ದರ್ಶನ ಪಡೆಯುವ ಮೂಲಕ ಜ್ಯೋತಿ ರಥಯಾತ್ರೆಗೆ ಚಾಲನೆ ನೀಡಿದ್ದರು. ಕರ್ನಾಟಕ ನಾಮಕರಣವಾಗಿ 2023 ರ ನವೆಂಬರ್ 1 ಕ್ಕೆ 50 ವರ್ಷಗಳಾಗಿ ಕರ್ನಾಟಕ ಸಂಭ್ರಮ-50 ರ ಕಾರ್ಯಕ್ರಮವನ್ನು 2023 ರ ನವೆಂಬರ್ 2 ರಂದು ಹಂಪಿ ವಿರೂಪಾಕ್ಷ, ಪಂಪಾದೇವಿ, ಭುವನೇಶ್ವರಿ ದೇವಾಲಯಕ್ಕೆ ಭೇಟಿ ನೀಡಿದ ದರ್ಶನ ಪಡೆಯುವ ಮೂಲಕ 50 ವಿವಿಧ ಕಲಾತಂಡಗಳ ಮೆರವಣಿಗೆಯ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸುವರ್ಣ ಸಂಭ್ರಮದ ಜ್ಯೋತಿ ರಥಯಾತ್ರೆಗೆ ಜ್ಯೋತಿ ಪ್ರಜ್ವಲನೆ ಮಾಡುವ ಮೂಲಕ ಡಿ.ದೇವರಾಜ ಅರಸು ಅವರ ಮಾರ್ಗದಲ್ಲೆ ಕರ್ನಾಟಕದ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಶ್ರೀಮಂತಗೊಳಿಸಲು ಮುನ್ನಡೆದಿದ್ದಾರೆ.

**ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆ;**

ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ಸಂಗಮ ವಂಶದ ಹರಿಹರ ಮತ್ತು ಬುಕ್ಕರು ಶುದ್ಧ ಕನ್ನಡಿಗರು. ಇವರ ಕಾಲದಲ್ಲಿ ನೀಡಿದಂತಹ ಸಾಂಸ್ಕೃತಿಕ ಕೊಡುಗೆ ಅಪಾರವಾದದು, ಕಲೆ, ಸಾಹಿತ್ಯದ ಉದಾರ ಪೋಷಕರಾಗಿದ್ದರು. ಇಷ್ಟೆ ಅಲ್ಲ ಕೃಷಿ, ಕೈಗಾರಿಕೆ, ವಾಣಿಜ್ಯಕ್ಕೆ ಪ್ರೋತ್ಸಾಹ ನೀಡುವ ಮೂಲಕ ಪ್ರಜಾಪಾಲನೆಯ ಔದಾರ್ಯ ತೋರಿದವರು.

**ಕನ್ನಡ ಸಾಹಿತ್ಯಕ್ಕೆ ಕೊಡುಗೆ;**

ವಿಜಯನಗರ ಸಾಮ್ರಾಜ್ಯ ಅಪಾರ ಸಂಪತ್ತಿನಿಂದ ಕೂಡಿದ ಶ್ರೀಮಂತಿಕೆಯ ಸಾಮ್ರಾಜ್ಯವಾಗಿತ್ತು. ಅಷ್ಟದಿಗ್ಗಜರಿಗೆ ಆಶ್ರಯ ನೀಡಿದ್ದರು, ಇಲ್ಲಿಂದಲೇ ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಲಾದ ಇತಿಹಾಸವಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ನಾಮಕರಣಗೊಂಡ ಸಂದರ್ಭದಲ್ಲಿ ಹಂಪಿಯಿಂದಲೇ ಜ್ಯೋತಿ ರಥಯಾತ್ರೆಗೆ ಅರಸುರವರು ಚಾಲನೆ ನೀಡಿ ನಂತರ ಗದಗಿನ ವೀರನಾರಾಯಣ ಸನ್ನಿಧಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಮಹಾರಾಜರೊಂದಿಗೆ ಭಾಗವಹಿಸಿದ್ದರು.



**ವೀರಮಕ್ಕಳ ಕುಣಿತದಲ್ಲಿ ಹೆಜ್ಜೆಹಾಕಿದ ಮುಖ್ಯಮಂತ್ರಿಗಳು;**

ಸಮ ಸಮಾಜದ ಕನಸನ್ನು ಕಂಡು ಈಡೇರಿಕೆಯ ದಾರಿಯಲ್ಲಿ ಸಾಗಿರುವ ಸಿದ್ದರಾಮಯ್ಯನವರು ಕಲೆ, ಸಾಹಿತ್ಯದಲ್ಲಿಯು ಅಪಾರ ಆಸಕ್ತಿಯುಳ್ಳವರು. ಹಂಪಿಯಲ್ಲಿ ನಡೆದ ಜ್ಯೋತಿ ರಥಯಾತ್ರೆ ಚಾಲನಾ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನ ಹುಂಡಿಯಿಂದ ಆಗಮಿಸಿದ ಕಲಾವಿದರು ವೀರಮಕ್ಕಳ ಕುಣಿತ ಪ್ರದರ್ಶನ ನೀಡಿದ ವೇಳೆ ಅವರೊಂದಿಗೆ ಹೆಜ್ಜೆ ಹಾಕುವ ಮೂಲಕ ಸಂಭ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಏಕೀಕರಣದ ಫಲವಾಗಿ 1956 ರ ನವೆಂಬರ್ 1 ರಂದು ವಿಶಾಲ ಕರ್ನಾಟಕ ನೋಡಲು ಸಾಧ್ಯವಾಯಿತು. 1973 ರ ನವೆಂಬರ್ 1 ಕ್ಕೆ ಕರ್ನಾಟಕ ನಾಮಕರಣಕ್ಕೆ 50 ವರ್ಷ ತುಂಬಿರುವುದರಿಂದ ಇಡೀ ವರ್ಷ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಮತ್ತೆ ಮತ್ತೆ ಜಾಗೃತಿಗೊಳಿಸಲು ಕರ್ನಾಟಕ ಸಂಭ್ರಮ-50 ಕಾರ್ಯಕ್ರಮಕ್ಕೆ ಬಜೆಟ್‌ನಲ್ಲಿ ಅನುದಾನ ನೀಡುವ ಮೂಲಕ ಜ್ಯೋತಿ



ರಥಯಾತ್ರೆ ಇಡೀ ವರ್ಷ ಸಂಚರಿಸುವ ಮೂಲಕ ಕರ್ನಾಟಕ ಸಮೃದ್ಧಿ ಮಾಡುತ್ತೇವೆ ಎಂಬ ಶಪಥ ಮಾಡುತ್ತೇವೆ ಎಂದರು.

ಅರಸು, ಬಸವಣ್ಣನವರು ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದರು. ಮೂಢನಂಬಿಕೆ ಕಿತ್ತೊಗೆದು ಸಮ ಸಮಾಜದ ನಿರ್ಮಾಣ ಮಾಡಲು ಈ ಹಿಂದೆ ನೀಡಲಾದ 168 ಭರವಸೆಗಳಲ್ಲಿ 165 ಭರವಸೆಗಳನ್ನು ಈಡೇರಿಸಲಾಗಿದೆ. ಈ ಅವಧಿಯಲ್ಲಿ ಪ್ರಣಾಳಿಕೆಯಲ್ಲಿ ನೀಡಲಾದ 5 ಗ್ಯಾರಂಟಿಗಳಲ್ಲಿ 4 ಗ್ಯಾರಂಟಿಗಳನ್ನು ಈಡೇರಿಸಿದ್ದು, 2024 ರ ಜನವರಿಯಲ್ಲಿ 'ಯುವ ನಿಧಿ' ಯೋಜನೆಯನ್ನು ಜಾರಿ ಮಾಡಿ ನಮ್ಮದು ನುಡಿದಂತೆ ನಡೆಯುವ ಸರ್ಕಾರ ಎನಿಸಿಕೊಳ್ಳಲಿದೆ ಎಂದು ತಿಳಿಸಿದರು.



Downloaded From:www.kpscvaani.com



# ಬಬ್ಬೂರು ಕೃಷಿ ಫಾರಂಗೆ ಶತಮಾನೋತ್ಸವ ಸಂಭ್ರಮ



**ಚಿ**ತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಬಬ್ಬೂರು ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರವು ಮಧ್ಯ ಕರ್ನಾಟಕ ಭಾಗದ ರೈತರ ಆಶಾಕಿರಣವಾಗಿದೆ. ಕೃಷಿ ಹಾಗೂ ತೋಟಗಾರಿಕೆ ಬೆಳೆಗಳ ತಳಿ ಸಂವರ್ಧನೆ, ಬೇಸಾಯ ಕ್ರಮ ಹಾಗೂ ಕೃಷಿ ತಾಂತ್ರಿಕತೆ ಅಭಿವೃದ್ಧಿಯಲ್ಲಿ ಸಂಶೋಧನೆ ಕೈಗೊಂಡು ನಾಡಿಗೆ ಕೊಡುಗೆ ನೀಡುತ್ತಿದೆ.

ಈ ಸಂಶೋಧನಾ ಕೇಂದ್ರ ಶತಮಾನೋತ್ಸವವನ್ನು ಕಳೆದ 2023 ರ ಅಕ್ಟೋಬರ್ 06 ರಂದು ಆಚರಿಸಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಬ್ಬೂರು ಫಾರಂಗೆ ಆಗಮಿಸಿ, ಶತಮಾನೋತ್ಸವ ಸಮಾರಂಭ ಉದ್ಘಾಟಿಸಿ, ಕೃಷಿ ವಿಜ್ಞಾನಿಗಳನ್ನು ಸಂಶೋಧನೆಗೆ ಇನ್ನಷ್ಟು ಹುರುದುಂಬಿಸಿದರು. ಅಲ್ಲದೆ ಲೆಸ್ಲಿ ಕೋಲ್ಮನ್ ಶತಮಾನೋತ್ಸವ ಭವನದ ಉದ್ಘಾಟನೆ, ಕೃಷಿ ಯಂತ್ರೋಪಕರಣಗಳ ಪರೀಕ್ಷಾ ಕೇಂದ್ರ, ಶೇಂಗಾ ಸಂಸ್ಕರಣ ಘಟಕ, ವಿಶೇಷ ಅಂಚೆ ಲಕೋಟೆ ಹಾಗೂ ಭೂಪಟಗಳು, ಕೃಷಿ ಪ್ರಕಟಣೆಗಳನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ಬಬ್ಬೂರು ಕೃಷಿ ಫಾರಂ ಸ್ಥಾಪನೆ ಇತಿಹಾಸವನ್ನು ಒಮ್ಮೆ ಅವಲೋಕಿಸುವುದಾದರೆ, 1899 ರಲ್ಲಿ ಬೆಂಗಳೂರಿನಲ್ಲಿ ಮೈಸೂರು ರಾಜ್ಯದ ಮಹಾರಾಣಿ ಕೆಂಪನಂಜಮ್ಮಣ್ಣಿ ವಾಣಿವಿಲಾಸ ಅವರು ಬೆಂಗಳೂರಿನ ಹೆಬ್ಬಾಳದಲ್ಲಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಕಾರಣಕರ್ತರಾದರು. ನಂತರ 1906 ರಲ್ಲಿ ಹೆಬ್ಬಾಳ ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ಡಾ. ಲೆಸ್ಲಿ ಕೋಲ್ಮನ್ ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತಿ ಹಾಗೂ ಕಬ್ಬು ಸಂಶೋಧನೆಗಾಗಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು.

ತುಕಾರಾಂರಾವ್ ಬಿ.ವಿ



Downloaded From:www.kpscvaani.com

ಡಾ. ಲೆಸ್ಲಿ ಕೋಲ್ಮನ್ ಅವರ ಸತತ ಪ್ರಯತ್ನದ ಫಲವಾಗಿ ಜುಲೈ, 1916ರಲ್ಲಿ ಚಿತ್ರದುರ್ಗ ಹಿರಿಯೂರಿನ ಬಬ್ಬೂರಿನಲ್ಲಿ ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆಯಾಯಿತು.

ಆರಂಭದಲ್ಲಿ ಬಬ್ಬೂರಿನ ಕೃಷಿ ಸಂಶೋಧನಾ ಕೇಂದ್ರದಲ್ಲಿ ಎಸ್–69 ಎನ್ನುವ ಹೊಸ ಹತ್ತಿ ತಳಿಯನ್ನು ಹೊರತಂದು ಸುಮಾರು 6000 ಎಕರೆ ಜಮೀನಿಗೆ ಬಿತ್ತನೆ ಬೀಜ ಉತ್ಪಾದಿಸಿ ವಿತರಿಸಲಾಯಿತು. ನಂತರ ಹೆಚ್.ಎಂ–544 ಹಾಗೂ ಹೆಚ್.ಎಂ–320 ಕಬ್ಬಿನ ತಳಿಗಳನ್ನು ಸಂಶೋಧನಾ ಕೇಂದ್ರದಿಂದ ಪರಿಚಯಿಸಲಾಯಿತು. 1916ರಲ್ಲಿ ಆರಂಭವಾದ ಬಬ್ಬೂರೂ ಕೃಷಿ ಸಂಶೋಧನಾ ಕೇಂದ್ರ ಇದುವರೆಗೂ ಭತ್ತದಲ್ಲಿ 11 ತಳಿ, ಜೋಳ 5, ಮೆಕ್ಕೆಜೋಳ 2 ಹೈಬ್ರಿಡ್ ರಾಗಿ 5, ನವಣೆ 2, ಊದಲು 1, ಹೆಸರು 2, ಹುರಳಿ 1, ಉದ್ದು 2, ಅಲಸಂದೆ 2, ತೊಗರಿ 1, ಕಡಲೆ 12, ಕಬ್ಬು 6, ಹತ್ತಿ 18, ಮೆಣಸಿಕಾಯಿ 2, ಎಳ್ಳು 1, ಹರಳು 9, ಸೂರ್ಯಕಾಂತಿ 5, ಕುಸುಬೆ 2, ಶೇಂಗಾ 7 ಮತ್ತು ಸಾಸಿವೆ 2 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಇದುವರೆಗೂ ಸಂಶೋಧನಾ ಕೇಂದ್ರದಲ್ಲಿ 24 ಬೆಳಗಳಲ್ಲಿ 94 ತಳಿಗಳು, 69 ಬೇಸಾಯ ಕ್ರಮಗಳು, ಕೃಷಿ ತಾಂತ್ರಿಕತೆ ಮತ್ತು ಸಸ್ಯ ಸಂರಕ್ಷಣಾ ತಾಂತ್ರಿಕತೆಗಳನ್ನು ರೈತರಿಗೆ ಶಿಫಾರಸ್ಸು ಮಾಡುವುದರೊಂದಿಗೆ ತರಬೇತಿಯನ್ನು ಸಹ ನೀಡಲಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅನುಗುಣವಾಗಿ ಸಂಶೋಧನೆಗಳು ಮುಂದುವರೆದಿವೆ. ಮಾವು, ದಾಳಿಂಬೆ, ತೆಂಗು, ಅಡಿಕೆ, ಈರುಳ್ಳಿ, ಸೇವಂತಿ, ಚೆಂಡು ಹೂವು, ಶೇಂಗಾ, ರಾಗಿ, ಅಣಬೆ ತಳಿಗಳ ಹೊಸ ತಳಿಗಳ ಸಂಶೋಧನೆ ಕಾರ್ಯ ನಡೆಯುತ್ತಿದೆ.

**ರೈತರ ಜೀವನ ಮಟ್ಟ ಸುಧಾರಣೆಗೆ ಬೆನ್ನೆಲುಬು:**

ಬಬ್ಬೂರು ಸಂಶೋಧನಾ ಕೇಂದ್ರವು ರೈತರ ಜೀವನ ಮಟ್ಟ ಸುಧಾರಿಸಲು, ಬೆಳೆದ ಬೆಳೆಗಳಿಗೆ ಮೌಲ್ಯ ದೊರಕಿಸಿಕೊಡುವ ನಿಟ್ಟಿನಲ್ಲಿ ಸದಾ ಬದ್ಧವಾಗಿದೆ. ಇಲ್ಲಿ ರೈತರಿಗೆ ತರಬೇತಿಗಳು ಹಾಗೂ ಪ್ರಾತ್ಯಕ್ಷತೆಗಳನ್ನು ಸಹ ನೀಡಲಾಗುತ್ತಿದೆ. ರೈತರಿಗೆ ಸಮಗ್ರ ಬೇಸಾಯ ಪದ್ಧತಿ ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡುತ್ತಿದೆ. ಬಬ್ಬೂರು ಫಾರಂ ಕೃಷಿ ತಾಂತ್ರಿಕತೆ ವಿಭಾಗದಿಂದ ರೂಪಿಸಲಾಗಿರುವ ಸೈಕಲ್ ವೀಡರ್, ಕಾಫಿ ರೇಕರ್‌ಗಳು ರೈತರಿಗೆ ಉಪಯುಕ್ತವಾಗಿವೆ. ಇಲ್ಲಿ ಶೇಂಗಾ ಬೆಳೆಗೆ ಮೌಲ್ಯ ವರ್ಧನೆಯನ್ನು ರೈತರೇ ಹೆಚ್ಚಿಸಿಕೊಳ್ಳಲು ಎಲ್ಲಾ ರೀತಿಯ ಸವಲತ್ತುಗಳನ್ನು ಒದಗಿಸಲಾಗಿದೆ. ರೈತರು ಶೇಂಗಾ ಚಿಕ್ಕಿ, ಕೋಲ್ಡ್ ಪ್ರೆಸ್ ಶೇಂಗಾ ಎಣ್ಣೆ ತೆಗೆಯಲು ಅವಕಾಶ ಮಾಡಿಕೊಡಲಾಗಿದೆ. ರೈತರು ಬೀಜ ಮಾರಾಟ ಮಾಡಲು ಬಯಸಿದರೆ ಈ ಸಂಶೋಧನಾ ಕೇಂದ್ರದಲ್ಲಿಯೇ ಅವುಗಳನ್ನು ಪ್ರಮಾಣೀಕರಿಸಿ ನೀಡಲಾಗುತ್ತಿದೆ.

**ನವ ಸಂಶೋಧನೆಗೆ ಮುನ್ನುಡಿ:**

ಬಬ್ಬೂರು ಕೃಷಿ ಸಂಶೋಧನಾ ಕೇಂದ್ರ ನವ ಸಂಶೋಧನೆಗೆ ಮುನ್ನಡಿ ಬರೆದಿದ್ದು, ಇಲ್ಲಿ ಅಭಿವೃದ್ಧಿ ಪಡಿಸಲಾದ ಶೇಂಗಾ ತಳಿ ಕೆ–1812 (ಕದರಿ ಲೇಪಾಕ್ಷಿ), ಯಂತ್ರ ಚಾಲಿತ ಕೊಯ್ಲಿಗೆ ಸೂಕ್ತವಾದ ಕಡಲೆ ತಳಿ ಎನ್.ಬಿ.ಇ.ಜಿ–47, ಹಾಗೂ ಬಿಳಿ ರಾಗಿ ತಳಿ, ಕೆ.ಎಂ.ಆರ್ –340 ರೈತರಲ್ಲಿ ಹೊಸ ಭರವಸೆ ಮೂಡಿಸಿವೆ. ಕದರಿ ಲೇಪಾಕ್ಷಿ ತಳಿಯು ಅಧಿಕ ಇಳುವರಿ ನೀಡುವುದರ ಜೊತೆಗೆ ಕಾಳುಗಳಲ್ಲಿ ಶೇ.51 ರಷ್ಟು ಎಣ್ಣೆ ಅಂಶವನ್ನು ಒಳಗೊಂಡಿದೆ. ಎಲೆ ಚುಕ್ಕೆ, ತುಕ್ಕು, ರಂಗೋಲಿ ಹುಳಿ, ಸ್ಪೋಡೋಪ್ಟೇರಾ ಸೇರಿದಂತೆ ಹಲವು ಕೀಟಗಳ ಬಾಧೆ ತಡೆಯ ಕ್ಷಮತೆ ಹೊಂದಿದೆ. ಹೆಚ್ಚು ಹಸಿರಾಗಿರುವ ಈ ಶೇಂಗಾ ತಳಿಯು ಮೇವನ್ನು ಕೂಡ ಒದಗಿಸಲಿದೆ. ಯಂತ್ರ ಚಾಲಿತ ಕಡಳೆ ತಳಿಯು ರೈತರಿಗೆ ಅನುಕೂಲವಾಗಿದ್ದು, ನೀರಾವರಿ ಬಿತ್ತನೆಗೆ ಸೂಕ್ತವಾಗಿದೆ. ಹೆಚ್ಚು ಮಳೆ, ಸೊರಗು ರೋಗಕ್ಕೂ ಸಹಿಷ್ಣುತೆ ಹೊಂದಿದೆ. ಅಧಿಕ ಇಳುವರಿ ಜೊತೆ ಇದರ ಕಾಳುಗಳು ಅಧಿಕ ಪ್ರೋಟಿನ್ ಹಾಗೂ ನಾರಿನ ಅಂಶವನ್ನು ಹೊಂದಿವೆ. ಇನ್ನು ಬಿಳಿ ರಾಗಿ ತಳಿಯು ಬೇಕರಿ ಹಾಗೂ ಮೌಲ್ಯವರ್ಧಿತ ತಿನಿಸುಗಳಿಗೆ ಉಪಯುಕ್ತವಾಗಿದೆ. ಕುತ್ತಿಗೆ ಮತ್ತು ಬೆಂಕಿ ರೋಗಗಳ ನಿರೋಧ ಶಕ್ತಿಯನ್ನು ಹೊಂದಿದೆ. ಹಾಗಾಗಿ ಈ ತಳಿಗಳ ಬಗ್ಗೆ ರೈತರು ಹೆಚ್ಚಿನ ಒಲವು ತೋರುತ್ತಿದ್ದಾರೆ.

**ವಿವಿಧ ಬೆಳೆಗಳ ತಳಿ ಅಭಿವೃದ್ಧಿ:**

ಕಳೆದ ನೂರು ವರ್ಷಗಳ ಅವಧಿಯಲ್ಲಿ ಬಬ್ಬೂರು ಫಾರಂ 24 ಬೆಳೆಗಳಲ್ಲಿ 94 ತಳಿಗಳು ಮತ್ತು ಸಂಕಿರಣ ತಳಿಗಳನ್ನು ಹಾಗೂ 69 ಬೇಸಾಯ ಕ್ರಮಗಳು, ಕೃಷಿ ತಾಂತ್ರಿಕತೆ ಮತ್ತು ಸಸ್ಯ

## ರೋಗ ನಿರೋಧಕ ಶಕ್ತಿವುಳ್ಳ ತಳಿಗಳ ಅಭಿವೃದ್ಧಿಗೆ ಕರೆ

**ಕೃಷಿ ಹಾಗೂ ತೋಟಗಾರಿಕೆ ವಿಶ್ವವಿದ್ಯಾಲಯಗಳಲ್ಲಿ ಪದವಿ ವಿದ್ಯಾರ್ಥಿಗಳನ್ನು ತಯಾರು ಮಾಡುವುದರ ಜೊತೆಗೆ, ಸಂಶೋಧನೆ ಹೆಚ್ಚಿನ ಒತ್ತು ನೀಡಬೇಕು. ಕೃಷಿ ವಿಜ್ಞಾನಿಗಳು ಹವಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳುವ, ಬರ ಸಹಿಷ್ಣುತೆ ಹಾಗೂ ರೋಗ ನಿರೋಧಕ ಶಕ್ತಿವುಳ್ಳ ತಳಿಗಳನ್ನು ಅಭಿವೃದ್ಧಿ ಪಡಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಶತಮಾನೋತ್ಸವ ಸಮಾರಂಭದಲ್ಲಿ ಕರೆ ನೀಡಿದರು.**

**ದೇಶದ ಅಭಿವೃದ್ಧಿ ಅವಲೋಕಿಸಲು ಆ ದೇಶದಲ್ಲಿನ ವಿಶ್ವವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರಗಳು ಅಳತೆಗೋಲುಗಳಾಗಿವೆ. ಇಲ್ಲಿ ಸಂಶೋಧನೆಗಳು ಫಲಪ್ರದವಾದರೆ ದೇಶ ಅಭಿವೃದ್ಧಿ ಆಗುತ್ತದೆ. ಬರಗಾಲ, ಅತಿವೃಷ್ಠಿ, ಬೆಳೆಗೆ ತಕ್ಕ ಬೆಲೆ ದೊರಕದೆ, ಹವಾಮಾನ ಬದಲಾವಣೆಗೆ ಹೊಸ ತಳಿ ಸಿಗದೆ ರೈತರು ಸಂಕಷ್ಟ ಎದುರಿಸುತ್ತಿದ್ದಾರೆ. ಇವುಗಳಿಗೆ ಉತ್ತರವನ್ನು ಕೃಷಿ ಹಾಗೂ ತೋಟಗಾರಿಕೆ ಸಂಶೋಧನಾ ಕೇಂದ್ರಗಳು ಹುಡುಕಬೇಕು. ಇಲ್ಲಿನ ಸಂಶೋಧನೆಗಳು ರೈತರ ಭೂಮಿಯಲ್ಲಿ ಫಲಕಾಣಬೇಕು. ವಿಸ್ತರಣಾ ಚಟುವಟಿಕೆಗಳು ಹೆಚ್ಚಾಗಬೇಕು ಎಂದು ಸಲಹೆ ನೀಡಿದರು.**

**ಬರಗಾಲ ಬಂದರೆ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಜಗತ್ತೇ ಹವಾಮಾನ ಬದಲಾವಣೆಗೆ ತುತ್ತಾಗಿದೆ. ಇಂತಹ ಸಂದರ್ಭದಲ್ಲಿ ಹೆಚ್ಚು ರೋಗ ನಿರೋಧಕ ಹಾಗೂ ಬರ ಸಹಿಷ್ಣುತೆ ಶಕ್ತಿ ಇರುವ ಹಾಗೂ ಕಡಿಮೆ ನೀರಿನಲ್ಲಿ ಬೆಳೆಯುವ ತಳಿಗಳನ್ನು ಅಭಿವೃದ್ಧಿ ಪಡಿಸಬೇಕು. ರೈತರ ಸಂಕಷ್ಟಕ್ಕೆ ಸ್ಪಂದನೆ ಮಾಡಬೇಕು. ಸಂಶೋಧನೆಗೆ ಸರ್ಕಾರ ಎಲ್ಲಾ ರೀತಿಯ ಅನುದಾನ ಹಾಗೂ ಸಹಕಾರ ನೀಡಲಿದೆ ಎಂದು ಅವರು ಈ ಸಂದರ್ಭದಲ್ಲಿ ಭರವಸೆ ನೀಡಿದರು.**



Downloaded From:www.kpscvaani.com

ಸಂರಕ್ಷಣಾ ತಾಂತ್ರಿಕತೆಗಳನ್ನು ರೈತರಿಗೆ ಶಿಫಾರಸ್ಸು ಮಾಡಿದೆ. ವಿವಿಧ ಬೆಳೆಗಳ ಸುಧಾರಿತ ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡಿದೆ. ಇದರಲ್ಲಿ ಭತ್ತದಲ್ಲಿ 11 ತಳಿ, ಜೋಳ 5, ಗೋವಿನ ಜೋಳ 2 ಸಂಕರಣ ತಳಿಗಳನ್ನು ಪರಿಚಯಿಸಲಾಗಿದೆ. ಸಿರಿಧಾನ್ಯಗಳಾದ ರಾಗಿಯಲ್ಲಿ 5 ತಳಿ, ನವಣೆ 2, ಊದಲು 1, ದ್ವಿದಳ ಬೆಳೆಗಳಾದ ಹೆಸರು 2, ಹುರುಳಿ 1, ಉದ್ದು 2, ಅಲಸಂದಿ 2, ತೊಗರಿ 1 ಮತ್ತು ಕಡಲೆಯಲ್ಲಿ 12 ತಳಿಗಳನ್ನು ಬಿಡುಗಡೆ ಮಾಡಲಾಗಿದೆ. ವಾಣಿಜ್ಯ ಬೆಳೆಗಳಾದ ಕಬ್ಬು ಬೆಳೆಯಲ್ಲಿ 6 ತಳಿಗಳು, ಹತ್ತಿ 18, ಮೆಣಸಿನಕಾಯಿ 2 ತಳಿಗಳ ಸಂಶೋಧನೆ ಮಾಡಿ, ರೈತರಿಗೆ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ. ಎಳ್ಳು 1, ಹರಳು 9, ಸೂರ್ಯಕಾಂತಿ 5, ಕುಸುಬೆ 2, ಶೇಂಗಾ 7, ಸಾಸಿವೆ 2 ತಳಿಗಳನ್ನು ಶಿಫಾರಸ್ಸು ಮಾಡಲಾಗಿದೆ. ವಿವಿಧ ಬೇಸಾಯ ಕ್ರಮಗಳು ಮತ್ತು ಸಸ್ಯ ಸಂರಕ್ಷಣಾ ತಾಂತ್ರಿಕತೆಗಳನ್ನು ಆಯಾ ಸಂದರ್ಭದಲ್ಲಿ ತಕ್ಕಂತೆ ಕೇಂದ್ರದಿಂದ ಬಿಡುಗಡೆಗೊಳಿಸಲಾಗಿದೆ. ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಈರುಳ್ಳಿ, ಮಾವು ಮತ್ತು ದಾಳಿಂಬೆಗಳಲ್ಲಿ ಸಂಶೋಧನೆ ನಡೆಸಿ, ಉತ್ಕೃಷ್ಟವಾದ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಮಾರಾಟ ಮಾಡಲಾಗಿದೆ.



**ತೋಟಗಾರಿಕೆ ವಿಶ್ವವಿದ್ಯಾಲಯದೊಂದಿಗೆ ಸಮ್ಮಿಳನ:**

ಸ್ವಾತಂತ್ರ್ಯ ಪೂರ್ವದಲ್ಲಿ ಕೃಷಿ ಸಂಶೋಧನಾ ಕೇಂದ್ರವಾಗಿ ಆರಂಭವಾದ ಹಿರಿಯೂರಿನ ಬಬ್ಬೂರು ಕೃಷಿ ಸಂಶೋಧನಾ ಕೇಂದ್ರ, ಸ್ವಾತಂತ್ರ್ಯ ನಂತರ 1965 ವರೆಗೆ ಕೃಷಿ ಇಲಾಖೆಯ ಬೀಜೋತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ನಂತರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆಡಳಿತಕ್ಕೆ ಒಳಪಟ್ಟು ಕೃಷಿ ಸಂಶೋಧನಾ ಕೇಂದ್ರವಾಗಿ ಪರಿವರ್ತಿತವಾಯಿತು. 2008ರಲ್ಲಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯದ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವಾಗಿ ಕಾರ್ಯನಿರ್ವಹಿಸಿತು. ಪ್ರಸ್ತುತ 2013ರಲ್ಲಿ ಸ್ಥಾಪನೆಯಾದ ಕೆಳದಿ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆಡಳಿತಕ್ಕೆ ಒಳಪಟ್ಟಿದೆ. ಇದರೊಂದಿಗೆ ಹಿರಿಯೂರು ನಗರದಲ್ಲಿನ ತೋಟಗಾರಿಕೆ ವಿಶ್ವವಿದ್ಯಾಲಯದ ಕಾಲೇಜಿನೊಂದಿಗೆ ಸಮ್ಮಿಳನಗೊಂಡಿದೆ. ಹಿರಿಯೂರು ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಇದುವರೆಗೂ 600 ಸ್ನಾತಕೋತ್ತರ ವಿದ್ಯಾರ್ಥಿಗಳು ವ್ಯಾಸಂಗ ಪೂರ್ಣಗೊಳಿಸಿದ್ದಾರೆ. ಸದ್ಯ 369 ವಿದ್ಯಾರ್ಥಿಗಳು ಓದುತ್ತಿದಾರೆ. ಇಲ್ಲಿ ಉನ್ನತ ಮಟ್ಟದ ವಿದ್ಯಾಭ್ಯಾಸ ಲಭಿಸುತ್ತಿದ್ದು, ಹಲವಾರು ವಿದ್ಯಾರ್ಥಿಗಳು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಕಿರಿಯ ಸಂಶೋಧನಾ ಫೆಲೋಶಿಫ್ ಪಡೆದಿದ್ದಾರೆ. ಕೆಲವರು ವಿಜ್ಞಾನಿಗಳಾಗಿದ್ದಾರೆ, ಕೆಲವರು ಸ್ವಂತ ಉದ್ದಿಮೆಗಳನ್ನು ತೆರೆದು ರಾಜ್ಯಕ್ಕೆ ಕೊಡುಗೆ ನೀಡುತ್ತಿದ್ದಾರೆ.



ಬಬ್ಬೂರು ಕೃಷಿ ಸಂಶೋಧನಾ ಕೇಂದ್ರದ ಶತಮಾನೋತ್ಸವ ಸಮಾರಂಭಕ್ಕೆ ಕೃಷಿ ಸಚಿವರಾದ ಎನ್. ಚೆಲುವರಾಯಸ್ವಾಮಿ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಮತ್ತು ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಿ. ಸುಧಾಕರ್, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್.ಸಿ. ಜಗದೀಶ್, ಶಾಸಕರುಗಳಾದ ಟಿ. ರಘುಮೂರ್ತಿ, ಎನ್.ವೈ. ಗೋಪಾಲಕೃಷ್ಣ, ಬಿ.ಜಿ. ಗೋವಿಂದಪ್ಪ, ಕೆ.ಸಿ. ವೀರೇಂದ್ರ ಪಪ್ಪಿ ಮುಂತಾದವರು ಸಾಕ್ಷಿಯಾದರು.



Downloaded From:www.kpscvaani.com







# ಹವಾನಿಯಂತ್ರಣ ರಹಿತ ಸ್ಲೀಪರ್

# "ಪಲ್ಲಕ್ಕಿ" ಬಸ್‌ಗಳ ಲೋಕಾರ್ಪಣೆ

**ಹವಾನಿಯಂತ್ರಿತ ಸ್ಲೀಪರ್ ಬಸ್‌ಗಳನ್ನಷ್ಟೇ ಬ್ರ್ಯಾಂಡ್ ಮಾಡುತ್ತಿದ್ದ ಕೆಎಸ್‌ಆರ್‌ಟಿಸಿ ಇದೇ ಮೊದಲ ಬಾರಿಗೆ ಹವಾನಿಯಂತ್ರಣ ರಹಿತ ಪಲ್ಲಕ್ಕಿ ಎಂಬ ಬಸ್‌ಗಳನ್ನು ಲೋಕಾರ್ಪಣೆಗೊಳಿಸಿದೆ**

ಮುನಿರಾಜ.ಎಂ

ರಾಜ್ಯ ರಸ್ತೆ ನಿಗಮದ ನೂತನ ಕರ್ನಾಟಕ ಸಾರಿಗೆ ಹಾಗೂ 40 ಹವಾನಿಯಂತ್ರಣರಹಿತ ಸ್ಲೀಪರ್ ಪಲ್ಲಕ್ಕಿ ಬಸ್‌ಗಳ ಸಂಚಾರಕ್ಕೆ ಅಕ್ಟೋಬರ್ 7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ವಿಧಾನಸೌಧದ ಮುಂಭಾಗ ನಡೆದ ಈ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆಶಿವಕುಮಾರ್, ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ, ಆಹಾರ ಮತ್ತು ನಾಗರಿಕ ಸಚಿವ ಕೆ.ಹೆಚ್.ಮುನಿಯಪ್ಪ, ಅರಣ್ಯ ಸಚಿವರಾದ ಈಶ್ವರ ಖಂಡ್ರೆ, ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ಸೇರಿದಂತೆ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

**"ಸಂತೋಷವು ಪ್ರಯಾಣಿಸುತ್ತಿದೆ":**

'ಸಂತೋಷವು ಪ್ರಯಾಣಿಸುತ್ತಿದೆ' ಎಂಬ ಘೋಷವಾಕ್ಯವನ್ನು ಹೊಂದಿರುವ ಈ ಹವಾನಿಯಂತ್ರಣರಹಿತ ಪಲ್ಲಕ್ಕಿ ಬಸ್‌ಗಳ ದರವು ಹವಾನಿಯಂತ್ರಿತ ಬಸ್ ದರಕ್ಕಿಂತ ಕಡಿಮೆ ಇರುವುದರಿಂದ ಜನರು ಸಂತೋಷದಿಂದ ಪಲ್ಲಕ್ಕಿ ಬಸ್‌ಗಳಲ್ಲಿ ಸಂಚರಿಸಬಹುದಾಗಿದೆ.



Downloaded From:www.kpscvaani.com



> ಜನರ ಅಭಿರುಚಿಗೆ ತಕ್ಕಂತೆ ಕೆಎಸ್‌ಆರ್‌ಟಿಸಿಯ ನೂತನ ಪಲ್ಲಕ್ಕಿ ಬಸ್‌ಗಳನ್ನು ಒದಗಿಸಲಾಗುತ್ತಿದೆ. ಎಸಿ ಬಸ್‌ಗಳಿಗಿಂತ ನಾನ್ ಎಸಿ ಬಸ್‌ಗಳಿಗೆ ಪ್ರಯಾಣಿಕರಿಂದ ಹೆಚ್ಚು ಬೇಡಿಕೆ ಬರುತ್ತಿದ್ದರಿಂದ ನಾನ್ ಎಸಿ ಬಸ್‌ಗಳಿಗೆ ಚಾಲನೆ ನೀಡಲಾಗಿದೆ.
>
> **–ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವರು**

**"ಪಲ್ಲಕ್ಕಿ" ಬಸ್ ವಿಶೇಷ :**

ಕೆಎಸ್‌ಆರ್‌ಟಿಸಿಯ ಈ ನಾನ್ ಎಸಿ 'ಪಲ್ಲಕ್ಕಿ' ಬಸ್ 11.3 ಮೀ. ಉದ್ದವಿದ್ದು, ಬಿಎಸ್–6 ತಂತ್ರಜ್ಞಾನ ಮಾದರಿಯ ಹೆಚ್‌ಪಿ ಇಂಜಿನ್ ಹೊಂದಿದೆ. ಹೈಟೆಕ್ ವಿನ್ಯಾಸದ 30 ಸ್ಲೀಪರ್ ಬರ್ತ್ ಸೀಟ್‌ಗಳು, ಪ್ರತಿ ಸೀಟ್‌ಗೆ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಚಾರ್ಜಿಂಗ್ ಹಾಗೂ ಮೊಬೈಲ್ ಸ್ಟ್ಯಾಂಡ್ ವ್ಯವಸ್ಥೆ, ಓದಲು ಉತ್ತಮ ಎಲ್‌ಇಡಿ ಲೈಟ್ ಅಳವಡಿಕೆ, ಬಸ್‌ಗಳಲ್ಲಿ ಆಡಿಯೋ ಸ್ಪೀಕರ್ ಮೂಲಕ ಜನರಿಗೆ ಮಾಹಿತಿ ನೀಡುವ ವ್ಯವಸ್ಥೆ ಹಾಗೂ ಸಾರ್ವಜನಿಕ ಮಾಹಿತಿ ಉದ್ಘೋಷಣಾ ವ್ಯವಸ್ಥೆ, ಡಿಜಿಟಲ್ ಗಡಿಯಾರ, ಹಾಗೆಯೇ ಎಲ್‌ಇಡಿ ಫ್ಲೋರ್, ಪ್ರಯಾಣಿಕರಿಗೆ ತಲೆದಿಂಬಿನ ವ್ಯವಸ್ಥೆ, ಚಪ್ಪಲಿ ಇಡಲು ಸ್ಥಳಾವಕಾಶ ಎಲ್ಲವನ್ನೂ ಹೊಂದಿದೆ. ಚಾಲಕರಿಗೆ ಸಹಾಯವಾಗಲು ಬಸ್‌ನ ಹಿಂಭಾಗದಲ್ಲಿ ಹೈಟೆಕ್ ಕ್ಯಾಮೆರಾ ಅಳವಡಿಸಲಾಗಿದೆ. ಈ ಹಲವಾರು ವಿಶೇಷ ಸೌಲಭ್ಯವನ್ನು ಹೊಂದಿರುವ ಈ ಬಸ್‌ಗೆ 'ಪಲ್ಲಕ್ಕಿ' ಎಂಬ ಹೆಸರನ್ನು ಸ್ವತಃ ರಾಮಲಿಂಗಾರೆಡ್ಡಿ ಅವರೇ ಸೂಚಿಸಿರುವುದು ಕೂಡ ವಿಶೇಷ.

ಪ್ರತಿ ಬಸ್‌ಗೆ 46 ಲಕ್ಷ ರೂಪಾಯಿ ವೆಚ್ಚವಾಗಿದ್ದು, ನಿಗಮವೇ ವೆಚ್ಚವನ್ನು ಭರಿಸಿದೆ. ಮಂಗಳೂರು, ಉಡುಪಿ, ಪುತ್ತೂರು, ಶಿವಮೊಗ್ಗ, ಕಾರವಾರ, ಬೆಳಗಾವಿ, ಹುಬ್ಬಳ್ಳಿ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಯಾದಗಿರಿ ಸಹಿತ ರಾಜ್ಯದ ಬೇರೆ ಬೇರೆ ಊರುಗಳಿಗೆ ಸಂಚರಿಸಲಿವೆ. ಜೊತೆಗೆ ಹೊರ ರಾಜ್ಯದ ಪಾಂಡಿಚೇರಿ, ಚೆನ್ನೈ, ಕೊಯಮತ್ತೂರು, ಮಂತ್ರಾಲಯ, ಕುಂಭಕೋಣಕ್ಕೆ ಪ್ರಯಾಣಿಸುವವರೆಗೂ ಪಲ್ಲಕ್ಕಿ ಬಸ್ ಸೌಲಭ್ಯವಿದೆ.

**100 ಸಾರಿಗೆ ಬಸ್:**

ಉನ್ನತೀಕರಿಸಲಾಗಿರುವ 100 ಸಾರಿಗೆ ಬಸ್‌ಗಳಿಗೂ ಈ ಸಂದರ್ಭದಲ್ಲಿ ಚಾಲನೆ ನೀಡಲಾಯಿತು. ಈ ಬಸ್‌ಗಳಲ್ಲಿ ಸೀಟುಗಳ ಸಂಖ್ಯೆಯನ್ನು 54/56 ರಿಂದ 51ಕ್ಕೆ ಇಳಿಸಲಾಗಿದೆ. ಕಿಟಕಿ, ಮುಂಭಾಗದ ಗಾಜುಗಳನ್ನು ದೊಡ್ಡದಾಗಿ ಮಾಡಲಾಗಿದೆ. ಉತ್ತಮ ಸೀಟುಗಳನ್ನು ಅಳವಡಿಸಲಾಗಿದೆ. ಎಲ್ಲ ಜಿಲ್ಲೆಗಳಿಗೆ ಈ ಸಾರಿಗೆ ಬಸ್‌ಗಳು ಸಂಚರಿಸಲಿವೆ.

**"ಕರ್ನಾಟಕ ಸಾರಿಗೆ" – ವಾಹನಗಳ ವಿಶೇಷತೆ:**

ಕರ್ನಾಟಕ ಸಾರಿಗೆ ವಾಹನಗಳು 10.5 ಮೀ. ಉದ್ದದ 210 ವೀಲ್‌ಬೇಸ್ ವೈಕಿಂಗ್ ಲೇಲ್ಯಾಮಡ್ ಚಾಸಿಗಳ ಮೇಲೆ ವಾಹನದ ನಿರ್ಮಾಣ ಮಾಡಲಾಗಿದೆ. ಬಿಎಸ್–6 ತಂತ್ರಜ್ಞಾನ ಮಾದರಿಯ 197 ಹೆಚ್‌ಪಿ ಇಂಜಿನ್ ಸಾಮರ್ಥ್ಯ ಹೊಂದಿದೆ. ಸುಸಜ್ಜಿತವಾಗಿ ವಿನ್ಯಾಸಗೊಳಿಸಿದ 50+1 ಆಸನಗಳನ್ನು ಒಳಗೊಂಡಿದೆ. ಚಾಲಕರಿಗೆ ಸಹಕಾರಿಯಾಗುವಂತೆ ಮುಂಭಾಗದ ಡ್ಯಾಶ್ ಕ್ಯಾಮರಾ ಹಾಗೂ ಹಿನ್ನೋಟ ಕ್ಯಾಮೆರಾ ಅಳವಾಡಿಸಲಾಗಿದೆ. ಬೆಂಕಿ ಪತ್ತೆ ಹಾಗೂ ಮುನ್ನೆಚ್ಚರಿಕಾ ತಂತ್ರಜ್ಞಾನ ವ್ಯವಸ್ಥೆ, ಎಲೆಕ್ಟ್ರಾನಿಕ್ ವಾಹನ ಸ್ಥಿರತೆ ನಿಯಂತ್ರಣ ವ್ಯವಸ್ಥೆ ಅಳವಡಿಸಲಾಗಿದೆ.

ಇದುವರೆಗೆ ನಿಗಮದಲ್ಲಿ ಪಾಯಿಂಟ್ ಟು ಪಾಯಿಂಟ್ ಹಾಗೂ ದೂರದ ಊರುಗಳ ವೇಗದೂತ ಸಾರಿಗೆಗಳಿಗೆ ಒಂದೇ ಮಾದರಿಯ ಬಸ್ಸುಗಳನ್ನು ಕಾರ್ಯಾಚರಿಸಲಾಗುತ್ತಿತ್ತು. ಪ್ರಸ್ತುತ ಪಾಯಿಂಟ್ ಟು ಪಾಯಿಂಟ್ ಸಾರಿಗೆಗಳಿಗೆ ಪ್ರತ್ಯೇಕ ನೂತನ ಮಾದರಿಯ ಬಸ್ಸುಗಳನ್ನು ಪರಿಚಯ ಮಾಡಲಾಗಿದೆ.

4 ನಿಗಮಗಳಲ್ಲಿ 24 ಸಾವಿರ ಬಸ್‌ಗಳು ಓಡಾಟ ಮಾಡುತ್ತಿವೆ. 4 ನಿಗಮಗಳಲ್ಲಿ ಪ್ರತಿವರ್ಷ ಶೇ. 10 ರಷ್ಟು ಬಸ್‌ಗಳು ಸ್ಕ್ರಾಪ್ ಆಗುತ್ತಿವೆ. ಕಳೆದ 6 ವರ್ಷಗಳಿಂದ ಹೊಸ ಬಸ್ ಖರೀದಿ ಮಾಡಿರುವುದಿಲ್ಲ. ಈಗ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಪಲ್ಲಕ್ಕಿ ಹೆಸರಲ್ಲಿ 100 ನೂತನ ಬಸ್‌ಗಳು ಹಾಗೂ 40 ಹವಾನಿಯಂತ್ರಣ ರಹಿತ ಸ್ಲೀಪರ್ ಬಸ್‌ಗಳನ್ನು ಸೇರ್ಪಡೆ ಮಾಡಿದ್ದು, ಇನ್ನೊಂದು ವರ್ಷದಲ್ಲಿ 1 ಸಾವಿರ ಬಸ್‌ಗಳನ್ನು ಸೇರ್ಪಡೆ ಮಾಡಲಿದೆ. ಜನಸಂಖ್ಯೆಗನುಗುಣವಾಗಿ ಸಂಸ್ಥೆಯಲ್ಲಿ ಬಸ್‌ಗಳು ಇರುವುದಿಲ್ಲ. ಈಗಿರುವ ಜನಸಂಖ್ಯೆಗೆ ಹೋಲಿಸಿದರೆ ಇನ್ನು 12 ಸಾವಿರ ಬಸ್‌ಗಳ ಅಗತ್ಯವಿದೆ. ಬೆಂಗಳೂರು ಹಾಗೂ ಸುತ್ತಲಿನ ಪ್ರದೇಶಗಳಲ್ಲಿ 2 ಕೋಟಿ ಜನಸಂಖ್ಯೆ ವಾಸವಿದ್ದಾರೆ. ಈಗ ನಾನ್ ಎಸಿ ಬಸ್‌ಗಳಿಗೆ ಬೇಡಿಕೆ ಇದಿದ್ದರಿಂದ ವಿನೂತನ ಮಾದರಿಯ ಬಸ್‌ಗಳಿಗೆ ಚಾಲನೆ ನೀಡಲಾಗಿದೆ.



Downloaded From:www.kpscvaani.com



# ಪತ್ರಿಕಾ ವಿತರಕರಿಗೆ ಮೊದಲ ಬಾರಿಗೆ ಒಲಿದ ರಾಜ್ಯೋತ್ಸವ ಪ್ರಶಸ್ತಿ

ಅಂಶಿ ಪ್ರಸನ್ನಕುಮಾರ್



ಎಲೆಮರೆಕಾಯಿಯಂತೆ ಸೇವೆ ಸಲ್ಲಿಸುತ್ತಿರುವ ಪತ್ರಿಕಾ ವಿತರಕರೊಬ್ಬರಿಗೆ ರಾಜ್ಯದ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಮೈಸೂರಿನಲ್ಲಿ ಕಳೆದ 56 ವರ್ಷಗಳಿಂದಲೂ ಸೈಕಲ್ ತುಳಿಯುತ್ತಾ, ಮನೆ ಮನೆಗೆ ಪತ್ರಿಕೆಗಳನ್ನು ವಿತರಿಸುತ್ತಿರುವ ಹಿರಿಯ ವ್ಯಕ್ತಿ ಜವರಪ್ಪ ಅವರು ಈ ಹೆಗ್ಗಳಿಕೆಗೆ ಪಾತ್ರರಾದವರು.

ಪತ್ರಕರ್ತರು ಪತ್ರಿಕೆಗಳಲ್ಲಿ ಸುದ್ದಿಗಳನ್ನು ಬರೆಯಬಹುದು. ಆದರೆ ಅವುಗಳನ್ನು ಮಳೆ- ಗಾಳಿ- ಚಳಿ ಎನ್ನದೇ ಬೆಳಗಿನ ಜಾವ ಮನೆ ಮನೆಗಳಿಗೆ ತಲುಪಿಸುವ, ಆ ಮೂಲಕ ಸುದ್ದಿ ಹಂಚುವ ಪತ್ರಿಕಾ ವಿತರಕರು ಮಾಧ್ಯಮದ ಅವಿಭಾಜ್ಯ ಅಂಗವೇ ಆಗಿ ಹೋಗಿದ್ದಾರೆ. ಅದರಲ್ಲೂ ಮೂರು ವರ್ಷಗಳ ಹಿಂದೆ ಕಾಡಿದ ಮಹಾಮಾರಿ ಕೋವಿಡ್–19 ಸಂದರ್ಭದಲ್ಲಿ ಕೂಡ ಅವರು ಕಾಯಕನಿಷ್ಠೆ ಬಿಡಲಿಲ್ಲ. ಹೀಗಾಗಿ ಅಸಂಘಟಿತ ಕಾರ್ಮಿಕ ವಲಯಕ್ಕೆ ಸೇರಿರುವ ಪತ್ರಿಕಾ ವಿತರಕರನ್ನು ಕೂಡ ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಬೇಕು ಎಂದು ತುಮಕೂರಿನಲ್ಲಿ ನಡೆದ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದಲ್ಲಿ ಆಗ್ರಹಿಸಲಾಗಿತ್ತು. ಈ ಬಗ್ಗೆ ಸೂಕ್ತ ಕ್ರಮ ವಹಿಸುವುದಾಗಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ. ಪ್ರಭಾಕರ್ ಅವರು ಭರವಸೆ ನೀಡಿದ್ದರು. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದರಿಂದ ಇದೇ ಮೊದಲ ಬಾರಿಗೆ ಮಾಧ್ಯಮ ಕ್ಷೇತ್ರದಿಂದ, ಅದರ ಅವಿಭಾಜ್ಯ ಅಂಗವೇ ಆಗಿರುವ ಪತ್ರಿಕಾ ವಿತರಕರಿಗೂ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ.

1952 ರಲ್ಲಿ ಮೈಸೂರಿನ ಚಾಮುಂಡಿಪುರಂಗೆ ಹೊಂದಿಕೊಂಡಂತಿರುವ ಮೇದರಕೇರಿಯಲ್ಲಿ ಜನಿಸಿದ ಜವರಪ್ಪ ಅವರು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆ ಗೊತ್ತು. ಪುಸ್ತಕ ಓದುವ ಹವ್ಯಾಸ ಇದೆ. ಪತ್ನಿ, ಮೂವರು ಮಕ್ಕಳಿದ್ದಾರೆ.

ಜವರಪ್ಪ ಅವರ ತಂದೆ ರಾಮಯ್ಯ. ಅವರಿಗೆ ನಾಲ್ವರು ಮಕ್ಕಳು. ಜವರಪ್ಪ ಹತ್ತನೇ ತರಗತಿ ಓದುತ್ತಿರುವಾಗ ತಂದೆ ನಿಧನರಾದರು. ಹಿರಿಯ ಮಗನಾದ ಜವರಪ್ಪ ಮನೆಯ ಜವಾಬ್ದಾರಿಯ ನೊಗ ಹೊತ್ತರು. ಪತ್ರಿಕಾ ವಿತರಣೆ ಕಾಯಕ ಕೈಗೊಂಡರು. ಪ್ರತಿದಿನ ಮುಂಜಾನೆ ಕೆ.ಆರ್. ವೃತ್ತಕ್ಕೆ ತೆರಳಿ, ಪತ್ರಿಕೆಗಳನ್ನು ಖರೀದಿಸಿ, ಸೈಕಲ್ ಏರಿ ಹೊರಟು ವಿತರಣಾ ಕಾಯಕ ಮಾಡುತ್ತಾ ಬಂದರು. ಅವರಿಗೆ ಈ ಕಾಯಕ ಕೈಹಿಡಿದು, ಆರ್ಥಿಕವಾಗಿ ಸಹಾಯವಾಯಿತು. ಜೊತೆಗೆ ಬಟ್ಟೆ ಅಂಗಡಿಯಲ್ಲಿ ಮಾಡುವ ಸೇಲ್ಸ್‌ಮನ್ ಕೆಲಸ ಕೂಡ ನೆರವಾಗಿದೆ. ಇದರಿಂದಲೇ ಅವರು ಬದುಕು ಕಟ್ಟಿಕೊಂಡಿದ್ದಾರೆ.

ಸರಳ, ಸಜ್ಜನಿಕೆಯ ಜವರಪ್ಪ ಮಿತಭಾಷಿ. ಯಾರೊಂದಿಗೂ ವಿರಸ ಕಟ್ಟಿಕೊಂಡವರಲ್ಲ. ಈಗಲೂ ಅದೇ ಕಾಯಕನಿಷ್ಠೆ, ಬೆಳಗಿನ ಜಾವ ಐದು ಗಂಟೆಗೆ ಕೆ.ಆರ್. ಸರ್ಕಲ್‌ನಲ್ಲಿರುತ್ತಾರೆ. ಈಗ ಮಕ್ಕಳಾದ ರಮೇಶ್ ಹಾಗೂ ಭಾಸ್ಕರ್ ಕೂಡ ಅವರಿಗೆ ಸಾಥ್ ನೀಡಿದ್ದಾರೆ. ಪುತ್ರಿಯನ್ನು ಎಂ.ಕಾಂ ಓದಿಸಿದ್ದಾರೆ.

ಅವರು 15 ವರ್ಷದವನಿರುವಾಗ ಪತ್ರಿಕಾ ವಿತರಣೆ ಆರಂಭಿಸಿದ ಇವರು ಇವತ್ತಿಗೂ ಕೂಡ ಸೈಕಲ್‌ನಲ್ಲಿಯೇ ತೆರಳಿ ಮನೆ ಮನೆಗೆ ಪತ್ರಿಕೆಗಳನ್ನು ವಿತರಿಸುವ ಕಾಯಕ ಮಾಡುತ್ತಾರೆ.

ಮೈಸೂರು ನಗರ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷರಾದ ಬಿ. ಸುರೇಶ್, ಮೈಸೂರು ಅಧಿಕೃತ ಪತ್ರಿಕಾ ಪ್ರತಿನಿಧಿಗಳ ಸಂಘದ ಅದ್ಯಕ್ಷರಾದ ಪಿ. ಸುರೇಶ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಜಿ.ಎಸ್. ಹೋಮದೇವ್ ಸೇರಿದಂತೆ ಮೂರು ಸಂಘಟನೆಗಳ ಎಲ್ಲಾ ಪದಾಧಿಕಾರಿಗಳು, ಸದಸ್ಯರು ಜವರಪ್ಪ ಅವರನ್ನು ಅಭಿನಂದಿಸಿ, ರಾಜ್ಯ ಸರ್ಕಾರ ಪತ್ರಿಕಾ ವಿತರಕರನ್ನು ರಾಜ್ಯೋತ್ಸವ ಪ್ರಶಸ್ತಿಗೆ ಪರಿಗಣಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಈ ಬಾರಿ ಮಾಧ್ಯಮ ಕ್ಷೇತ್ರದ ಅವಿಭಾಜ್ಯ ಅಂಗವಾಗಿರುವ ಪತ್ರಿಕಾ ವಿತರಕ ಸಮುದಾಯದಿಂದ ಜವರಪ್ಪ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಇಡಿ ವಿತರಕ ಸಮುದಾಯದ ಕಾರ್ಯಕ್ಷಮತೆ ಮತ್ತು ಶ್ರಮವನ್ನು ರಾಜ್ಯ ಸರ್ಕಾರ ಮತ್ತು ಆಯ್ಕೆ ಸಮಿತಿಯು ಗುರುತಿಸಿ ಗೌರವಿಸಿದೆ.



Downloaded From:www.kpscvaani.com




# ಊಹಾಪೋಹ ಪತ್ರಿಕೋದ್ಯಮ ಅಪಾಯಕಾರಿ

ಬಿ.ಕೆ.ರಾಮಲಿಂಗಪ್ಪ

**ರಾಷ್ಟ್ರೀಯ ಪತ್ರಿಕಾ ದಿನಾಚರಣೆ ನಿಮಿತ್ತ 'ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ಮಾಧ್ಯಮಗಳು' ಎಂಬ ವಿಷಯ ಕುರಿತು ನಡೆದ ವಿಚಾರ ಸಂಕಿರಣದ ಸಂಕ್ಷಿಪ್ತ ಮಾಹಿತಿ.**

ತಂತ್ರಜ್ಞಾನವೆಂಬುದು ಬೆಂಕಿ ಇದ್ದ ಹಾಗೆ. ಅದರಿಂದ ಅಡುಗೆಯನ್ನು ಮಾಡಬಹುದು ಮತ್ತು ಮನೆಯನ್ನೂ ಸುಡಬಹುದು. ಅದನ್ನು ಉಪಯೋಗಿಸುವ ಮನೋಭಾವದ ಮೇಲೆ ನಿಂತಿದ್ದು, ಮಾಧ್ಯಮ ಕ್ಷೇತ್ರದಲ್ಲಿ ಸದುದ್ದೇಶಕ್ಕೆ ಅದನ್ನು ಬಳಸುವ ಕೆಲಸವಾಗಬೇಕು. ಊಹಾಪೋಹ ಪತ್ರಿಕೋದ್ಯಮ ಅತ್ಯಂತ ಅಪಾಯಕಾರಿ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ಅಭಿಪ್ರಾಯಪಟ್ಟರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಸಹಯೋಗದಲ್ಲಿ ರಾಷ್ಟ್ರೀಯ ಪತ್ರಿಕಾ ದಿನಾಚರಣೆ ಅಂಗವಾಗಿ 'ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ಮಾಧ್ಯಮಗಳು' ಕುರಿತು ಇಲಾಖೆಯ ಸುಲೋಚನಾ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಿದ್ದ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೃತಕ ಬುದ್ಧಿಮತ್ತೆಯ ಈ ಕಾಲಘಟ್ಟದಲ್ಲಿ ಸುದ್ದಿಗಳ ಖಚಿತತೆ, ನಿಖರತೆ ಮತ್ತು ಸ್ಪಷ್ಟತೆ ಸವಾಲು ನಮ್ಮ ಮುಂದಿದೆ ಎಂದು ಹೇಳಿದ ಅವರು ನಟಿ ರಶ್ಮೀಕಾ ಮಂದಣ್ಣ ಅವರ ಡೀಪ್ ಫೇಕ್ ವಿಡಿಯೋ ವೈರಲ್ ಪ್ರಸ್ತಾಪಿಸಿದರು. ನಟಿ ರಶ್ಮೀಕಾ ಮಂದಣ್ಣ ಡೀಪ್ ಫೇಕ್ ವಿಡಿಯೋ ಅದು ಫೇಕ್ ಎಂದು ಗೊತ್ತಾಗುವುದರೊಳಗೆ ಲಕ್ಷಾಂತರ ಮಂದಿಗೆ ತಲುಪಿತ್ತು. ಅವರು ಅಸಲಿ ಎಂದೇ ನಂಬಿ ಬಿಟ್ಟಿದ್ದರು. ರಶ್ಮಿಕಾ ಬದಲು ಧಾರ್ಮಿಕ ಗುರು, ರಾಜಕೀಯ ನಾಯಕರೊಬ್ಬರದ್ದು ಡೀಪ್ ಫೇಕ್ ಮಾಡಿ ಹರಿಬಿಟ್ಟಿದ್ದರೆ ಸಮಾಜದಲ್ಲಿ ಅಲ್ಲೋಲ್ಲ ಕಲ್ಲೋಲವಾಗುತ್ತಿತ್ತು ಎಂದು ಹೇಳಿದ ಅವರು ಈ ಹಿಂದೆ ಸುದ್ದಿಗಳನ್ನು ಖಚಿತತೆ ಪಡಿಸಿಕೊಂಡು ಸುದ್ದಿ ಬಿಡುಗಡೆಗೆ ಕ್ರಮವಹಿಸಲಾಗುತ್ತಿತ್ತು. ಧಾವಂತ ಮತ್ತು ನಮ್ಮಲ್ಲಿಯೇ ಸುದ್ದಿ ಮೊದಲು ಎಂಬ ಅವಸರದಲ್ಲಿ ಅದು ಕಾಣೆಯಾಗುತ್ತಿದೆ. ಮಾಧ್ಯಮಗಳು ಕೃತಕ ಬುದ್ಧಿಮತ್ತೆಯನ್ನು ಸದುದ್ದೇಶಕ್ಕೆ ಬಳಸುವ ಕೆಲಸವಾಗಬೇಕು ಎಂದರು.

ದೃಶ್ಯಮಾಧ್ಯಮಗಳಲ್ಲಿ ಅಬ್ಬರ ಜಾಸ್ತಿ, ಹೂರಣ ಕಡಿಮೆ. ವಿದ್ಯುನ್ಮಾನ, ಸಾಮಾಜಿಕ ಮಾಧ್ಯಮ ಎಷ್ಟೇ ಬೆಳೆದಿದ್ದರೂ ಸಹ ಮುದ್ರಣ ಮಾಧ್ಯಮದ ಪ್ರಭಾವ ಕಡಿಮೆಯಾಗಿಲ್ಲ. ಇಂದಿಗೂ ತನ್ನ ಮೌಲ್ಯ ಕಾಪಾಡಿಕೊಂಡು ಬಂದಿದೆ. ಇದಕ್ಕೆ ಕಾರಣ ನಿಖರತೆ ಮತ್ತು ವಿಶ್ವಾಸರ್ಹತೆ ಎಂದು ಹೇಳಿದರು. ಇತ್ತೀಚೆಗೆ ಪತ್ರಿಕೋದ್ಯಮದಲ್ಲಿ ಊಹಾಪೋಹ ಪತ್ರಿಕೋದ್ಯಮವೆಂಬ ಅನಾಹುತಕಾರಿ ಬೆಳವಣಿಗೆ ಶುರುವಾಗಿದ್ದು, ಈ ಊಹೆಗೆ ಮಿತಿಯೇ ಇಲ್ಲ. ಕಣ್ಮುಂದಿರುವ ಸತ್ಯವನ್ನು ತಮಗೆ ಬೇಕಾದಂತೆ ಚಿತ್ರಿಸಲಾಗುತ್ತಿದೆ ಎಂದು ಹೇಳಿದ ಅವರು ಮುಖ್ಯಮಂತ್ರಿಗಳ ಮನೆಗೆ ರಾಜಕೀಯ ನಾಯಕರು ಸಹಜವಾಗಿ ಭೇಟಿಯಾದರೂ ಊಹಾಪೋಹದಿಂದ ವರದಿ ಭಿತ್ತರಿಸುತ್ತಿರುವುದನ್ನು ಪ್ರಸ್ತಾಪಿಸಿ ಬೇಸರ ವ್ಯಕ್ತಪಡಿಸಿದರು.


ಪತ್ರಿಕೋದ್ಯಮ ವಿದ್ಯಾರ್ಥಿಗಳು ಪರಿಪೂರ್ಣ ಪತ್ರಕರ್ತರಾಗಬೇಕಾದರೇ ದಿನಪತ್ರಿಕೆ ಓದುವುದನ್ನು ರೂಢಿಸಿಕೊಳ್ಳಬೇಕು. ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಗಳು, ವಿಶೇಷ ವರದಿಗಳನ್ನು ಗಮನಿಸಬೇಕು. ಇದೆಲ್ಲವೂ ಮಾಧ್ಯಮಗಳ ಸುದ್ದಿಮನೆಗಳಿಗೆ ಬದುಕು ಕಟ್ಟಿಕೊಳ್ಳಲು ಹೋದಾಗ ಅನುಕೂಲವಾಗುತ್ತದೆ ಎಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್ ಅವರು ಮಾತನಾಡಿ, ವಾಣಿಜ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಈಗಾಗಲೇ ಶುರುವಾಗಿದೆ. ಮಾಧ್ಯಮ ಕ್ಷೇತ್ರದಲ್ಲಿ ತಡವಾಗಿ ಬಂದಿದೆ. ಬ್ರೇಕಿಂಗ್ ನ್ಯೂಸ್ ಕೊಡುವ ಧಾವಂತದಲ್ಲಿ ಕೃತಕ ಬುದ್ಧಿಮತ್ತೆಯ ಪಾತ್ರ ದೊಡ್ಡದಿದೆ ಮತ್ತು ಈ ಕೃತಕ ಬುದ್ಧಿಮತ್ತೆ ಸೃಷ್ಟಿಸುತ್ತಿರುವ ಸವಾಲುಗಳ ಬಗ್ಗೆ ಎಲ್ಲರೂ ಗಂಭೀರವಾಗಿ ಚಿಂತನೆ ನಡೆಸಬೇಕಾಗಿದೆ ಎಂದರು.

ಹಿರಿಯ ಪತ್ರಕರ್ತರು ಹಾಗೂ ಖ್ಯಾತ ವಿಜ್ಞಾನ–ತಂತ್ರಜ್ಞಾನ ಅಂಕಣಕಾರರಾದ ನಾಗೇಶ ಹೆಗಡೆ, ವಿಜ್ಞಾನ ಅಂಕಣಕಾರರಾದ ಟಿ.ಜಿ.ಶ್ರೀನಿಧಿ, ತಂತ್ರಾಂಶ ಪರಿಣಿತರಾದ ಕಾವ್ಯಶ್ರೀ ತಿಮ್ಮಯ್ಯ ಅವರು ಕೃತಕ ಬುದ್ಧಿಮತ್ತೆಯ ಕಾಲಘಟ್ಟದಲ್ಲಿ ಮಾಧ್ಯಮಗಳ ಕುರಿತು ಮಾತನಾಡಿದರು. ನಂತರ ನೆರೆದಿದ್ದವರೊಂದಿಗೆ ಸಂವಾದ ನಡೆಸಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಕಾರ್ಯದರ್ಶಿಗಳಾದ ಸಿ.ರೂಪಾ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾದ ಮಂಜುನಾಥ ಡೊಳ್ಳಿನ್ ಸೇರಿದಂತೆ ಹಿರಿಯ ಪತ್ರಕರ್ತರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.


Downloaded From:www.kpscvaani.com





# ವನ್ಯ ಜೀವಿಗಳ ಅಂಗಾಂಗ ಇರಿಸಿಕೊಳ್ಳುವುದು ಅಪರಾಧ



**ಇತ್ತೀಚೆಗೆ ಹುಲಿ ಉಗುರು ಧರಿಸಿದವರ ವಿರುದ್ಧ ವನ್ಯ ಜೀವಿ ರಕ್ಷಣಾ ಕಾಯ್ದೆಯಡಿ ಕೇಸ್ ಹಾಕಲಾಯಿತು. ಹಾಗಾಗಿ ವನ್ಯ ಜೀವಿ ರಕ್ಷಣಾ ಕಾಯ್ದೆಯು ಏನು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಸೂಕ್ತ.**

ನಂಜುಂಡಪ್ಪ ಎ.

ಚೌಗು ಪ್ರದೇಶಗಳು ಅಗಾಧ ಪ್ರಮಾಣದ ಜೀವ ಸಂಕುಲ, ಸಸ್ಯ ಪ್ರಬೇಧಗಳ ಸಂರಕ್ಷಣೆಯ ತಾಣಗಳು. ವ್ಯಾಪಕ ಜೀವ ವೈವಿಧ್ಯತೆಯ ಕೇಂದ್ರಗಳು. ಆದರೆ ಹವಾಮಾನ ಬದಲಾವಣೆ, ಏರುತ್ತಿರುವ ತಾಪಮಾನ, ಬತ್ತುತ್ತಿರುವ ಅಂತರ್ಜಲ, ಹೀಗೆ ಹಲವು ಕಾರಣಗಳಿಂದಾಗಿ ನೀರಿನ ಒರತೆಗಳು ಜಗತ್ತಿನಲ್ಲಿಯೇ ಅಂತ್ಯಂತ ವೇಗವಾಗಿ ನಶಿಸುತ್ತಿವೆ. ಹೇರಳ ತೇವಾಂಶವಿರುವ ಚೌಗು ಪ್ರದೇಶಗಳು ಇದೀಗ ಬರಡು ಭೂಮಿಯಾಗುತ್ತಿವೆ. ಪ್ರಾಣಿ ಪಕ್ಷಿಗಳಿಗೆ ಆಹಾರ, ನೀರು ಒದಗಿಸುತ್ತಿದ್ದ ಈ ತಾಣಗಳು ಕ್ಷಣ ಕ್ಷಣಕ್ಕೂ ಕಣ್ಮರೆಯಾಗುತ್ತಿವೆ. ಎಷ್ಟೇ ದೊಡ್ಡ ಕೆರೆ, ಕುಂಟೆ, ಅಣೆಕಟ್ಟೆಗಳನ್ನು ನಿರ್ಮಿಸಿದರೂ ನಿಸರ್ಗದತ್ತವಾಗಿ ಚೌಗುಪ್ರದೇಶಗಳನ್ನು ಪುನರ್ ನಿರ್ಮಿಸಲು ಸಾಧ್ಯವಿಲ್ಲ.

ಜೀವವೈವಿಧ್ಯತೆಯನ್ನು ಸೆಳೆಯಲು ಆಗುವುದಿಲ್ಲ. ಯಾವುದೇ ವನ್ಯಜೀವಿ, ಪ್ರಾಣಿ, ಪಕ್ಷಿಗಳಿಗೆ ತನಗೆ ಒಪ್ಪಿತವಾಗುವ ನಿಸರ್ಗದತ್ತವಾದ ಪರಿಸರವೇ ಪ್ರಿಯವಾಗಿರುತ್ತದೆ. ಹಾಗೆಯೇ ಕಾಡು, ಮೇಡುಗಳೂ ವನ್ಯಜೀವಿಗಳ ರಕ್ಷಣೆಯ ತಾಣಗಳು. ಪ್ರಾಣಿಪಕ್ಷಿಗಳ ಬೇಟೆ ಅಂತಿಮವಾಗಿ ಮುನುಕುಲಕ್ಕೆ ಮಾರಕವಾಗುತ್ತದೆ.  ಈ ಪೀಠಿಕೆಗೆ ಕಾರಣ ಇತ್ತೀಚೆಗೆ ರಾಜ್ಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದ್ದ ಹುಲಿ ಉಗುರಿನ ಲಾಕೆಟ್ ವಿಚಾರ. ಇದು ಹಲವು ಜನಪ್ರತಿನಿಧಿಗಳು, ಸೆಲೆಬ್ರಿಟಿಗಳ ನಿದ್ದೆಗೆಡಿಸಿ, ವ್ಯಾಪಕ ಚರ್ಚೆಗೆ ಕಾರಣವಾಗಿತ್ತು. ವನ್ಯಜೀವಿ ಕಾಯ್ದೆ ಅತ್ಯಂತ



Downloaded From:www.kpscvaani.com



ಅವರು ಚಿನ್ನಾಭರಣ ಮಳಿಗೆಗಳಲ್ಲಿ ವನ್ಯಜೀವಿಯ ಯಾವುದೇ ಆಭರಣ ತಯಾರಿಸುವುದಿಲ್ಲ, ಮಾರಾಟ ಮಾಡುವುದಿಲ್ಲ. ಇದು ಶಿಕ್ಷಾರ್ಹ ಅಪರಾಧ ಎಂಬ ಫಲಕ ಹಾಕುವಂತೆ ಸೂಚಿಸಿದರು.

ಭಾರತ ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಪ್ರಕಾರ ಹುಲಿ ಉಗುರುಗಳ ಮಾರಾಟ, ಖರೀದಿ ಮತ್ತು ಅಕ್ರಮ ಬಳಕೆ ಅಪರಾಧ. ಆರೋಪ ಸಾಬೀತಾದಲ್ಲಿ 3 ರಿಂದ 7 ವರ್ಷದವರೆಗೆ ಜೈಲು ಶಿಕ್ಷೆ, ಗರಿಷ್ಠ ಒಂದು ಲಕ್ಷ ರೂಪಾಯಿ ದಂಡ ವಿಧಿಸಲು ಅವಕಾಶವಿದೆ. ಇಂತಹ ವಸ್ತುಗಳನ್ನು ಹೊಂದಿದ್ದವರಿಗೆ ಮೊದಲು ನೋಟಿಸ್ ನೀಡಬೇಕಾಗುತ್ತದೆ. ವನ್ಯ ಜೀವಿ ಸಂರಕ್ಷಣಾ ಕಾಯ್ದೆ ಪ್ರಕಾರ 1,800 ಕ್ಕೂ ಅಧಿಕ ಪ್ರಾಣಿಗಳು, ಸಸ್ಯ, ಪಕ್ಷಿ, ಜಲಚರಗಳು, ಉಭಯ ವಾಸಿಗಳು, ಸರಿಸೃಪಗಳ ಬೇಟೆ ಮತ್ತು ಅದರ ವಸ್ತುಗಳ ಮಾರಾಟ ಹಾಗೂ ಬಳಕೆ ನಿಷೇಧಿಸಲಾಗಿದೆ.

ಕಠಿಣ ಕಾನೂನಿದ್ದರೂ ಲಕ್ಷಾಂತರ ರೂಪಾಯಿ ನೀಡಿ ಹುಲಿ ಉಗುರು ಖರೀದಿಸುವುದು, ಧರಿಸುವುದು ನಿಜಕ್ಕೂ ಇವರ ಮೌಢ್ಯದ ಪರಮಾವಧಿ. ಇಂತಹ ಮೌಢ್ಯ ಕಾಡು ಪ್ರಾಣಿಗಳ ಅಕ್ರಮ ಬೇಟೆಗೆ ಕಾರಣವಾಗುತ್ತದೆ. 21ನೇಯ ಶತಮಾನದಲ್ಲಿಯೂ ಜನ ಮೂಢನಂಬಿಕೆಗಳಿಂದ ಹೊರಬರದಿರುವುದು ದುರಂತ. ವಶೀಕರಣ, ನಿಧಿ ಮುಂತಾದ ಮೂಢನಂಬಿಕೆಗಳ ಕಾರಣಕ್ಕೆ

ಬಲಿಷ್ಠವಾಗಿದ್ದರೂ ಬಹಳಷ್ಟು ಮಂದಿಗೆ ಇಂತಹ ಕಾನೂನಿನ ಅರಿವಿಲ್ಲದಿರುವುದು ದುರದೃಷ್ಟಕರ. ಇತ್ತೀಚೆಗೆ ಹುಲಿ ಉಗುರು ಸಮೂಹ ಸನ್ನಿಯಾಗಿ ಕಾಡಿದ್ದು ಸಹಜ.

ಮನುಷ್ಯ ತನ್ನ ಸ್ವಾರ್ಥ ಸಾಧನೆ, ಮೂಢನಂಬಿಕೆಗಳಿಗೆ ಅಪರೂಪದ ವನ್ಯ ಪ್ರಾಣಿಗಳು ಅವನತಿಯ ಹಾದಿ ಹಿಡಿಯುತ್ತಿರುವುದು ದುರಂತ. "ಪ್ಯಾಂಥೆರಾ ಟೈಗ್ರಿಸ್" ಅಂದರೆ ಹುಲಿ. ಇದು ಬೆಕ್ಕಿನ ಜಾತಿಗೆ ಸೇರಿರುವ ವ್ಯಾಘ್ರ. ಇತ್ತೀಚೆಗೆ ಹುಲಿ ಉಗುರಿನ ಲಾಕೆಟ್ ಧರಿಸಿದ್ದಾರೆಂಬ ಕಾರಣಕ್ಕೆ ಹಲವರ ಮೇಲೆ ಪ್ರಕರಣ ದಾಖಲಾಗಿತ್ತು. ಆದರೆ ನಮ್ಮಲ್ಲಿ ಹುಲಿ ಉಗುರು ಧರಿಸುವುದು ಪೌರುಷದ ಸಂಕೇತ, ಇದು ದುಷ್ಟ ಶಕ್ತಿಗಳನ್ನು ತಡೆದು ಮಾಟ ಮಂತ್ರದಿಂದ ರಕ್ಷಿಸುತ್ತದೆ. ಮಾಂತ್ರಿಕ ಶಕ್ತಿ ಹೊಂದಿದೆ ಎಂಬ ಮೌಢ್ಯ ಜನರಲ್ಲಿ ತುಂಬಿದೆ. ಅದರಲ್ಲಿಯೂ ಬಲಾಢ್ಯರೇ ಹೆಚ್ಚಿನ ಸಂಖ್ಯೆಯಲ್ಲಿ ಮೌಢ್ಯಕ್ಕೆ ಒಳಗಾಗುತ್ತಿದ್ದಾರೆ. ಇಂತಹ ಅನೇಕ ಮೂಢನಂಬಿಕೆಗಳ ಕಾರಣದಿಂದಲೇ ದೇಶದಲ್ಲಿ ಹುಲಿಗಳ ಬೇಟೆ ಹೆಚ್ಚಾಗುತ್ತಿದ್ದು, ವನ್ಯಜೀವಿಗಳು ಆಂತಕಕ್ಕೆ ಸಿಲುಕುವಂತ್ತಾಗಿದೆ. ದೇಶದ ಅನೇಕ ಭಾಗಗಳಲ್ಲಿ ಇಂದಿಗೂ ಸಹ ವಾಮಾಚಾರ, ವಶೀಕರಣ ನಡೆಸಲು ಪ್ರಾಣಿಗಳನ್ನು ಬಳಸಲಾಗುತ್ತಿದೆ. ಅದರಲ್ಲಿಯೂ ವಾಮಾಚಾರಕ್ಕೆ ಬಲಿಯಾಗುತ್ತಿರುವುದು ಪಕ್ಷಿಗಳು, ಪುನುಗು ಬೆಕ್ಕು, ಗೋಸುಂಬೆ, ಗೂಬೆ ಮುಂತಾದ ಅಳಿವಿನಂಚಿನಲ್ಲಿರುವ ಜೀವಿಗಳು ಎಂಬುದು ವಿಶೇಷ.

ಹುಲಿ ಉಗುರು ವಿಚಾರ ಮುನ್ನೆಲೆಗೆ ಬರುತ್ತಿದ್ದಂತೆ ಸಾಕಷ್ಟು ಮಂದಿಗೆ ಸಮಸ್ಯೆಯಾಯಿತು. ಮತ್ತೆ ಕೆಲವೆಡೆ ಹುಲಿ ಉಗುರು, ಆನೆ ಕೂದಲು ಮತ್ತಿತರೆ ವಸ್ತುಗಳ ಜೊತೆ ಇದ್ದ ಚಿನ್ನವನ್ನು ಬೇರ್ಪಡಿಸಲು ಕೆಲವರು ಆತಂಕದಿಂದ ಚಿನ್ನದಂಗಡಿಗಳಿಗೆ ಲಗ್ಗೆ ಇಟ್ಟ ಮಾಹಿತಿಯೂ ಹೊರ ಬಿತ್ತು. ವಿಶೇಷವಾಗಿ ಆಭರಣ ಅಂಗಡಿಗಳ ಮೇಲೆ ದಾಳಿಗಳು ನಡೆದವು. ಕೆಲವೆಡೆ ನೈಜ ವ್ಯಾಪಾರ ಮಾಡುವ ಆಭರಣ ವರ್ತಕರು ಮುಜುಗರಕ್ಕೆ ಸಿಲುಕಿದರು. ಹೀಗೆ ಒಂದು ಹುಲಿ ಉಗುರು ಹಲವು ವಲಯಗಳಲ್ಲಿ ಆತಂಕದ ಅಲೆಗಳನ್ನೇ ಎಬ್ಬಿಸಿತು. ಇದಕ್ಕಾಗಿಯೇ ಅರಣ್ಯ, ವನ್ಯಜೀವಿ ಮತ್ತು ಪರಿಸರ ಸಚಿವರಾದ ಈಶ್ವರ ಖಂಡ್ರೆ

### ಸಹಾಯವಾಣಿ

ಅರಣ್ಯ ಇಲಾಖೆಗೆ 1926 ಸಂಖ್ಯೆಯ ಸಹಾಯವಾಣಿ ಇದ್ದು ಸಾರ್ವಜನಿಕರು ಈ ಸಂಖ್ಯೆಗೆ ಕರೆ ಮಾಡಿ ವನ್ಯ ಜೀವಿಗಳ ಉತ್ಪನ್ನ ಹೊಂದಿರುವವರ ಕುರಿತು ದೂರು ದಾಖಲಿಸಲು, ಅರಣ್ಯ ಇಲಾಖೆಗೆ ಸಂಬಂಧಿಸಿದ ಮಾಹಿತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.





Downloaded From:www.kpscvaani.com

ಪ್ರಾಣಿಗಳನ್ನಷ್ಟೇ ಅಲ್ಲದೆ ಮಕ್ಕಳು ಮತ್ತು ಮಹಿಳೆಯರ ಜೀವಗಳನ್ನೂ ಸಾಕಷ್ಟು ಸಂದರ್ಭಗಳಲ್ಲಿ ಬಲಿ ಕೊಟ್ಟ ಪ್ರಕರಣಗಳನ್ನು ನಾವು ಕಾಣುತ್ತೇವೆ. ಆದರೆ, ಮೌಢ್ಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಬೇಕಾದವರು, ಕಾನೂನು ಗೌರವಿಸಬೇಕಾದರೇ ಮೌಢ್ಯಗಳಿಗೆ ಬಲಿಯಾಗುತ್ತಿರುವುದು ನಿಜಕ್ಕೂ ಒಳ್ಳೆಯ ಬೆಳವಣಿಗೆಯಲ್ಲ.

ಹುಲಿ ಉಗುರು, ಹುಲಿ ಚರ್ಮ, ಜಿಂಕೆ ಕೊಂಬು, ಆನೆ ದಂತ ಖರೀದಿಸಿದವರೆಲ್ಲರೂ ಬಹುಶಃ ಮೌಢ್ಯಕ್ಕೆ ಒಳಗಾದವರೇ. ಮೌಢ್ಯ ಕಾರಣದಿಂದ ಪ್ರಾಣಿಗಳ ಅಂಗಾಂಗಳನ್ನು ಬಳಸಿಕೊಳ್ಳುವವರು ಇರುವ ತನಕ ಇದರ ಬೇಟೆ ಮತ್ತು ಮಾರಾಟ ಮಾಡುವವರು ಇದ್ದೇ ಇರುತ್ತಾರೆ. ಹೀಗಾಗಿ ವನ್ಯಜೀವಿ ಕಾಯ್ದೆ 1972 ರ ಸೆಕ್ಷನ್ 40, ಪರಿಚ್ಛೇದ 1 ರ ಅಡಿ ನಿರ್ದಿಷ್ಟಪಡಿಸಿದ ಯಾವುದೇ ಪ್ರಾಣಿ ಅಂಗಾಂಗಳನ್ನು ಇಟ್ಟುಕೊಳ್ಳುವಂತಿಲ್ಲ. ಇದೇ ಸೆಕ್ಷನ್ 2ಎ ಅನ್ವಯ ಅರಣ್ಯ ಇಲಾಖೆಯಿಂದ ಪ್ರಮಾಣಪತ್ರ ಹೊಂದಿರುವ ವ್ಯಕ್ತಿ ಹೊರತುಪಡಿಸಿ ಉಳಿದವರು ಇಂತಹ ವಸ್ತುಗಳನ್ನು ಹೊಂದುವಂತಿಲ್ಲ.

ದೇಶದಲ್ಲಿ ಹುಲಿಗಳ ಸಂಖ್ಯೆ ಕ್ಷೀಣಿಸಲು ಹುಲಿ ಬೇಟೆ ಪ್ರಮುಖ ಕಾರಣವಾಗಿವೆ. ಇದನ್ನು ಮನಗಂಡೇ ಹುಲಿ ಸಂರಕ್ಷಣೆ, ಹುಲಿ ಗಣತಿಗೆ ದೇಶಾದ್ಯಂತ ಆದ್ಯತೆ ನೀಡಲಾಗಿದೆ. ಏಪ್ರಿಲ್ 23, 2022ರಂದು ಮೈಸೂರಿನಲ್ಲಿ ನಡೆದ ಹುಲಿ ಯೋಜನೆಯ ಸುವರ್ಣ ಸಂಭ್ರಮದಲ್ಲಿ ಹುಲಿ ಗಣತಿಯ ವರದಿಯನ್ನು ಬಿಡುಗಡೆ ಮಾಡಲಾಯಿತು. ಅದರಂತೆ ದೇಶದಲ್ಲಿ 3,682 ಹುಲಿಗಳನ್ನು ಹೊಂದುವ ಮೂಲಕ ಭಾರತ ವಿಶ್ವದ ಹುಲಿಗಳ ರಾಜಧಾನಿಯಾಗಿ ಹೊರಹೊಮ್ಮಿದೆ. ಈ ವರದಿಯು ಸ್ವಲ್ಪ ಮಟ್ಟಿಗೆ ಹುಲಿಗಳ ಸಂಖ್ಯೆಯ ಕುರಿತು ಆಶಾದಾಯಕ ಭಾವನೆ ಮೂಡಿಸಿದೆ. ಕರ್ನಾಟಕ ಹುಲಿಗಳ ಆವಾಸ ಸ್ಥಾನವಾಗುತ್ತಿದ್ದು, ವ್ಯಾಘ್ರಗಳ ರಕ್ಷಣೆಗೆ ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೂ ಸಹ ಸರ್ಕಾರ ಇನ್ನಷ್ಟು ಕಠಿಣ ಕಾನೂನು ನಿಯಮಗಳನ್ನು ರೂಪಿಸಬೇಕಿದೆ. ಆಗ ಮಾತ್ರ ಕಾಡು ಪ್ರಾಣಿಗಳ ಬೇಟೆ ನಿಲ್ಲಬಹುದು.

ಈ ಮಧ್ಯೆ ಹುಲಿ ಉಗುರು, ಹುಲಿ ಹಲ್ಲು ಸೇರಿ ವನ್ಯಜೀವಿಗಳ ಯಾವುದೇ ಅಂಗಾಂಗದಿಂದ ಮಾಡಿದ ಉತ್ಪನ್ನ ಮತ್ತು ವಸ್ತುಗಳ ಮಾರಾಟ ತಡೆಗೆ ಜನ ಜಾಗೃತಿ ಮೂಡಿಸಲು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಮಗ್ರ ವರದಿ ಸಲ್ಲಿಸಲು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ–ಎಪಿಸಿಸಿಎಫ್ (ವನ್ಯಜೀವಿ) ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಇತ್ತೀಚೆಗೆ ಹುಲಿ ಉಗುರಿನ ಲಾಕೆಟ್ ಇರುವ ಸರ ಧರಿಸಿರುವವರ ವಿರುದ್ಧ ದೂರುಗಳು ಬರುತ್ತಿದ್ದು, ಬಹುತೇಕರಿಗೆ ಇದು ಅಪರಾಧ ಎಂಬ ಅರಿವೇ ಇಲ್ಲ. ಈ ಹಿನ್ನೆಲೆಯಲ್ಲಿ ಅಕ್ರಮವಾಗಿ ವನ್ಯಜೀವಿ ಉತ್ಪನ್ನಗಳನ್ನು ಇಟ್ಟುಕೊಂಡಿರುವವರು ಅವುಗಳನ್ನು ಸರ್ಕಾರಕ್ಕೆ ಮರಳಿಸಲು ಕೊನೆಯ ಅವಕಾಶ ನೀಡುವ ಕಾನೂನು ಸಾಧ್ಯತೆಗಳನ್ನು ಪರಾಮರ್ಶಿಸಲಾಗುತ್ತಿದೆ ಎಂದು ಈಶ್ವರ ಖಂಡ್ರೆ ಅವರು ಸ್ಪಷ್ಟಪಡಿಸಿದ್ದಾರೆ.

ತಮ್ಮ ಪೂರ್ವಜರು ಹೊಂದಿದ್ದ ವನ್ಯಜೀವಿ ಅಂಗಾಂಗದಿಂದ ಮಾಡಿದ ಟ್ರೋಫಿ, ಫಲಕ, ಪೆಂಡೆಂಟ್ ಸೇರಿದಂತೆ ಯಾವುದೇ ಉತ್ಪನ್ನಗಳನ್ನು ಅರಣ್ಯ ಇಲಾಖೆಯಿಂದ ದೃಢೀಕರಿಸಿಕೊಂಡು ಮಾಲೀಕತ್ವದ ಹಕ್ಕು ಪಡೆದುಕೊಳ್ಳಲು 2003ರವರೆಗೆ ಹಲವು ಬಾರಿ ಅವಕಾಶ ನೀಡಲಾಗಿತ್ತು. ಹಲವರು ತಮ್ಮ ಬಳಿ ಇದ್ದ ವನ್ಯಜೀವಿ ಉತ್ಪನ್ನಗಳಿಗೆ ಮಾಲೀಕತ್ವದ ಹಕ್ಕು ಪಡೆದಿದ್ದಾರೆ. ಇನ್ನೂ ಅನೇಕರು ದೃಢೀಕರಣ ಮತ್ತು ಪ್ರಮಾಣ ಪತ್ರ ಪಡೆದಿಲ್ಲ. ಗ್ರಾಮೀಣ ಪ್ರದೇಶದ ಕೆಲವರ ಮನೆಗಳಲ್ಲಿ ಜಿಂಕೆ ಚರ್ಮ, ಆನೆ ದಂತದಿಂದ ಮಾಡಿದ ಕಲಾಕೃತಿಗಳು, ಜಿಂಕೆ ಮತ್ತು ಸಾರಂಗದ ಕೊಂಬು ಇತ್ಯಾದಿಗಳನ್ನು ಇಟ್ಟುಕೊಂಡಿರುವುದು ಕಂಡು ಬಂದಿದೆ. ಆದರೆ ಇದು ಅಪರಾಧ ಎಂಬುದೂ ಅವರಿಗೆ ತಿಳಿದಿಲ್ಲ. ಕಾನೂನಿನ ಅರಿವಿಲ್ಲದ ಶ್ರೀಸಾಮಾನ್ಯರಿಗೆ ಆಗುವ ತೊಂದರೆ ತಪ್ಪಿಸಲು ಒಂದು ಬಾರಿ ಕೊನೆಯದಾಗಿ ಇಂತಹ ಅಕ್ರಮ ಸಂಗ್ರಹಣೆ, ದಾಸ್ತಾನಿನ ಬಗ್ಗೆ ಘೋಷಣೆ ಮಾಡಿಕೊಳ್ಳಲು ಮತ್ತು ಸರ್ಕಾರಕ್ಕೆ ಮರಳಿಸಲು ಅವಕಾಶ ನೀಡಲಾಗಿದೆ.

ಅಳಿವಿನಂಚಿನಲ್ಲಿರುವ, ಅಮೂಲ್ಯ ಮತ್ತು ಅಪರೂಪದ ವನ್ಯ ಜೀವಿಗಳಾದ ಹುಲಿ, ಚಿರತೆ, ಚಿಂಕಾರ, ಕೃಷ್ಣಮೃಗ, ಸಾಂಬಾರ್, ಕರಡಿ ಸೇರಿದಂತೆ ಹಲವು ಕಾಡು ಪ್ರಾಣಿಗಳನ್ನು ಪರಿಶಿಷ್ಟ 1ರಲ್ಲಿ ಪಟ್ಟಿ ಮಾಡಲಾಗಿದ್ದು, ಇಂತಹ ಪ್ರಾಣಿಗಳನ್ನು ಕೊಲ್ಲುವುದು, ಬೇಟೆ ಆಡುವುದು, ಅಂತಹ ಪ್ರಾಣಿಗಳ ದೇಹದ ಯಾವುದೇ ಭಾಗದಿಂದ ತಯಾರಿಸಿದ ವಸ್ತುವನ್ನು ಅಲಂಕಾರಿಕವಾಗಿ ಮನೆಯಲ್ಲಿಡುವುದು, ಧರಿಸುವುದು ಕೂಡ ಅಪರಾಧವಾಗಿರುತ್ತದೆ. ಚಿತ್ರನಟರು, ಗಣ್ಯರು ನಕಲಿ ಹುಲಿ ಉಗುರಿನ ಲಾಕೆಟ್ ಧರಿಸಿದರೆ ಅದೂ ಕೂಡ ಇತರರಿಗೆ ಪ್ರೇರಣೆ ಸಿಗುತ್ತದೆ. ಅವರ ಸಾವಿರಾರು ಅಭಿಮಾನಿಗಳು ಇದನ್ನು ಅನುಕರಣೆ ಮಾಡುವ ಅಪಾಯ ಇರುತ್ತದೆ. ಆಗ ಬೇಡಿಕೆ ಹೆಚ್ಚುವ ಜೊತೆಗೆ ವನ್ಯಜೀವಿಗಳ ನಾಶಕ್ಕೆ ಪ್ರೇರಣೆಯಾಗಬಹುದು. ಹೀಗಾಗಿ ಸಾಮಾಜಿಕ ಬದ್ಧತೆಯ ದೃಷ್ಟಿಯಿಂದ ಗಣ್ಯರು, ನಟರು ನಕಲಿ ಪೆಂಡೆಂಟ್ ಕೂಡ ಧರಿಸಬಾರದು ಎಂದು ಈಶ್ವರ ಖಂಡ್ರೆ ಅವರು ಮನವಿ ಮಾಡಿದ್ದಾರೆ. ಇದು ಜನಸಾಮಾನ್ಯರಿಗೂ ಅನ್ವಯವಾಗುತ್ತದೆ. ■



### ನವಿಲುಗರಿ ಸಂಗ್ರಹಿಸಲು ಅವಕಾಶ

ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಸೆಕ್ಷನ್ 43ರ ಅಡಿಯಲ್ಲಿ ನವಿಲುಗರಿಗಳಿಗೆ ವಿನಾಯಿತಿ ನೀಡಲಾಗಿದೆ. ನವಿಲು ಗರಿಗಳಿಂದ ತಯಾರಿಸಿದ ಯಾವುದೇ ವಸ್ತುಗಳನ್ನು ರಫ್ತು ಮಾಡುವುದನ್ನು ಭಾರತ ಸರ್ಕಾರ ಮತ್ತು ಅಳಿವಿನಂಚಿನಲ್ಲಿರುವ ಪ್ರಭೇದಗಳಲ್ಲಿ ಅಂತರರಾಷ್ಟ್ರೀಯ ವ್ಯಾಪಾರದ ಸಮಾವೇಶ – ಸಿಐಟಿಇಎಸ್ ನಿಷೇಧಿಸಿದೆ.

ಆದರೆ ನೈಸರ್ಗಿಕವಾಗಿ ನವಿಲುಗಳಿಂದ ಉದುರಿದ ಗರಿಗಳನ್ನು ಸಂಗ್ರಹಿಸುವುದು ಮತ್ತು ದೇಶದೊಳಗೆ ಮಾರಾಟ ಮಾಡುವುದು ಕಾನೂನು ಬಾಹಿರವಲ್ಲ. ಆದರೆ ನವಿಲುಗಳಿಗೆ ಹಿಂಸೆ ನೀಡಿ ಗರಿ ಕಿತ್ತರೆ ಅದು ಶಿಕ್ಷಾರ್ಹ ಅಪರಾಧವಾಗಲಿದೆ.


Downloaded From:www.kpscvaani.com




# ಏಡ್ಸ್ ನಿಯಂತ್ರಣಕ್ಕೆ ಜನಜಾಗೃತಿಯೇ ಮದ್ದು

ಡಾ. ವರಪ್ರಸಾದ್ ರಾವ್ ಪಿ. ವಿ.

**ಏಡ್ಸ್ ನಿಯಂತ್ರಣಕ್ಕಾಗಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯು ಮಾಹಿತಿ ಶಿಕ್ಷಣ ಮತ್ತು ಸಂವಹನ ಮೂಲಕ ಜನಜಾಗೃತಿಗೊಳಿಸುತ್ತಿದೆ**

ದೀರ್ಘಕಾಲದವರೆಗೆ ಕಾಡುವ, ಮಾರಣಾಂತಿಕವಾಗಿರುವ ಕಾಯಿಲೆಗಳಲ್ಲಿ ಏಡ್ಸ್ ಕೂಡ ಒಂದು. ಎಚ್.ಐ.ವಿ ವೈರಸ್‌ನಿಂದ ಉಂಟಾಗುವ ದೀರ್ಘಕಾಲದ, ಸಂಭಾವ್ಯ ಮಾರಣಾಂತಿಕ ಸ್ಥಿತಿಯಾಗಿದೆ. ಇಡೀ ದೇಶದಲ್ಲಿಯೇ ಏಡ್ಸ್ ಸೋಂಕು ನಿಯಂತ್ರಣಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. 2030ರ ವೇಳೆಗೆ ರಾಜ್ಯ ಎಚ್‌ಐವಿ ಮುಕ್ತ ಕರ್ನಾಟಕವಾಗಲು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವಂತೆ ಏಡ್ಸ್ ತಡೆಗಟ್ಟುವಿಕೆಗಾಗಿ ಓಂಬುಡ್ಸ್‌ಮನ್ ನೇಮಿಸಿದ ಎರಡನೇ ರಾಜ್ಯ ಕರ್ನಾಟಕವಾಗಿದೆ.

ಸಂಪೂರ್ಣ ಏಡ್ಸ್ ಮುಕ್ತ ರಾಜ್ಯವಾಗಿಸಲು ಸರ್ಕಾರದ ಸಂಸ್ಥೆಯಾಗಿರುವ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಶ್ರಮಿಸುತ್ತಿದೆ. ಪ್ರತಿ ವರ್ಷ ಡಿಸೆಂಬರ್ 1 ರಂದು ವಿಶ್ವ ಏಡ್ಸ್ ದಿನವನ್ನು ಆಚರಣೆ ಮಾಡಲಾಗುತ್ತದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿಯು ಮಾಹಿತಿ, ಶಿಕ್ಷಣ ಮತ್ತು ಸಂವಹನ ಮೂಲಕ ರಾಜ್ಯದ್ಯಾಂತ ಎಚ್‌ಐವಿ/ಏಡ್ಸ್ ಕುರಿತಾಗಿ ಜಾಗೃತಿ ಮೂಡಿಸಲು ಮತ್ತು ಅದರ ಬಗ್ಗೆ ಮಾಹಿತಿಯನ್ನು ಪಸರಿಸಲು ಶ್ರಮಿಸುತ್ತಿದೆ. ಈ ಬಗ್ಗೆ ವಿಶೇಷ ಲೇಖನ ಇಲ್ಲಿದೆ.

ಏಡ್ಸ್ ಸೋಂಕನ್ನು ಮೊಟ್ಟ ಮೊದಲ ಬಾರಿಗೆ 1981ರಲ್ಲಿ ಅಮೆರಿಕದಲ್ಲಿ ಗುರುತಿಸಲಾಯಿತು. ಭಾರತದಲ್ಲಿ 1986ರಲ್ಲಿ ಚೆನ್ನೈನಲ್ಲಿ ಪತ್ತೆ ಮಾಡಲಾಯಿತು. ಏಡ್ಸ್‌ಗೆ ಕಾರಣವಾದ ವೈರಸ್ ಎಚ್‌ಐವಿ ಇದನ್ನು ಮೊಟ್ಟಮೊದಲ ಬಾರಿಗೆ 1983ರಲ್ಲಿ ಫ್ರೆಂಚ್ ವಿಜ್ಞಾನಿಗಳು ಪತ್ತೆ ಹಚ್ಚಿದರು. ಎಚ್‌ಐವಿ / ಏಡ್ಸ್ ಕಾರ್ಯ ಚಟುವಟಿಕೆಗಳಿಗೆ ಸಂಪನ್ಮೂಲ ಕೂಡಿಸುವುದು, ವ್ಯಕ್ತಿಗತ ಮತ್ತು ಸಮುದಾಯದಲ್ಲಿ ಈ ಸೋಂಕಿನಿಂದ ಉಂಟಾಗುತ್ತಿರುವ ಸಮಸ್ಯೆಗಳು ಮತ್ತು ಇದರ ಬಗ್ಗೆ ಜಾಗೃತಿ ಹೆಚ್ಚಿಸುವುದು ಹಾಗೂ ಹೆಚ್‌ಐವಿ ಸೋಂಕಿತರಾಗಿರುವವರಿಗೆ ಬೆಂಬಲ ನೀಡುವುದು ಮತ್ತು ಅವರು ಅನುಭವಿಸುತ್ತಿರುವ ಕಳಂಕ ತಾರತಮ್ಯವನ್ನು ಕಡಿಮೆ ಮಾಡುವುದು ಹಾಗೂ ಹೆಚ್‌ಐವಿ ಏಡ್ಸ್ ಬೆಳವಣಿಗೆಯತ್ತ ದೃಷ್ಟಿ ಬೀರಿ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮಗಳತ್ತ ಪ್ರತಿಯೊಬ್ಬರ ಗಮನ ಸೆಳೆಯುವ ಕೆಲಸವನ್ನು ಕರ್ನಾಟಕದ ಏಡ್ಸ್ ಪ್ರಿವೆನ್ಷನ್ ಸೊಸೈಟಿಯು ಗುರಿಯನ್ನು ಹೊಂದಿದೆ.

ಈ ಬಗ್ಗೆ ಮಾಹಿತಿಯನ್ನು ನೀಡಿದ ಕರ್ನಾಟಕದ ಏಡ್ಸ್ ಪ್ರಿವೆನ್ಷನ್ ಸೊಸೈಟಿಯ ಯೋಜನಾ ನಿರ್ದೇಶಕರಾದ ಐಎಎಸ್ ಅಧಿಕಾರಿ ನಾಗರಾಜ ಎನ್.ಎಂ ಅವರು, ಏಡ್ಸ್ ರೋಗದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಏಡ್ಸ್ ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ಪ್ರತೀ ವರ್ಷ ಡಿಸೆಂಬರ್ 1ರಂದು ವಿಶ್ವ ಏಡ್ಸ್ ದಿನ ಎಂದು ಆಚರಿಸಲಾಗುತ್ತಿದೆ. 1988 ರಿಂದ ಈ ಆಚರಣೆ ಜಾರಿಗೆ ಬಂದಿತು. ಬೀದಿ ನಾಟಕಗಳು, ಜಾಗೃತಿ ಜಾಥಾಗಳು, ವಿಚಾರ ಸಂಕಿರಣಗಳು, ಸಂವಾದಗಳು, ಏಡ್ಸ್ ತಿಳುವಳಿಕಾ ಶಿಬಿರಗಳು ಮುಂತಾದ ಕಾರ್ಯಕ್ರಮ ನಡೆಸಿ ಜನರಲ್ಲಿ ಏಡ್ಸ್ ಬಗ್ಗೆ ಇರುವ ಅಪನಂಬಿಕೆಗಳನ್ನು ತೊಡೆದು


Downloaded From:www.kpscvaani.com





ಹಾಕಿ, ಎಚ್‌ಐವಿ ವೈರಾಣುವಿನಿಂದ ಸೋಂಕಿತರಾದವರೂ ಇತರರಂತೆ ಸಾಮಾನ್ಯ ಜೀವನ ನಡೆಸಬಹುದು ಎಂಬ ಸಂದೇಶವನ್ನು ಸಮಾಜಕ್ಕೆ ಸಾರಿ ಹೇಳುವ ಕೆಲಸವನ್ನು ತಮ್ಮ ಸಂಸ್ಥೆ ವತಿಯಿಂದ ಮಾಡಲಾಗುತ್ತಿದೆ ಎಂದರು.

ಮನುಷ್ಯ ಏಡ್ಸ್ ಸೋಂಕಿತರಾದರೆ ಅಲ್ಲಿಗೆ ಜೀವನ ಮುಗಿಯಿತು ಎಂದು ಹೇಳಲಾಗುತ್ತದೆ. ಆದ್ರೆ ಹಾಗಿಲ್ಲ, ಅದೇಷ್ಟೋ ಹೆಚ್‌ಐವಿ ಸೋಂಕಿತರು ಕಳೆದ 10–20 ವರ್ಷಗಳಿಂದ ಉತ್ತಮವಾಗಿಯೇ ಎಲ್ಲರಂತೆ ಬದುಕು ಸಾಗಿಸುತ್ತಿದ್ದಾರೆ.

ಸೋಂಕು ಹರಡದಂತೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳನ್ನು ಜನರ ಮನಸ್ಸಿನಲ್ಲಿ ಬಿತ್ತುವ ಮೂಲಕ ಮತ್ತು ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಸೋಂಕನ್ನು ತಡೆಗಟ್ಟಲು ಜಿಲ್ಲಾಸ್ಪತ್ರೆ, ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಕೇಂದ್ರಗಳಲ್ಲಿ ಕಾಂಡೋಮ್‌ಗಳು ಸುಲಭ ರೀತಿಯಲ್ಲಿ ದೊರಕುವಂತೆ ಮಾಡಲಾಗಿದೆ. ಎಚ್‌ಐವಿ/ಏಡ್ಸ್ ನಿಯಂತ್ರಣ, ಸೇವಾ ಸೌಲಭ್ಯಗಳ ಕುರಿತು ಕರಪತ್ರ, ಮಡಿಕೆ ಪತ್ರ, ಪೋಸ್ಟರ್, ಕೈಪಿಡಿ, ಫ್ಲಿಪ್ ಪುಸ್ತಕ, ಇತ್ಯಾದಿಗಳನ್ನು ಮುದ್ರಿಸಿ ಜನಸಾಮಾನ್ಯರಿಗೆ ರೆಡ್ ರಿಬ್ಬನ್ ಕ್ಲಬ್, ಹದಿಹರೆಯದ ಶಿಕ್ಷಣ ಕಾರ್ಯಕ್ರಮ, ಜಾನಪದ ಪ್ರದರ್ಶನ ಮುಂತಾದ ಸಮಯದಲ್ಲಿ ವಿತರಿಸಲಾಗುತ್ತದೆ.

ಎಚ್‌ಐವಿ/ಏಡ್ಸ್ ಮಾಹಿತಿಯನ್ನು ಇನ್ನು ಹೆಚ್ಚು ಪರಿಣಾಮಕಾರಿಯಾಗಿ ಜನಸಾಮಾನ್ಯರಿಗೆ ತಿಳಿಸಲು 10 ಜಿಲ್ಲೆಗಳಲ್ಲಿ ತಲಾ ಒಂದು ತಾಲೂಕನ್ನು ಆಯ್ಕೆ ಮಾಡಿ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು. ನಾಗಮಂಗಲ, ದೊಡ್ಡಬಳ್ಳಾಪುರ, ಶಿಕಾರಿಪುರ, ಹುನಗುಂದ, ಸವದತ್ತಿ, ವಿಜಯಪುರ ಗ್ರಾಮಾಂತರ, ಕೊಪ್ಪಳ, ಹರಿಹರ, ಗುಬ್ಬಿ, ಧಾರವಾಡ ಗ್ರಾಮಾಂತರ ತಾಲೂಕುಗಳನ್ನು ಆಯ್ಕೆ ಮಾಡಲಾಯಿತು. ಆಶಾ ಕಾರ್ಯಕರ್ತೆಯರಿಗೆ ತರಬೇತಿಯನ್ನು ನೀಡಿ ತದನಂತರ ಆಯಾ ತಾಲೂಕಿನಲ್ಲಿ ಕಾರ್ಯ ನಿರ್ವಹಿಸುವ ಕೆ.ಎಸ್.ಎ.ಪಿ.ಎಸ್‌ನ ಜಿಲ್ಲಾ ಮೇಲ್ವಿಚಾರಕರು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಐಸಿಟಿಸಿ ಸಿಬ್ಬಂದಿಗಳು, ಆಶಾ ಸಿಬ್ಬಂದಿಗಳ ಮೇಲ್ವಿಚಾರಣೆಯಲ್ಲಿ ಹಳ್ಳಿಯ/ಊರಿನ ಪ್ರತಿ ಮನೆ ಮನೆಗೆ ಭೇಟಿ ನೀಡಿ ಎಚ್‌ಐವಿ/ಏಡ್ಸ್ ಮತ್ತು ಆರೋಗ್ಯದ ಬಗ್ಗೆ ಕರಪತ್ರದೊಂದಿಗೆ ಮಾಹಿತಿ ನೀಡಲಾಯಿತು. ಸದರಿ ಅಭಿಯಾನದಲ್ಲಿ ಜನಸಾಮಾನ್ಯರಿಗೆ ಮುಖಾಮುಖಿ ಮಾಹಿತಿ ನೀಡಲಾಗಿ, ಜನಸಾಮಾನ್ಯರಿಗೆ ಎಚ್‌ಐವಿ/ಏಡ್ಸ್ ಮತ್ತು ಆರೋಗ್ಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಿದಂತ್ತಾಯಿತು.

ಸಾಮಾನ್ಯವಾಗಿ ಹೆಚ್ಚಿನ ಬಾರಿ ಎಚ್‌ಐವಿ ಸೋಂಕು ಇರುವ ವ್ಯಕ್ತಿಯೊಂದಿಗೆ ಅಸುರಕ್ಷಿತ ಲೈಂಗಿಕ ಕ್ರಿಯೆಯಲ್ಲಿ ತೊಡಗಿದಾಗಲೇ ಈ ರೋಗವು ಹರಡುತ್ತದೆ. ಅದನ್ನು ಹೊರತುಪಡಿಸಿ ಇನ್ನಾವೆಲ್ಲಾ ಕಾರಣಗಳಿಂದ ಏಡ್ಸ್ ಹರಡುತ್ತದೆ ಎನ್ನುವ ಬಗ್ಗೆ ಬಳ್ಳಾರಿಯ ವಿಮ್ಸ್ ಸಂಸ್ಥೆಯ ಹಿರಿಯ ತಜ್ಞ ವೈದ್ಯರಾದ ಡಾ. ರಾಘವೇಂದ್ರ ಎಫ್.ಎನ್ ಅವರು ಮಾಹಿತಿ ನೀಡಿದ್ದಾರೆ.

'ಕಾಂಡೋಮ್' ಬಳಕೆ ಮಾಡುವ ಮುನ್ನ ಪುರುಷರಿಗೆ ತಿಳಿದಿರಲಿ: ದೈಹಿಕ ಸಂಬಂಧ ಬೆಳೆಸುವ ವೇಳೆ ಕಾಂಡೋಮ್ ಗುಣಮಟ್ಟವನ್ನು ಪರಿಶೀಲಿಸಬೇಕು. ಕಳಪೆ ಗುಣಮಟ್ಟದ ಕಾಂಡೋಮ್‌ಗಳು ಸೋಂಕು ಹರಡಲು ಕಾರಣವಾಗುತ್ತವೆ. ಲೈಂಗಿಕ ಕ್ರಿಯೆ ವೇಳೆ ಕಾಂಡೋಮ್ ಹರಿದರೆ, ಇದರಿಂದ ಎಚ್‌ಐವಿ ಹರಡುವ ಸಾಧ್ಯತೆಯಿರುತ್ತದೆ.

ಟ್ಯಾಟೂ ಹಾಕಿಸಿಕೊಳ್ಳುವ ಮುನ್ನ ಎಚ್ಚರಿಕೆ: ಈಗಿನ ದಿನಗಳಲ್ಲಿ ಟ್ಯಾಟೂ ಫ್ಯಾಷನ್ ಆಗಿದೆ. ದೇಹದ ಮೇಲೆ ಹಾಕಿಸುವ ಹಚ್ಚೆ ಅಥವಾ ಟ್ಯಾಟೂ ಬಗ್ಗೆ ಮುನ್ನೆಚ್ಚರಿಕೆವಹಿಸದಿದ್ದರೆ ಏಡ್ಸ್ ನಂತಹ ರೋಗ ನಿಮ್ಮ ದೇಹವನ್ನು ಸೇರಬಹುದು. ಇತ್ತೀಚಿನ ದಿನಗಳಲ್ಲಿ ಹೆಚ್ಚು ಫ್ಯಾಷನ್ ಭಾಗವಾಗಿರುವ ಟ್ಯಾಟೂ ಹಾಕಿಸಿಕೊಳ್ಳುವ ಮುನ್ನ ಎಚ್ಚರಿಕೆ ವಹಿಸದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಅಸುರಕ್ಷಿತ ಸ್ಥಳಗಳಲ್ಲಿ ಹಚ್ಚೆ ಹಾಕಿಸಿಕೊಂಡಾಗ ಅವರು ಒಬ್ಬರಿಗೆ ಬಳಸಿದ ಸೂಜಿಯನ್ನು ಇನ್ನೊಬ್ಬರಿಗೆ ಬಳಸುವ ಸಾಧ್ಯತೆಯಿರುತ್ತದೆ. ಇದರಿಂದ ಸೋಂಕು ಸುಲಭವಾಗಿ ಹರಡುತ್ತದೆ. ಎಚ್‌ಐವಿ ಸಾಂಕ್ರಾಮಿಕ ರೋಗವಾಗಿರುವುದರಿಂದ ಏಡ್ಸ್ ಸೋಂಕಿರುವ ವ್ಯಕ್ತಿಗೆ ಟ್ಯಾಟೂ ಹಾಕಲು ಬಳಸಿದ ಸೂಜಿಯನ್ನೇ ಮತ್ತೊಬ್ಬರಿಗೆ ಬಳಸಿದರೆ ಏಡ್ಸ್ ಸೋಂಕು ಹರಡುತ್ತದೆ.

ಬ್ಲಡ್ ಪಡೆಯುವ ವೇಳೆ ಇರಲಿ ಎಚ್ಚರಿಕೆ: ರಕ್ತದಾನ ಮಹಾದಾನ ನಿಜ. ಆದರೆ ರಕ್ತವನ್ನು ನೀಡುವಾಗ ಅಥವಾ ರಕ್ತವನ್ನು ಪಡೆಯುವ ಸಂದರ್ಭದಲ್ಲಿ ಸುರಕ್ಷತೆ ಬಗ್ಗೆ ಗಮನ ನೀಡಬೇಕು. ವಿಶ್ವಾಸಾರ್ಹ ಆಸ್ಪತ್ರೆ ಅಥವಾ ವೈದ್ಯರ ಸಹಾಯ ಪಡೆಯಬೇಕು. ಸೋಂಕಿತರ ರಕ್ತ ನಿಮ್ಮ ಮೈ ಸೇರಿದರೆ, ನೀವು ಸುಲಭವಾಗಿ ಎಚ್‌ಐವಿಗೆ ತುತ್ತಾಗುತ್ತೀರಿ. ಹಾಗಾಗಿ ರಕ್ತ ಪಡೆಯುವ ಮುನ್ನ ಇದನ್ನು ಪರೀಕ್ಷಿಸಿಕೊಳ್ಳಬೇಕು ಎಂದು ಡಾ. ರಾಘವೇಂದ್ರ ಎಫ್.ಎನ್ ಅವರು ಹೇಳುತ್ತಾರೆ.

ಆರೋಗ್ಯ ಇಲಾಖೆ ಮತ್ತು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಕೈಗೊಂಡ ಜನಜಾಗೃತಿ ಅಭಿಯಾನಗಳ ಪರಿಣಾಮ ರಾಜ್ಯದಲ್ಲಿ ನಿಧಾನವಾಗಿ ಸೋಂಕಿತರ ಸಂಖ್ಯೆ ಕುಸಿಯುತ್ತಿದೆ. ಈ ಜನಜಾಗೃತಿ ಅಭಿಯಾನದಲ್ಲಿ ನಾವು ಕೂಡ ಪಾಲ್ಗೊಳ್ಳುವ ಮೂಲಕ ಏಡ್ಸ್ ಪೀಡಿತರಲ್ಲಿ ಆತ್ಮವಿಶ್ವಾಸ ತುಂಬುವ ಜೊತೆಗೆ ಏಡ್ಸ್ ಅನ್ನು ನಮ್ಮ ರಾಜ್ಯದಲ್ಲಿ ನಿರ್ಮೂಲನೆ ಮಾಡಲು ಸರ್ಕಾರದೊಟ್ಟಿಗೆ ಸಹಕರಿಸಬೇಕು. ಒಟ್ಟಿನಲ್ಲಿ ಈ ಕಾಯಿಲೆ ನಿಯಂತ್ರಣಕ್ಕೆ ಔಷಧಿಗಿಂತ ಜನಜಾಗೃತಿಯೇ ಮದ್ದು.


Downloaded From:www.kpscvaani.com



# ಗಿಗ್ ಕಾರ್ಮಿಕರಿಗೆ ವಿಮಾ ಸೌಲಭ್ಯ

**ರಾಜ್ಯ ಸರ್ಕಾರವು ಗಿಗ್ ಕಾರ್ಮಿಕರಿಗೆ ಜೀವ ವಿಮೆ, ಅಪಘಾತ ಪರಿಹಾರ ಯೋಜನೆ ಸೌಲಭ್ಯಗಳನ್ನು ಒದಗಿಸುತ್ತಿದೆ.**

ಕೆ. ಎಸ್. ರಾಜಮನ್ನಾರ್

ರಾಜ್ಯದ ಗಿಗ್ ಕಾರ್ಮಿಕರಿಗೆ ಎರಡು ಲಕ್ಷ ರೂಪಾಯಿ ಜೀವ ವಿಮೆ ಹಾಗೂ ಎರಡು ಲಕ್ಷ ರೂಪಾಯಿ ಅಪಘಾತ ಪರಿಹಾರ ಸೌಲಭ್ಯ ಸೇರಿ ಒಟ್ಟು 4 ಲಕ್ಷ ರೂಪಾಯಿಗಳ ವಿಮಾ ಸೌಲಭ್ಯವನ್ನು ಸರ್ಕಾರ ಕಲ್ಪಿಸಿದೆ.

ಮುಖ್ಯಮಂತ್ರಿ ಸಿದ್ದರಾಮ್ಯಯ ಅವರು ಬಜೆಟ್‌ನಲ್ಲಿ ಸಾಮಾಜಿಕ ಭದ್ರತೆ ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಿ, ಗಿಗ್ ಕಾರ್ಮಿಕರಿಗೆ ವಿಮಾ ಸೌಲಭ್ಯದ ಬಗ್ಗೆ ಘೋಷಿಸಿದ್ದು, ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮಂಡಳಿ ಮೂಲಕ ಜಾರಿಗೆ ಆದೇಶಿಸಲಾಗಿದೆ. ಈ ಯೋಜನೆಯ ಕುರಿತಂತೆ ರಾಜ್ಯಪತ್ರ (ಗೆಜೆಟ್) ಹೊರಡಿಸಲಾಗಿದ್ದು, ಈ ವರ್ಷದ ಸೆಪ್ಟೆಂಬರ್ 7 ರಿಂದಲೇ ಯೋಜನೆ ಜಾರಿಯಾಗಿದೆ. ಗಿಗ್ ಕಾರ್ಮಿಕರಿಗೆ ಜೀವನ ಭದ್ರತೆ ಒದಗಿಸುವುದು ಇದರ ಮುಖ್ಯ ಉದ್ದೇಶ.

**ಗಿಗ್ ಕಾರ್ಮಿಕರು ಯಾರು?**

ಖಾಸಗಿ ಕಾಂಟ್ರ್ಯಾಕ್ಟರ್, ಆನ್‌ಲೈನ್ ಕಾರ್ಮಿಕರು, ಗುತ್ತಿಗೆ ಸಂಸ್ಥೆಯ ಕಾರ್ಮಿಕರು, ಮನೆ ಬಾಗಿಲಿಗೆ ಸರಕು, ಸೇವೆ ಒದಗಿಸುವ ಡೆಲಿವರಿ ಮಾಡುವ ಹುಡುಗರು/ಹುಡುಗಿಯರು ಸೇರಿದಂತೆ ಅಸಂಘಟಿತ ವಲಯದ ಪೂರ್ಣಾವಧಿ/ಅರೆಕಾಲಿಕ ನೌಕರರನ್ನು ಗಿಗ್ ಕಾರ್ಮಿಕರು ಎಂದು ಪರಿಗಣಿಸಲಾಗುತ್ತದೆ. ಸಾಂಪ್ರದಾಯಿಕ ಉದ್ಯೋಗದಾತ–ಉದ್ಯೋಗಿ ಸಂಬಂಧದ ಹೊರಗಿನ ಚಟುವಟಿಕೆಗಳಿಂದ ಆದಾಯ ಗಳಿಸುವವರನ್ನೂ ಗಿಗ್ ಕಾರ್ಮಿಕರೆಂದು ಪರಿಗಣಿಸಲಾಗುವುದು.

ಸ್ವಿಗ್ಗಿ, ಝೊಮ್ಯಾಟೋ ಮೊದಲಾದ ಆಹಾರ ಡೆಲಿವರಿ ಸಂಸ್ಥೆಗಳಲ್ಲಿ ಕೆಲಸ ಮಾಡುವವರು, ಅಮೆಜಾನ್, ಫ್ಲಿಪ್ ಕಾರ್ಟ್, ಸ್ನ್ಯಾಪ್ ಡೀಲ್, ಬಿಗ್ ಬ್ಯಾಸ್ಕೆಟ್ ಮೊದಲಾದ ವಾಣಿಜ್ಯ ವಹಿವಾಟು ಸಂಸ್ಥೆಗಳಲ್ಲಿ ಪೂರ್ಣಾವಧಿ ಅಥವಾ ಅರೆಕಾಲಿಕವಾಗಿ ಡೆಲಿವರಿ ಕೆಲಸ ಮಾಡುವಂತಹ ನೌಕರರು/ಕಾರ್ಮಿಕರ ಸಂಖ್ಯೆ ರಾಜ್ಯದಲ್ಲಿ 2.3 ಲಕ್ಷದಷ್ಟಿದೆ ಎಂಬುದು 2022ರ ನೀತಿ ಆಯೋಗದ ಸದ್ಯದ ಮಾಹಿತಿ. ಆದರೆ ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಎಷ್ಟು ಜನ ಗಿಗ್ ಅಥವಾ ಪ್ಲಾಟ್‌ಫಾರಂ ಆಧಾರಿತ ಗಿಗ್ ಕಾರ್ಮಿಕರಿದ್ದಾರೆ ಎಂಬ ಬಗ್ಗೆ ಸ್ಥಳೀಯ ಸಮೀಕ್ಷೆ ನಡೆದಿಲ್ಲ.

**ಗಿಗ್ ಕಾರ್ಮಿಕರ ವಿಮಾ ಯೋಜನೆಯ ಉದ್ದೇಶವೇನು?**

ಅಸಂಘಟಿತ ವಲಯದ ಭಾಗವಾಗಿರುವ ಗಿಗ್ ಕಾರ್ಮಿಕರಿಗೆ ಪ್ರಸ್ತುತ ಇರುವ ಕಾರ್ಮಿಕ ಕಾಯ್ದೆಯಡಿ ಯಾವುದೇ ಸಾಮಾಜಿಕ ಸೌಲಭ್ಯಗಳಿಲ್ಲ. ಗ್ರಾಹಕರಿಗೆ ಸಮಯಕ್ಕೆ ಸರಿಯಾಗಿ ಸರಕು ಅಥವಾ ಸೇವೆ ಒದಗಿಸುವ ಈ ಕಾರ್ಮಿಕರು ಅಪಘಾತಕ್ಕೆ ತುತ್ತಾಗುವ ಸಂಭವವಿರುತ್ತದೆ. ಅಪಘಾತದಿಂದ ಮೃತಪಟ್ಟರೆ ಅಥವಾ ಅಂಗವೈಕಲ್ಯತೆ ಹೊಂದಿದರೆ ಆಗ ಅವರ ಬದುಕು ದುಃಸ್ತರವಾಗುತ್ತದೆ ಮತ್ತು ಅವರ ಕುಟುಂಬಕ್ಕೆ ಹೊರೆ ಹೆಚ್ಚಾಗುತ್ತದೆ. ಬಿಸಿಲು–ಮಳೆ ಯಾವುದನ್ನೂ ಲೆಕ್ಕಿಸದೇ ಆಹಾರ ಅಥವಾ ಉತ್ಪನ್ನಗಳನ್ನು



Downloaded From:www.kpscvaani.com

ಸಂಬಂಧಪಟ್ಟ ಸ್ಥಳಗಳಿಗೆ ತಲುಪಿಸುತ್ತಾರೆ. ಹೀಗಾಗಿ ಸರ್ಕಾರ ಇಂತಹ ಕಾರ್ಮಿಕರಿಗಾಗಿ ವಿಮಾ ಸೌಲಭ್ಯ ಕಲ್ಪಿಸಲು ಮುಂದಾಗಿದೆ.

**ಯೋಜನೆಯ ಫಲಾನುಭವಿಗಳು ಯಾರು ?**

- ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ನಿವಾಸಿಗಳಾದ ಪ್ಲಾಟ್‌ಫಾರಂ ಆಧಾರಿತ ಗಿಗ್ ಕಾರ್ಮಿಕರು ಯೋಜನೆಗೆ ಅರ್ಹರು.
- ಆನ್‌ಲೈನ್ ಚಿಲ್ಲರೆ ವ್ಯಾಪಾರಿಗಳು, ಮನೆ ಬಾಗಿಲಿಗೆ ವಸ್ತುಗಳನ್ನು ತಂದು ಕೊಡುವವರು ಮತ್ತು ತಲುಪಿಸುವ ಚಾಲಕ ವೃತ್ತಿಯಲ್ಲಿರುವವರು (ಡೆಲಿವರಿ ಬಾಯ್ಸ್, ಡೆಲಿವರಿ ಡ್ರೈವರ್).
- 18 ರಿಂದ 60 ವರ್ಷ ವಯೋಮಾನದವರು.
- ಆದಾಯ ತೆರಿಗೆ ಪಾವತಿದಾರರಾಗಿರಬಾರದು.
- ಇಎಸ್‌ಐ ಮತ್ತು ಪಿಎಫ್ ಸೌಲಭ್ಯ ಹೊಂದಿರಬಾರದು.
- ಉದ್ಯೋಗದಾತರು/ಅಗ್ರಿಗೇಟರ್ ಸಂಸ್ಥೆಗಳು ನೀಡುತ್ತಿರುವ ಸೌಲಭ್ಯಕ್ಕೆ ಹೆಚ್ಚುವರಿಯಾಗಿ ಈ ವಿಮಾ ಸೌಲಭ್ಯ ಸಿಗಲಿದೆ.

**ನೋಂದಣಿ ಹೇಗೆ?**

ಉದ್ಯೋಗದಾತರಿಂದ ಪಡೆದ ಉದ್ಯೋಗ ಪ್ರಮಾಣ ಪತ್ರ/ ಗುರುತಿನ ಚೀಟಿ, ಆಧಾರ್ ಸಂಖ್ಯೆ, ಇ-ಶ್ರಮ್ ಗುರುತಿನ ಚೀಟಿ ಸಂಖ್ಯೆ, ಪಾಸ್ ಪೋರ್ಟ್ ಅಳತೆಯ ಇತ್ತೀಚಿನ ಭಾವಚಿತ್ರ, ವಿಳಾಸ ಪುರಾವೆಗಾಗಿ ಮತದಾರರ ಗುರುತಿನ ಚೀಟಿ/ ಚಾಲನಾ ಪರವಾನಗಿ / ಆಧಾರ್ ಕಾರ್ಡ್/ ಪಾಸ್ ಪೋರ್ಟ್/ ಬ್ಯಾಂಕ್ ಪಾಸ್ ಬುಕ್ ಹಾಗೂ ಮೊಬೈಲ್ ನಂಬರ್ ಮುಂತಾದ ಅಗತ್ಯ ದಾಖಲೆಗಳೊಂದಿಗೆ ಸೇವಾ ಸಿಂಧು ಪೋರ್ಟಲ್‌ನ ಮೂಲಕ ಅರ್ಜಿ ಸಲ್ಲಿಸಬೇಕು.

**ವಿಮಾ ಪರಿಹಾರ ವಿವರ:**

- ಹಕ್ಕುದಾರರ ಮರಣ ಸಂಭವಿಸಿದಲ್ಲಿ ಕಾನೂನುಬದ್ಧ ವಾರಸುದಾರರಿಗೆ ಎರಡು ಲಕ್ಷ ರೂಪಾಯಿ ಜೀವ ವಿಮಾ ಪರಿಹಾರ ಸಿಗಲಿದೆ.
- ಅಪಘಾತದಿಂದ ಮರಣ ಸಂಭವಿಸಿದಲ್ಲಿ ಎರಡು ಲಕ್ಷ ರೂಪಾಯಿಗಳ ಅಪಘಾತ ವಿಮಾ ಪರಿಹಾರ ಹಾಗೂ ಎರಡು ಲಕ್ಷ ರೂಪಾಯಿಗಳ ಜೀವ ವಿಮಾ ಪರಿಹಾರ ಸೇರಿ ಒಟ್ಟು 4 ಲಕ್ಷ ರೂಪಾಯಿ ಪರಿಹಾರ ಲಭ್ಯವಾಗಲಿದೆ.
- ಅಪಘಾತದಿಂದ ಶಾಶ್ವತ/ಭಾಗಶಃ ದುರ್ಬಲತೆ ಉಂಟಾದಲ್ಲಿ ದುರ್ಬಲತೆಯ ಶೇಕಡಾವಾರು ಆಧಾರದಲ್ಲಿ ಎರಡು ಲಕ್ಷ ರೂಪಾಯಿವರೆಗೆ ಪರಿಹಾರ, ಒಂದು ಲಕ್ಷ ರೂಪಾಯಿವರೆಗೆ ಆಸ್ಪತ್ರೆ ವೆಚ್ಚ ಮರುಪಾವತಿ ಹಾಗೂ ಕರ್ತವ್ಯದಲ್ಲಿ ಇರುವಾಗ ಅಥವಾ ಇಲ್ಲದೇ ಇರುವಾಗಲೂ ಸಂಭವಿಸುವ ಅಪಘಾತಕ್ಕೂ ಸೌಲಭ್ಯ ಅನ್ವಯವಾಗಲಿದೆ.

**ಯಾವ ಸಂದರ್ಭದಲ್ಲಿ ವಿಮಾ ಸೌಲಭ್ಯ ಸಿಗುವುದಿಲ್ಲ?**

- ಆತ್ಮಹತ್ಯೆ ಮಾಡಿಕೊಂಡಲ್ಲಿ ಜೀವ ವಿಮೆ ಸಿಗುವುದಿಲ್ಲ.
- ಮದ್ಯ ಅಥವಾ ಮಾದಕ ದ್ರವ್ಯ ಸೇವಿಸಿದಾಗ ಅಪಘಾತ ಸಂಭವಿಸಿದರೆ ವಿಮಾ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ.
- ಅಪರಾಧ ಉದ್ದೇಶಕ್ಕೆ ಮಾಡಿದ ಯಾವುದಾದರೂ ಕಾನೂನು ಉಲ್ಲಂಘನೆಯಿಂದ ಅಪಘಾತ ಸಂಭವಿಸಿದರೂ ವಿಮೆಗೆ ಅರ್ಹರಾಗುವುದಿಲ್ಲ.
- ಬುದ್ಧಿಭ್ರಮಣೆಯಾಗಿ ಅಪಘಾತ ಸಂಭವಿಸಿದರೂ ವಿಮೆಗೆ ಅರ್ಹರಾಗುವುದಿಲ್ಲ.
- ಯುದ್ಧ, ಅತಿಕ್ರಮಣ, ದಂಗೆ ಮೊದಲಾದ ಕಾರಣಗಳಿಂದ ಸಂಭವಿಸುವ ಅಪಘಾತಗಳಿಗೆ ವಿಮಾ ವ್ಯಾಪ್ತಿ ಇರುವುದಿಲ್ಲ.




**ವಿಮಾ ಪ್ರೀಮಿಯಂ**

ನೋಂದಾಯಿತ ಗಿಗ್ ಕಾರ್ಮಿಕರು ಯಾವುದೇ ಪ್ರೀಮಿಯಂ ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸುವ ಅಗತ್ಯವಿಲ್ಲ. ರಾಜ್ಯ ಸರ್ಕಾರವೇ ಪ್ರೀಮಿಯಂ ಅನ್ನು ಭರಿಸಲಿದೆ.

**ವಿಮಾ ಹಕ್ಕು (ಕ್ಲೇಮ್) ಪಡೆಯುವುದು ಹೇಗೆ?**

ವಿಮೆ ಪಡೆದಿರುವ ಗಿಗ್ ಕಾರ್ಮಿಕರು ಮೃತಪಟ್ಟ ಒಂದು ವರ್ಷದೊಳಗೆ ಅಥವಾ ಅಪಘಾತ ಸಂಭವಿಸಿದ ಒಂದು ವರ್ಷದೊಳಗೆ ನಿಗದಿತ ನಮೂನೆಯಲ್ಲಿ ಕಾರ್ಮಿಕ ಇಲಾಖೆಗೆ ಅರ್ಜಿ ಸಲ್ಲಿಸಬೇಕು. ಅರ್ಜಿಯೊಂದಿಗೆ ಯೋಜನೆಯಡಿ ನೀಡುವ ಗುರುತಿನ ಚೀಟಿ, ಮರಣ ಪ್ರಮಾಣ ಪತ್ರ, ಉದ್ಯೋಗದಾತರಿಂದ ನಿಗದಿತ ನಮೂನೆಯಲ್ಲಿ ಪಡೆದ ಉದ್ಯೋಗ ಪ್ರಮಾಣ ಪತ್ರ, ಕಂದಾಯ ಇಲಾಖೆಯ ವಂಶವೃಕ್ಷ ಪ್ರಮಾಣ ಪತ್ರ, ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಪ್ರತಿ ಮತ್ತು ನಾಮ ನಿರ್ದೇಶಿತರ ಬ್ಯಾಂಕ್ ಪಾಸ್ ಬುಕ್ ಪುಸ್ತಕದ ಪ್ರತಿ ಮುಂತಾದ ದಾಖಲೆಗಳನ್ನು ಲಗತ್ತಿಸಬೇಕು.

ಅಪಘಾತ ಸಂಬಂಧಿತ ಮರಣ ಪ್ರಕರಣಗಳಲ್ಲಿ ಈ ಮೇಲಿನ ದಾಖಲೆಗಳ ಜೊತೆಗೆ ಮರಣೋತ್ತರ ಪರೀಕ್ಷಾ ವರದಿ, ಪ್ರಥಮ ವರ್ತಮಾನ ವರದಿ (ಎಫ್ ಐ ಆರ್), ಆಸ್ಪತ್ರೆಯ ಮೂಲ ಬಿಲ್‌ಗಳು, ಮನೆಗೆ ಬರುವಾಗ ಕೊನೆಯಲ್ಲಿ ವೈದ್ಯರು ನೀಡುವ ರೋಗಿ ಚಿಕಿತ್ಸಾ ಸಾರಾಂಶ (ಡಿಸ್ ಚಾರ್ಜ್ ಸಮ್ಮರಿ) ಸಲ್ಲಿಸಬೇಕು. ಅಪಘಾತದಿಂದ ಅಂಗವೈಕಲ್ಯತೆ ಸಂಭವಿಸಿದಲ್ಲಿ ಮರಣ ಪ್ರಮಾಣ ಪತ್ರ, ಮರಣೋತ್ತರ ಪರೀಕ್ಷಾ ವರದಿ ಹೊರತುಪಡಿಸಿ ಇತರ ದಾಖಲೆಗಳನ್ನು ಹಾಗೂ ಅಂಗವಿಕಲತೆ ಪ್ರಮಾಣಪತ್ರ ಸಲ್ಲಿಸಬೇಕು.


ಎಲ್ಲಾ ಪರಿಹಾರ ಮೊತ್ತ ಫಲಾನುಭವಿ/ನಾಮನಿರ್ದೇಶಿತರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮೂಲಕ ಜಮೆಯಾಗಲಿದೆ. ಮರಣ ಸಮಯದಲ್ಲಿ ಫಲಾನುಭವಿ ಅವಿವಾಹಿತರಾಗಿದ್ದರೆ ತಂದೆ ಅಥವಾ ತಾಯಿ, ವಿವಾಹಿತರಾಗಿದ್ದರೆ ಹೆಂಡತಿ-ಮಕ್ಕಳು ಕಾನೂನುಬದ್ಧ ವಾರಸುದಾರರಾಗಿರುತ್ತಾರೆ. ■



Downloaded From:www.kpscvaani.com

## ಕನ್ನಡದ ಮೊಟ್ಟ ಮೊದಲ ರಾಷ್ಟ್ರೀಯವಾದಿ ಪತ್ರಿಕೆ

# ಚಂದ್ರೋದಯ


ಚಂದ್ರೋದಯ.

20,000 TWENTY THOUSAND POUNDS

**ಭಾ**ರತದ ಸ್ವಾತಂತ್ರ್ಯ ಚಳವಳಿಯ ಕಥನ ಎಷ್ಟು ವರ್ಣರಂಜಿತವೋ, ಇಲ್ಲಿನ ಪತ್ರಿಕಾರಂಗದ ಇತಿಹಾಸ ಕೂಡ ಅಷ್ಟೇ ಕುತೂಹಲಭರಿತ. ಕನ್ನಡ ಪತ್ರಿಕೋದ್ಯಮ ಜನ್ಮತಾಳಿದ್ದು ಕರಾವಳಿ ನಗರ ಮಂಗಳೂರಿನಲ್ಲಾದರೆ, ಅದು ಪ್ರಖರ ರಾಷ್ಟ್ರೀಯವಾದಿ ಧೋರಣೆಯನ್ನು ಮೈಗೂಡಿಸಿಕೊಂಡು ಹೊಸ ರೂಪದಲ್ಲಿ ಹೊರಹೊಮ್ಮಿದ್ದು ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ನೆಲೆನಿಂತಿರುವ ನಗರ ಧಾರವಾಡದಲ್ಲಿ.

ಕ್ರಿ. ಶ. 1876ರಿಂದ 1901ರ ತನಕ ನಡೆಸಲ್ಪಟ್ಟ ಈ ಪತ್ರಿಕೆ ಧಾರವಾಡ ಜಿಲ್ಲೆಯ ಮೊಟ್ಟ ಮೊದಲ ಕನ್ನಡ ಪತ್ರಿಕೆ ಮಾತ್ರವಲ್ಲದೆ, ಕನ್ನಡ ಭಾಷೆಯಲ್ಲಿ ಹೊರಬಂದ ಮೊಟ್ಟ ಮೊದಲ ರಾಷ್ಟ್ರೀಯವಾದಿ ಧೋರಣೆಯ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕನ್ನಡ ಪತ್ರಿಕೋದ್ಯಮದಲ್ಲಿ ಹೊಸ ಛಾಪು ಮೂಡಿಸಿದ ಈ ಪತ್ರಿಕೆಯ ಮೂಲಕ ರಾಷ್ಟ್ರೀಯವಾದಿ ವಿಚಾರಗಳನ್ನು ಜನಮಾನಸದಲ್ಲಿ ಬಿತ್ತುವ ಮತ್ತು ಆ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಒತ್ತು ಕೊಡುವ ಹೊಸ ಪರಂಪರೆಯೊಂದು ಕನ್ನಡ ಪತ್ರಿಕಾರಂಗದಲ್ಲಿ ಆರಂಭವಾಯಿತು. ಹಿರಿಯ ಸಂಶೋಧಕ ಶ್ರೀನಿವಾಸ ಹಾವನೂರು ಅಭಿಪ್ರಾಯಪಟ್ಟಂತೆ 'ಚಂದ್ರೋದಯ' ಪತ್ರಿಕೆಯ ಮೂಲಕ ರಾಜ್ಯದ ಈ ಭಾಗದಲ್ಲಿ ಕನ್ನಡ ಪತ್ರಿಕೋದ್ಯಮದ ಉದಯವಾಯಿತು ಮಾತ್ರವಲ್ಲ ಕನ್ನಡ ಪತ್ರಿಕೋದ್ಯಮದಲ್ಲಿ ರಾಷ್ಟ್ರೀಯವಾದಿ ವಿಚಾರಗಳಿಗೆ ಒತ್ತು ಕೊಡುವ ಹೊಸ ಪರಂಪರೆಯೊಂದು ಶುರುವಾಯಿತು.

ಈ ಪತ್ರಿಕೆಯನ್ನು ಹುಚ್ಚಯ್ಯ ಸಂಗಯ್ಯ ವಿಭೂತಿ ಎಂಬವರು ಆರಂಭಿಸಿದರೂ, ಅದು ಇಲ್ಲಿನ ಜನಪ್ರಿಯ ಪತ್ರಿಕೆಯಾಗಿ ಮತ್ತು ಜನಸಾಮಾನ್ಯರ ಮುಖವಾಣಿಯಾಗಿ ಬೆಳವಣಿಗೆ ಕಂಡಿದ್ದು ಪತ್ರಿಕೆಯ ಎರಡನೇ ಸಂಪಾದಕ ಮತ್ತು ತಮ್ಮ ಕಾಲದ ಪ್ರಖರ ರಾಷ್ಟ್ರೀಯವಾದಿ ವಕೀಲ, ಚಿಂತಕ ಮತ್ತು ಬರಹಗಾರ ಗದಿಗೆಯ್ಯಾ ಹುಚ್ಚಯ್ಯ ಹೊನ್ನಾಪುರಮಠ ಅವರ ಸಂಪಾದಕತ್ವದಲ್ಲಿ. ಅದುವರೆಗೆ ಮರಾಠಿ ಭಾಷೆಯ ಪಾರಮ್ಯವಿದ್ದ ಧಾರವಾಡದಲ್ಲಿ ಕನ್ನಡ ಮರುಹುಟ್ಟಿಗೆ ಕೂಡ ಈ ಪತ್ರಿಕೆ ಕಾರಣವಾಯಿತು. ಹೀಗೆ, ಜನಸಾಮಾನ್ಯರಲ್ಲಿ ರಾಷ್ಟ್ರೀಯ ಮನೋಭಾವನೆಯ ಜೊತೆಯಲ್ಲಿಯೇ ತಾಯಿನುಡಿಯ ಬಗ್ಗೆ ಪ್ರೀತಿ, ಅಭಿಮಾನ ಮೂಡಿಸಿ ಕನ್ನಡದ ಪುನರುಜ್ಜೀವನ ಸಾಧಿಸುವ ಉನ್ನತ ಧ್ಯೇಯದೊಂದಿಗೆ ಈ ಪತ್ರಿಕೆ ಆರಂಭವಾಗಿತ್ತು. ಅಂದಿನ ಕಾಲದಲ್ಲಿ ಧಾರವಾಡದಿಂದ ಪ್ರಕಟವಾಗುತ್ತಿದ್ದ ಪ್ರಮುಖ ಮರಾಠಿ ಪತ್ರಿಕೆಗಳಾದ 'ಧಾರವಾಡ ವೃತ್ತ' ಮತ್ತು 'ಛಾವಾ' ಜೊತೆಯಲ್ಲಿ ಪೈಪೋಟಿಗಿಳಿದ 'ಚಂದ್ರೋದಯ' ಕ್ರಮೇಣ ಮೇಲುಗೈ ಸಾಧಿಸಿತ್ತು.

**ಪತ್ರಿಕೆಯ ಆರಂಭ**

ಈ ಪತ್ರಿಕೆಯ ಆರಂಭಕ್ಕೆ ಕಾರಣವಾದ ಘಟನೆ ಕೂಡ ತುಂಬಾ ಕುತೂಹಲಕಾರಿ. ಪತ್ರಿಕೆಯ ಸ್ಥಾಪಕ ಸಂಪಾದಕ ಹುಚ್ಚಯ್ಯ ವಿಭೂತಿ ಆಗಿನ ಕಾಲದಲ್ಲಿ ಸುಶಿಕ್ಷಿತ ವ್ಯಕ್ತಿ ಹಾಗೂ ಕಂದಾಯ ಇಲಾಖೆಯ ಉದ್ಯೋಗಿ. ಆದರೆ, ಸ್ವಾಭಿಮಾನಿ ವ್ಯಕ್ತಿತ್ವ ಮತ್ತು ಸ್ವತಂತ್ರ ವಿಚಾರಧಾರೆ ಹೊಂದಿದ್ದ

**ಕನ್ನಡ ಭಾಷೆಯಲ್ಲಿ ಹೊರಬಂದ ಚಂದ್ರೋದಯ ಮೊಟ್ಟ ಮೊದಲ ರಾಷ್ಟ್ರೀಯವಾದಿ ಧೋರಣೆಯ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.**

ದಿನೇಶ ನಾಯಕ್



Downloaded From:www.kpscvaani.com

ಅವರು ಅಂದಿನ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರ ಬಾಲಗಂಗಾಧರ ತಿಲಕ್ ಅವರ ವಿಚಾರಗಳಿಂದ ಬಹಳ ಪ್ರಭಾವಿತರಾಗಿದ್ದರು.

ಹೀಗೆ, ರಾಷ್ಟ್ರೀಯವಾಗಿ ವಿಚಾರಗಳಿಂದ ಪ್ರಭಾವಿತರಾಗಿದ್ದ ಮತ್ತು ಏನದರೂ ಹೊಸತನ್ನು ಸಾಧಿಸಬೇಕು ಎಂಬ ಪ್ರಬಲ ಇಚ್ಛೆ ಹೊಂದಿದ್ದ ನವತರುಣ ಹುಚ್ಚಯ್ಯ ವಿಭೂತಿಗೆ ಸರಕಾರಿ ನೌಕರಿ ರುಚಿಸಲಿಲ್ಲ. ಹೀಗಾಗಿ, ಸರಕಾರಿ ಉದ್ಯೋಗ ತೊರೆದ ಅವರು ಮುದ್ರಣಾಲಯ ಆರಂಭಿಸಿದರು ಮತ್ತು ಕೆಲವೇ ಸಮಯದಲ್ಲಿ 'ಚಂದ್ರೋದಯ' ಹೆಸರಿನ ಪತ್ರಿಕೆಯ ಪ್ರಕಟಣೆಗೆ ಕೂಡ ಕೈಹಾಕಿದರು. ಒಂದು ಸಲ ಧಾರವಾಡಕ್ಕೆ ಭೇಟಿ ನೀಡಿದ್ದ ತಿಲಕ್ ಅವರ ಸಲಹೆಯ ಮೇರೆಗೆ ಅವರ ನಿಷ್ಠಾವಂತ ಅನುಯಾಯಿಯಾಗಿದ್ದ ವಿಭೂತಿಯವರು ಈ ಪತ್ರಿಕೆ ಆರಂಭಿಸುವ ಸಾಹಸಕ್ಕೆ ಮುಂದಾದರು ಎಂದು ಹೇಳುತ್ತಾರೆ.

**ಪತ್ರಿಕೆಯ ಆಶಯ**

ಕನ್ನಡ ಪತ್ರಿಕಾರಂಗದಲ್ಲಿ ಹೊಸತನದ ಛಾಪು ಮೂಡಿಸಿದ್ದ ಚಂದ್ರೋದಯ ಪತ್ರಿಕೆ ಉನ್ನತ ಧ್ಯೇಯ ಇಟ್ಟುಕೊಂಡೇ ಆರಂಭವಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಈ ಮಾತಿಗೆ ಪೂರಕವಾಗಿ ಪತ್ರಿಕೆಯ ಲಭ್ಯ ಪ್ರತಿಗಳ ಪೈಕಿ 1890, ಸಪ್ಟೆಂಬರ್ 6ನೇ ತಾರೀಕಿನ ಆವೃತ್ತಿಯು ಚಂದ್ರೋದಯದ 15ನೇ ವರ್ಧಂತಿ ಸಂಚಿಕೆ ಉಲ್ಲೇಖಿಸಬಹುದು. ಇದರಲ್ಲಿ ಪತ್ರಿಕೆಯ ಆಶಯದ ಕುರಿತು ಹೇಳಲಾಗಿದೆ. ಈ ಪತ್ರಿಕೆ ಏಕೆ ಪ್ರಕಟವಾಗುತ್ತಿದೆ ಎಂಬುದನ್ನು ಹೇಳುತ್ತ, "ಸ್ವದೇಶ ಬಾಂಧವರಲ್ಲಿ ನಾಗರಿಕತೆಯನ್ನುಂಟು ಮಾಡುವುದಕ್ಕೂ, ಅವರಿಗೆ ಸನ್ಮಾರ್ಗ ಮತ್ತು ಸುವಿಚಾರಗಳನ್ನು ತೋರಿಸುವುದಕ್ಕೂ ನಿರಂತರ ಶ್ರಮ ಮಾಡುವುದೇ ವರ್ತಮಾನ ಪತ್ರಕರ್ತರ ಕರ್ತವ್ಯ ಮತ್ತು ಕರ್ಮವಾಗಿರುವುದರಿಂದ ಈ ಮಹತ್ವವುಳ್ಳ ಕರ್ತವ್ಯವನ್ನು ಈಡೇರಿಸುವಾಗ್ಯೂ ನಾವು ನಮ್ಮ ವಾಚಕರೊಳಗೆ ಅನೇಕರ ಮನಸ್ಸನ್ನು ವಿಷಾದಪಡಿಸುವ ಪ್ರಸಂಗ ಬಂದಿರಬಹುದು" ಎಂದು ಸಂಪಾದಕೀಯದಲ್ಲಿ ಹೇಳಿದೆ. ಇದೇ ಲೇಖನದಲ್ಲಿ ಮುಂದೆ ಕನ್ನಡ ಭಾಷೆಯ ಬೆಳವಣಿಗೆಯ ಕುರಿತು ಉಲ್ಲೇಖಿಸುತ್ತ "ಕನ್ನಡ ಭಾಷೆಯೊಳಗೆ ಯೋಗ್ಯ ವರ್ತಮಾನ ಪತ್ರಿಕೆಗಳ ಮತ್ತು ಗ್ರಂಥಗಳ ಸಂಖ್ಯೆ ಹೆಚ್ಚಾಗದ ಹೊರ್ತು ನಮ್ಮ ಕನ್ನಡ ಭಾಷೆಯ ಸುಧಾರಣೆ ನಡಿಯಲಾರದು ಎಂಬುದು ನಿರ್ವಿವಾದ" ಎಂದು ಬರೆದಿದೆ. ಹೀಗೆ ಧ್ಯೇಯ ನಿಷ್ಠ ಪತ್ರಿಕೋದ್ಯಮದ ಜೊತೆಯಲ್ಲಿ ಭಾಷಾ ಬೆಳವಣಿಗೆಯ ನಿಟ್ಟಿನಲ್ಲಿಯೂ ಶ್ರಮಿಸುವ ತನ್ನ ಇಂಗಿತವನ್ನು ಪತ್ರಿಕೆ ಸ್ಪಷ್ಟಪಡಿಸಿದೆ.

**ಪ್ರಖರ ರಾಷ್ಟ್ರೀಯ ಧೋರಣೆ**

ಸಂಪಾದಕೀಯಗಳನ್ನು ಬರೆಯುವ ಮತ್ತು ಭಾರತಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಪತ್ರಿಕೆಯ ಸಂಪಾದಕರು ಪ್ರಖರ ದೇಶಾಭಿಮಾನವನ್ನೂ, ಸ್ವಂತಿಕೆಯನ್ನೂ ತೋರಿಸಿರುವುದು ಕಂಡುಬರುತ್ತದೆ.

ಉದಾಹರಣೆಗೆ, 1889ರ ನವೆಂಬರ್ 2 ನೇ ತಾರೀಖಿನ ಸಂಚಿಕೆಯಲ್ಲಿ ಅಂದು ಇಲ್ಲಿ ಅಧಿಕಾರ ನಡೆಸುತ್ತಿದ್ದ ಬ್ರಿಟಿಷ್ ಸರಕಾರದ ಯುದ್ಧ ನೀತಿಯನ್ನು ಕಟುವಾಗಿ ಟೀಕಿಸಿರುವುದು ಮತ್ತು ಭಾರತೀಯರ ಹಣದಿಂದ ಬ್ರಿಟಿಷ್ ಸರಕಾರ ತನ್ನ ಯುದ್ಧದ ಖರ್ಚು-ವೆಚ್ಚ ಭರಿಸುವುದನ್ನು ಪ್ರಶ್ನಿಸಿರುವುದು ಗಮನಾರ್ಹ.

ಅಂದಿನ ಕಾಲದಲ್ಲಿ ಗರಿಗೆದರುತ್ತಿದ್ದ ಸ್ವಾತಂತ್ರ್ಯ ಚಳವಳಿಯ ನೇತೃತ್ವ ವಹಿಸಿದ್ದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳ ಕುರಿತು ಕೂಡ ಪತ್ರಿಕೆ ಕಾಲಕಾಲಕ್ಕೆ ತನ್ನ ಅಭಿಪ್ರಾಯ ಪ್ರಕಟಪಡಿಸುತ್ತಿತ್ತು. ಉದಾಹರಣೆಗೆ, 1890ರ ಕಲ್ಕತ್ತೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು ಯಾರಾಗಬೇಕು ಎಂಬ ಕುರಿತು ಚರ್ಚೆ ನಡೆದಾಗ ಪತ್ರಿಕೆ ತನ್ನ ಅಭಿಪ್ರಾಯ ಪ್ರಕಟಿಸುತ್ತ 'ನಮ್ಮ ದೇಶದ ಹಿತವನ್ನು ಚಿಂತಿಸುವ ಇಂಗ್ಲಂಡವಾಸೀ ಸದ್ಗೃಹಸ್ಥರು ನಮಗೆ ಅಧ್ಯಕ್ಷರಾಗಿ ಇರಬೇಕು' ಎಂದು ಬರೆಯಿತು.

ಸಮಾಜ ಸುಧಾರಣಾ ಚಳವಳಿಯ ಹಿರಿಯ ನೇತಾರ ಮಹದೇವ ಗೋವಿಂದ ರಾನಡೆಯವರು ತೀರಿಕೊಂಡಾಗ ಪತ್ರಿಕೆಯು ಅಗ್ರಲೇಖನವನ್ನು ಪ್ರಕಟಿಸಿತು. ಅದೇ ರೀತಿ ಭಾರತೀಯರಿಗೆ ಆಡಳಿತದಲ್ಲಿ ಪ್ರಾತಿನಿಧ್ಯ ಕೊಡುವ ಸಲುವಾಗಿ ಬ್ರಿಟಿಷ್ ಸರಕಾರ ಅಸ್ತಿತ್ವಕ್ಕೆ ತಂದಿದ್ದ ಶಾಸನ ಸಭೆಗಳಿಗೆ ನೇಮಕದ ವಿಚಾರದಲ್ಲಿಯೂ ಪತ್ರಿಕೆ ತನ್ನ ಅಭಿಪ್ರಾಯ ನೀಡಿದೆ.

ದೇಶವು ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಅಂದಿನ ದಿನಮಾನದಲ್ಲಿ



**ಗದಿಗೆಯ್ಯ ಹುಚ್ಚಯ್ಯ ಹೊನ್ನಾಪುರಮಠ**

ಹೊನ್ನಾಪುರಮಠ ವಕೀಲರೆಂದೇ ಹೆಸರಾಗಿರುವ 'ಚಂದ್ರೋದಯ' ಪತ್ರಿಕೆಯ ಎರಡನೇ ಸಂಪಾದಕರಾಗಿದ್ದ ಗದಿಗೆಯ್ಯನವರು ಓರ್ವ ಬಹುಮುಖ ಪ್ರತಿಭೆ. ಹೆಸರಾಂತ ವಕೀಲರಾಗಿರುವ ಜೊತೆಯಲ್ಲಿ, ಪತ್ರಕರ್ತರು, ಸಾಹಿತಿಗಳು, ಪ್ರಗತಿಪರ ಚಿಂತಕರು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಪ್ರಖರ ರಾಷ್ಟ್ರೀಯವಾದಿಗಳೂ ಆಗಿದ್ದರು.

'ಸರಳ ಜೀವನ, ಉನ್ನತ ಚಿಂತನ' (Simple living, high thinking) ಎಂಬ ಮಾತಿಗೆ ಜ್ವಲಂತ ಉದಾಹರಣೆಯಂತೆ ಇದ್ದ ಹೊನ್ನಾಪುರಮಠ ವಕೀಲರು ಪ್ರಸಿದ್ಧ ನ್ಯಾಯವಾದಿ, ಪ್ರಬುದ್ಧ ಚಿಂತಕ-ಪತ್ರಕರ್ತ ಆಗುವ ಜೊತೆಯಲ್ಲಿಯೇ ಉನ್ನತ ಸ್ತರದ ಲೇಖಕರೂ ಆಗಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆ ಕೂಡ ಕಡಿಮೆಯೇನಲ್ಲ. ವಿವಿಧ ಕ್ಷೇತ್ರಗಳಲ್ಲಿ ಅವಿರತ ಚಟುವಟಿಕೆಗಳ ಹೊರತಾಗಿಯೂ ಅವರು ಸಾಹಿತ್ಯ ಕೃಷಿಗೆ ಸಮಯ ಕಂಡುಕೊಂಡಿದ್ದು ಸೋಜಿಗ ಸಂಗತಿ. ಹೊನ್ನಾಪುರ ವಕೀಲರ ಸಾಹಿತ್ಯ ಕೃಷಿ ಕತೆ, ಕಾದಂಬರಿ ಮತ್ತು ಕಾನೂನು ಪುಸ್ತಕಗಳು ಸೇರಿದಂತೆ ವೈವಿಧ್ಯಮಯವಾಗಿದೆ. ಒಟ್ಟು 33 ಕೃತಿಗಳನ್ನು ಕನ್ನಡದಲ್ಲಿ ರಚಿಸಿರುವ ಹೆಗ್ಗಳಿಕೆ ಅವರದ್ದು.


Downloaded From:www.kpscvaani.com

ರಾಷ್ಟ್ರೀಯವಾದಿ ಧೋರಣೆಯ ಪತ್ರಿಕೆಯನ್ನು ನಡೆಸುವುದು ಸುಲಭದ ಮಾತಾಗಿರಲಿಲ್ಲ. ಸರಕಾರದ ಕೆಂಗಣ್ಣು ಅವುಗಳ ಮೇಲೆ ಇದ್ದೇ ಇರುತ್ತಿತ್ತು. ಇದರಿಂದಾಗಿ ಅಂತಹ ಪತ್ರಿಕೆ ಮತ್ತು ಅದರ ಸಂಪಾದಕರು ಕಾಲಕಾಲಕ್ಕೆ ಬ್ರಿಟಿಷ್ ಸರಕಾರದ ಕಿರುಕುಳವನ್ನು ಕೂಡ ಅನುಭವಿಸಬೇಕಾಗಿ ಬರುತ್ತಿತ್ತು. 'ಚಂದ್ರೋದಯ' ಈ ಮಾತಿಗೆ ಅಪವಾದವಲ್ಲ. ಅದು ಎಷ್ಟು ಜನಪ್ರಿಯತೆ ಗಳಿಸಿಕೊಂಡಿತ್ತೋ ಅಷ್ಟೇ ಸವಾಲುಗಳನ್ನು ಕೂಡ ಎದುರಿಸಬೇಕಾಗಿತ್ತು. 'ಚಂದ್ರೋದಯ' ವಾರಪತ್ರಿಕೆ ಆಳರಸರ ದಬ್ಬಾಳಿಕೆಯ ಧೋರಣೆಯಿಂದ ಹೆಚ್ಚಾಗಿ ಕಾಲಕಾಲಕ್ಕೆ ಅಜ್ಞಾತವಾಸದಲ್ಲಿರಬೇಕಾಗಿತ್ತು. ಇದರಿಂದ ಬೇಸತ್ತ ಗದಿಗೆಯ್ಯನವರು ಪತ್ರಿಕೆಯ ಪ್ರಕಟಣೆಯನ್ನು ಪೂರ್ಣ ನಿಲ್ಲಿಸಿ 'ವಾಗ್ದೇವಿ' ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದರು' ಎಂದು ನಾ. ಅ. ಹೊಸಕೇರಿ ಹೇಳಿದ್ದಾರೆ.

'ಚಂದ್ರೋದಯ' ಪತ್ರಿಕೆಯ ಕುರಿತು ತಮ್ಮ ಲೇಖನಗಳಲ್ಲಿ ಉಲ್ಲೇಖಿಸಿರುವ ಹಲವು ಮಂದಿ ಹಿರಿಯ ಬರಹಗಾರರು ಆ ಪತ್ರಿಕೆ ಮತ್ತು ಅದರ ಸಂಪಾದಕರ ಉಜ್ವಲ ರಾಷ್ಟ್ರೀಯ ಮನೋಭಾವದ ಕುರಿತು ಹೇಳಿದ್ದಾರೆ. ಹಿರಿಯ ಸಾಹಿತಿ ಡಾ. ಬೆಟಗೇರಿ ಕೃಷ್ಣ ಶರ್ಮ ಅವರು 'ಅವರಲ್ಲಿ (ಗದಿಗೆಯ್ಯನವರಲ್ಲಿ) ಯಾವಾಗಲೂ ರಾಷ್ಟ್ರೀಯ ಭಾವನೆ ಜಾಗೃತವಾಗಿರುತ್ತಿತ್ತು. ಅವರ ಪತ್ರಿಕೆ 'ಚಂದ್ರೋದಯ' ದಲ್ಲೂ ಅದು ಕಂಡು ಬರುತ್ತಿತ್ತು. ನಮ್ಮ ಬೆಟಗೇರಿ ಹಳ್ಳಿಗೂ ಆ ಪತ್ರಿಕೆ ಬರುತ್ತಿತ್ತು. ಗಡದಯ್ಯನವರು ಎಂಬ ವೈದ್ಯರೊಬ್ಬರು ಅದನ್ನು ತರಿಸುತ್ತಿದ್ದರು. ನಾನು ಅದನ್ನು ತಪ್ಪದೆ ಓದುತ್ತಿದ್ದೆ. ಲೋಕಮಾನ್ಯ ತಿಲಕರ ವಿಷಯವಾಗಿ, ವಿಚಾರವಾಗಿ ಪೂಜ್ಯಭಾವನೆ ಅವರ ಪತ್ರಿಕೆಯ ಅಂಕಣ ಅಂಕಣದಲ್ಲಿಯೂ ಪ್ರಕಟವಾಗುತ್ತಿದ್ದಿತ್ತು. ತುಂಬ ಉತ್ಸುಕತೆ ಹುಟ್ಟಿಸುವ ಪತ್ರಿಕೆಯದು' ಎಂದು ಬರೆದಿದ್ದಾರೆ.

ಸು. ಶಿ. ದೇಸಾಯಿಯವರು ಲೇಖನವೊಂದರಲ್ಲಿ ಉಲ್ಲೇಖಿಸಿರುವಂತೆ 'ರಾಯಟರ್ ಗಲ್ಲಿಯ ತಮ್ಮ ಮನೆಯಲ್ಲಿಯೇ ಪ್ರೆಸ್ ನಡೆಸುತ್ತಿದ್ದರು. ಅವರು ರಾಷ್ಟ್ರೀಯ ಪ್ರವೃತ್ತಿಯುಳ್ಳವರು. ರಾಜಕೀಯದ ಬಗ್ಗೆ ನಿರ್ಭೀತಿಯಿಂದ ಬರೆಯುತ್ತಿದ್ದರು'. ಅದೇ ರೀತಿ ಆರ್. ವಿ. ಜಠಾರ ಅವರು 'ಚಂದ್ರೋದಯ' ಪತ್ರಿಕೆಯ ಬಗ್ಗೆ ಉಲ್ಲೇಖಿಸುತ್ತ ' ಗದಿಗೆಯ್ಯನವರು ಸ್ವದೇಶಿ ಮತ್ತು ಸ್ವರಾಜ್ಯದ ಪ್ರಚಾರಕ್ಕಾಗಿ 'ಚಂದ್ರೋದಯ' ಎಂಬ ಹೆಸರಿನ ವಾರಪತ್ರಿಕೆಯನ್ನು ಅನೇಕ ವರ್ಷಗಳ ವರೆಗೆ ನಡೆಸಿದ್ದರು. ಅವರ ಬರಹಗಳು ಸಮರ್ಪಕ ಮತ್ತು ವಿಚಾರ ಪರಿಪ್ಲುತವಿರುತ್ತಿದ್ದವು. ಅವರು ಯಾರ ಮೇಲೆಯಾದರೂ ಟೀಕೆ ಮಾಡಬೇಕಿದ್ದರೆ ಅದು ನಿಷ್ಠುರವಾದರೂ ಮನಸು ನೋಯಿಸಬಾರದೆಂಬುದರ ಕಡೆಗೆ ದಕ್ಷತೆಯನ್ನು ತೆಗೆದುಕೊಳ್ಳುತ್ತಿದ್ದರು. ಹೋಮರೂಲ ಆಂದೋಲನದ ಬಗ್ಗೆಯಾಗಲಿ ಅಥವಾ ತಿಲಕರು ಲೋಕಶಾಹಿ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದ ಕೌನ್ಸಿಲ್ ಪ್ರವೇಶದ ಚಳವಳಿಯ ಬಗ್ಗೆಯಾಗಲಿ ತಮ್ಮ ಪತ್ರಿಕೆಗಳಲ್ಲಿ ವಿದ್ವತ್‌ಪ್ರಚುರ ಲೇಖನಗಳನ್ನು ಬರೆಯುತ್ತಿದ್ದರು'.

ಗದಿಗೆಯ್ಯನವರ ಪತ್ರಿಕೋದ್ಯಮ ಪ್ರೀತಿಯ ಕುರಿತು ಎನ್. ಆರ್. ಕೊಪ್ಪೀಕರ್ ಹೇಳಿರುವಂತೆ ಚಂದ್ರೋದಯ ಪತ್ರಿಕೆಗಾಗಿ ಅವರು ತಮ್ಮ ಹೆಚ್ಚು ವೇಳೆಯನ್ನು ವ್ಯಯಿಸಿ ಶ್ರಮಿಸುತ್ತಿದ್ದರು. ಆ ಕಾರಣಕ್ಕಾಗಿ ಅವರು ತಮ್ಮ ವಕೀಲಿ ವೃತ್ತಿಯನ್ನು ಸಹ ಬದಿಗೊತ್ತಿದರು". ಅದೇ ರೀತಿ "...ಹೊನ್ನಾಪುರಮಠರು ವಕೀಲರಿದ್ದರಲ್ಲದೆ ಪ್ರಸಿದ್ಧ ಬರಹಗರರೂ ಆಗಿದ್ದರು. ತಮ್ಮ ಮನೆಯ ಹಿಂಭಾಗದಲ್ಲೇ ಇರುವ ಚಂದ್ರೋದಯ ಮುದ್ರಣಾಲಯದಲ್ಲಿ ಅದೇ ಹೆಸರಿನ 'ಚಂದ್ರೋದಯ' ವಾರ ಪತ್ರಿಕೆಯನ್ನು ಮುದ್ರಿಸಿ ಪ್ರಸಿದ್ಧಿಸುತ್ತಿದ್ದರು. ನನ್ನ ಬಾಲ್ಯದಲ್ಲಿ ಅದು ಯಾವಾಗ ನಮ್ಮ ಮನೆಗೆ ಬಂದೀತೋ ಮತ್ತು ಅದನ್ನು ಓದಿಯೇ ಬಿಡುತ್ತೇನೆಯೋ ಎಂಬ ತವಕ ನನಗಿರುತ್ತಿತ್ತು. ನನ್ನ ಕನ್ನಡದ ಮೇಲಿನ ಈಗಿನ ಪ್ರಭುತ್ವಕ್ಕೆ ನನ್ನ ಚಿಕ್ಕಂದಿನಲ್ಲಿಯೇ 'ಚಂದ್ರೋದಯ' ವಾರಪತ್ರಿಕೆಯ ಲಕ್ಷ್ಯಪೂರ್ವಕ ವಾಚನವು ನಾಂದಿಯನ್ನು ಹಾಕಿಕೊಟ್ಟಿತು ಎಂದು ಹೇಳದಿರಲಾರೆನು" ಎಂದಿರುವುದು ಈ ಪತ್ರಿಕೆಯ ಜನಪ್ರಿಯತೆ ಮತ್ತು ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಅದು ವಹಿಸಿದ್ದ ಪಾತ್ರದ ಕುರಿತು ಸಾಕ್ಷಿ ನುಡಿಯುವಂತಿವೆ.

**'ಶಾಲ್ಮಲಾ ನದಿಯ ನೀರಿನ ದುರ್ದಶೆಯು'**

ಪರಿಸರ ಮಾಲಿನ್ಯ ಅದರಲ್ಲೂ ನೈಸರ್ಗಿಕ ನೀರಿನ ಮೂಲಗಳ ಮಾಲಿನ್ಯ ಇಂದಿನ ದಿನಮಾನಗಳಲ್ಲಿ ಒಂದು ಗಂಭೀರ ಹಾಗೂ ಬಹುಚರ್ಚಿತ ವಿಷಯ. ಸುದ್ದಿ ಮಾಧ್ಯಮಗಳಲ್ಲಿ ಕೂಡ ಆಗಾಗ ಈ ವಿಚಾರ ಚರ್ಚಿತವಾಗುವುದು ಇದೆ. ಚಂದ್ರೋದಯ ಪತ್ರಿಕೆ ಕೂಡ ಪರಿಸರ ಮಾಲಿನ್ಯ ಅದರಲ್ಲೂ ಮುಖ್ಯವಾಗಿ ನೈಸರ್ಗಿಕ ನೀರಿನ ಪ್ರಧಾನ ಮೂಲವಾದ ನದಿ, ತೊರೆಗಳ ಮಾಲಿನ್ಯದ ಕುರಿತು ಅಂದಿನ ಕಾಲದಲ್ಲಿಯೇ ಗಮನ ಸೆಳೆದಿರುವುದು ಆಶ್ಚರ್ಯಕರ ಸಂಗತಿ.

ಹುಬ್ಬಳ್ಳಿಯ ಜೀವನಾಡಿ ಎನಿಸಿದ್ದ ಶಾಲ್ಮಲಾ ನದಿಯ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಪ್ರಕಟವಾದ ಸುದ್ದಿಯೊಂದು ಈ ರೀತಿ ಇದೆ– "ಕಾರವಾರದ ಫಸ್ಟ್ ಕ್ಲಾಸ್ ಜಡ್ಜರಾದ ರಾ. ಬ. ಬಾಬಾಜಿ ರಾವ್ ಸಾವಂತ್ ಇವರು ಇಲ್ಲಿ ಇದ್ದಾಗ್ಯೆ ಶಾಲ್ಮಲಾ ನದಿಯ ಸುಧಾರಣಾತಿಗೂ, ಸ್ವಚ್ಛತೆಗೂ ತನು, ಮನ ಧನವನ್ನು ಕೂಡ...... (ಇಲ್ಲಿ ಅಕ್ಷರಗಳು ಮಾಸಿವೆ) ತೆಗೆದುಕೊಂಡು...... (ಇಲ್ಲಿ ಅಕ್ಷರಗಳು ಸ್ಪಷ್ಟವಿಲ್ಲ) ಮೇಲೆ ಹಬ್ಬುವಂತೆ ಮಾಡಿದರು. ಆದರೆ, ಅವರು ಈ ಶಹರವಾಸಿಗಳ ದುರ್ದೈವದಿಂದ ಕಾರವಾರಕ್ಕೆ ವರ್ಗಾಗಿ ಹೋಗಲು ಶಾಲ್ಮಲಾ ನದಿಯ ಕಡೆಗೆ ತಕ್ಕ ಲಕ್ಷ ಮಾಡುವವರು ಯಾರೂ ಇಲ್ಲದಂತೆಯಾದ್ದರಿಂದ ಬಟ್ಟೆ ತೊಳೆಯುವ ಅಗಸರು ಮೊದಲಾದವರು ಇಂಥ ನಿರ್ಮಳ ನೀರನ್ನು ಕಲ್ಮಶ ಮಾಡಿ ಬಿಡುತ್ತಿರುವರು. ನೇಕಾರರು ಸಹಾ ಒಮ್ಮೊಮ್ಮೆ ಬಂದು ತಮ್ಮ ಹೊಂಬಣ್ಣದ ರೇಶ್ಮೆಯನ್ನು ತೊಳೆಯುತ್ತಿರುವರು ಅಂದರೂ ಯಾರೂ ಕೇಳುವುದಿಲ್ಲ. ನಮ್ಮ ರಾ. ಬ. ರು ಇಲ್ಲಿ ಇದ್ದಾಗ್ಯೂ ನೀರಿನೊಳಗೆ ಕಾಲು ಇಟ್ಟು ತೊಳೆದುಕೊಳ್ಳುವುದು ಕೂಡ ಕಠಿಣವಾಗಿತ್ತು. ಈ ಶಾಲ್ಮಲಾ ಕಾಮಗಾರಿಯು ಈಗ ನಮ್ಮ ರಾ. ಶಾ. ಶಿವರಾಮ ಪರಮೇಶ್ವರ್‌ರ ಕೈಯಲ್ಲಿ ಇದ್ದು ಇವರು ಈ ಪ್ರಕಾರ ದುರ್ಲಕ್ಷ ಮಾಡುವುದು ಕಂಡು ನಮಗೆ ಸಖೇದಾಶ್ಚರ್ಯವಾಗುತ್ತದೆ. ಇನ್ನು ಮೇಲಾದರೂ ನಮ್ಮ ಮಾಮಲೇದಾರ ಸಾಹೇಬರು ಶಾಲ್ಮಲಾ ನದಿಯ ಕಡೆಗೆ ಯೋಗ್ಯ ಕಾಳಜಿ ತೆಗೆದುಕೊಳ್ಳಬೇಕಂತ ನಮ್ಮ ಸೂಚನೆಯಿದೆ"

ಪರಿಸರ ಮಾಲಿನ್ಯ ಎಂಬ ಪರಿಕಲ್ಪನೆಯೇ ಸಮಾಜದಲ್ಲಿ ಸ್ಪಷ್ಟವಾಗಿ ಇರದಿದ್ದ ಕಾಲದಲ್ಲಿ ಕನ್ನಡ ಪತ್ರಿಕೆಯೊಂದು ಈ ಕುರಿತು ಎಚ್ಚರಿಸಿರುವುದು ಸೋಜಿಗವೇ ಸರಿ. ■


Downloaded From:www.kpscvaani.com

# ಮಾನವತಾವಾದಿ ಸಿದ್ಧಾಂತ ಪ್ರತಿಪಾದಕರು ರಾಷ್ಟ್ರಕವಿ ಕುವೆಂಪು

ಲಕ್ಷ್ಮೀಕಾಂತರಾಜು ಎಂ ಜಿ



ಡಿಸೆಂಬರ್ 29 ವಿಶ್ವಮಾನವತಾ ದಿನ. ಅರ್ಥಾತ್ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ. ಕವಿ ಕೆ.ವಿ ಪುಟ್ಟಪ್ಪನವರ ಜನ್ಮದಿನವನ್ನು ರಾಜ್ಯ ಸರ್ಕಾರ ವಿಶ್ವ ಮಾನವತಾ ದಿನವನ್ನಾಗಿ ಸರ್ಕಾರಿ ಕಛೇರಿಗಳಲ್ಲಿ ಆಚರಿಸಲು ಕ್ರಮಕೈಗೊಂಡಿದೆ ಎಂದರೆ, ಕುವೆಂಪು ಅವರಲ್ಲಿದ್ದ ಜಾತ್ಯಾತೀತ ಆಚರಣೆ ಹಾಗೂ ಮಾನವತಾ ವಾದಿಯ ಸಿದ್ಧಾಂತಗಳು ಮತ್ತು ವೈಚಾರಿಕತೆ.

1904 ಡಿಸೆಂಬರ್ 29 ರಂದು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರೇಕೂಡಿಗೆಯಲ್ಲಿ ಅವರ ತಾಯಿ ಮನೆಯಲ್ಲಿ ಜನಿಸಿದ ಪುಟ್ಟಪ್ಪನವರದು ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿ. ಕುವೆಂಪು ತೀರ್ಥಹಳ್ಳಿಯವರಾದ್ರೂ ಅವರನ್ನು ಹೆಚ್ಚೆಚ್ಚು ಗುರ್ತಿಸಿದ್ದು, ಅಧ್ಯಯನ ಮಾಡಿದ್ದು, ಸೇವೆ ಸಲ್ಲಿಸಿದ್ದು ಮೈಸೂರಿನಲ್ಲಿ. ಈ ಕಾರಣಕ್ಕಾಗಿಯೇ ಕನ್ನಡ ಚಲನಚಿತ್ರವೊಂದರ ಗೀತೆಯಲ್ಲಿ "ತೀರ್ಥಹಳ್ಳೀಲೇ ಕುವೆಂಪು ಹುಟ್ಟಿದ್ರು... ವಿಶ್ವ ಪ್ರೇಮಾನ ಮೈಸೂರಿಗೆ ತಂದು ಕೊಟ್ಟರು" ಎಂಬ ಚರಣವಿದೆ.

**ಜಾತ್ಯತೀತ ಆಚರಣೆ ಹಾಗೂ ಮಾನವತಾವಾದಿ ಸಿದ್ಧಾಂತ ಪ್ರತಿಪಾದಿಸಿದ ರಾಷ್ಟ್ರಕವಿ ಕುವೆಂಪು ಅವರ ಸಂದೇಶಗಳು ಈ ದಿನಗಳಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಜೀವಂತವಾಗಿವೆ.**






Downloaded From:www.kpscvaani.com

ಕುವೆಂಪು ಕನ್ನಡ ಸಾಹಿತ್ಯ ಲೋಕದ ದೈತ್ಯ ಪ್ರತಿಭೆ. ಕನ್ನಡ ಸಾಹಿತ್ಯದ ಮೇಲಿನ ಇವರ ಪ್ರಭಾವ ದೊಡ್ಡದು. ಅಕ್ಷರಸ್ಥರಿಗೂ ಅನಕ್ಷರಸ್ಥರಿಗೂ ತಮ್ಮ ಕಾಲೇಜು ದಿನಗಳಲ್ಲಿ ಕುವೆಂಪು ಹೊರತಂದ ಮೊದಲ ಆಂಗ್ಲ ಕವಿತೆಗಳ ಕವನ ಸಂಕಲನ 'ದ ಬಿಗನರ್ಸ್ ಮ್ಯೂಸ್' ನಿಂದ ಹಿಡಿದು ಜ್ಞಾನಪೀಠಕ್ಕೆ ಪುರಸ್ಕೃತವಾದ ರಾಮಾಯಣ ದರ್ಶನಂ ಎಂಬ ಮಹಾ ಕಾವ್ಯದವರೆಗೂ ಇವರದ್ದು ವಿಭಿನ್ನ ಬಗೆಯ ಸಾಹಿತ್ಯ ಸಂಭ್ರಮ.

ಕುವೆಂಪು ಅವರು ಕೇವಲ ಕನ್ನಡ ಸಾಹಿತ್ಯ ಕೃಷಿ ಮಾತ್ರ ಮಾಡದೇ ಜನರಿಗೆ ಸಂದೇಶಗಳನ್ನೂ ಕೊಡುತ್ತಾ ಹೋದರು. ಜನರಲ್ಲಿ ವೈಚಾರಿಕತೆ ಪ್ರಜ್ಞೆ ಮೂಡಿಸಿದವರು. ಗುಡಿ, ಮಸೀದಿ, ಚರ್ಚುಗಳಿಂದ ಹೊರಬನ್ನಿ ಎಂಬ ಕರೆಯನ್ನೂ ನೀಡಿದರು. ಮೌಢ್ಯಗಳಿಂದ ದೂರವಿರಬೇಕು. ಯಾರ ಅಂಕುಶದಲ್ಲಿಯೂ ಜೀವಿಸದೇ ಸ್ವತಂತ್ರ್ಯದ ಬದುಕು ನಿಮ್ಮದಾಗಬೇಕೆಂದು ಯುವಕರಿಗೆ ಸಂದೇಶ ನೀಡಿದ್ದರು.

ಸರ್ಕಾರದ ಕಾರ್ಯಕ್ರಮಗಳ ಆರಂಭದಲ್ಲಿ ರೈತಗೀತೆ, ನಾಡಗೀತೆ ಕೇಳಿಸಲಾಗುತ್ತಿದೆ. ಈ ಎರಡು ಕವನಗಳ ಕರ್ತೃ ಕುವೆಂಪು. ಈ ಮೂಲಕ ಸರ್ಕಾರಗಳ ಅಧಿಕೃತ ಕಾರ್ಯಕ್ರಮಗಳಲ್ಲಿ ಇಂದಿಗೂ ವಿಜೃಂಭಿಸುತ್ತಿದ್ದಾರೆ. ಇಷ್ಟು ಮಾತ್ರವಲ್ಲ, ಕುವೆಂಪು ಅವರ ಕೃತಿ, ಕವನ, ನಾಟಕ, ಕಾದಂಬರಿ, ಆತ್ಮಕತೆಗಳಲ್ಲಿನ ಸಾಮಾಜಿಕ ಸಂದೇಶಗಳು, ಇಂದಿನ ದಿನಗಳಲ್ಲೂ ಸಾಮಾಜಿಕ ಮಾಧ್ಯಮಗಳಲ್ಲಿ ಹೆಚ್ಚೆಚ್ಚು ಪ್ರಚಲಿತವಾಗಿ ಜನರ ಮೆಚ್ಚುಗೆ ಪಡೆದಿರುವುದು ಅವರ ಸಂದೇಶಗಳಲ್ಲಿನ ನೈಜತೆ, ವಾಸ್ತವತೆ, ಸಾಮಾಜಿಕ ಜವಾಬ್ದಾರಿಯನ್ನು ಪ್ರದರ್ಶಿಸುತ್ತಿವೆ. ಈ ಮೂಲಕ ಕುವೆಂಪು ಸಂದೇಶಗಳು ಇಂದಿಗೂ ಜೀವಂತವಾಗಿದೆ.

ಮಂತ್ರ ಮಾಂಗಲ್ಯವೆಂಬ ಪುರೋಹಿತ ರಹಿತ ಸರಳ ವಿವಾಹದ ಪ್ರತಿಪಾದಕರು ಇವರು. ಪುರೋಹಿತ ರಹಿತವಾಗಿ, ಸರಳವಾಗಿ ಮದುವೆಯಾಗಬೇಕು. ವಧು-ವರನ ಒಪ್ಪಿಗೆಯ ಮೇಲೆ ವಿವಾಹ ಸಮಾನತೆಯಿಂದ ಕೂಡಿರಬೇಕು ಎಂಬ ಸಂದೇಶ ಕುವೆಂಪು ಅವರದ್ದಾಗಿತ್ತು. ತಮ್ಮ ಮಕ್ಕಳ ಮದುವೆಗಳನ್ನೂ ಮಂತ್ರಮಾಂಗಲ್ಯದ ನೆಲೆಯಲ್ಲಿಯೇ ಮದುವೆ ಮಾಡುವ ಮೂಲಕ ತಮ್ಮ ಸಿದ್ಧಾಂತಗಳಿಗೆ ಮಾದರಿಯಾಗಿದ್ದರು.



ಕುವೆಂಪು ಅವರ ಮಂತ್ರ ಮಾಂಗಲ್ಯ ಇಂದು ಹೆಚ್ಚು ಪ್ರಸಿದ್ಧಿಯಾಗಿದೆ. ಅನೇಕ ನಾಗರಿಕ ಯುವಕ, ಯುವತಿಯರು ಮಂತ್ರ ಮಾಂಗಲ್ಯದ ನೆಲೆಯಲ್ಲಿಯೇ ವಿವಾಹವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಕನ್ನಡ ಸಾಹಿತ್ಯಕ್ಕೆ ಕೊಟ್ಟ ಸೇವೆಯನ್ನು ಕನ್ನಡ ಭಾಷೆಗೂ ತಮ್ಮ ಪ್ರೇಮವನ್ನು ವಿಸ್ತರಿಸಿಕೊಂಡರು. ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು, ಕನ್ನಡಕ್ಕಾಗಿ ಹೋರಾಡು ಕನ್ನಡದ ಕಂದ ಎಂದು ಕನ್ನಡ ಪ್ರೇಮವನ್ನು ಮೆರೆದರು. ಕನ್ನಡದ ವಿಷಯದಲ್ಲಿ ನಾನು ಯುದ್ಧದಲ್ಲಿ ಬಳಸುವ ಟ್ಯಾಂಕರಿನಂತೆ. ಯಾರಾದರೂ ಎದುರು ಬಂದಿರೋ ಅಪ್ಪಚ್ಚಿಯಾಗುತ್ತೀರಿ ಎಂದರು. ಇವರ ರಾಮಾಯಣ ದರ್ಶನಂ ಕಾವ್ಯಕ್ಕೆ ಜ್ಞಾನಪೀಠ ದೊರೆತದ್ದು ಇವರ ಸಾಧನೆಯಾದರೆ, ಕನ್ನಡಕ್ಕೆ ಮೊದಲ ಜ್ಞಾನಪೀಠ ದೊರಕಿದ್ದು ಈ ಕಾವ್ಯದಿಂದ ಎಂಬ ಹೆಮ್ಮೆ ಕನ್ನಡ ಭಾಷೆಗೆ ಹೆಮ್ಮೆಯ ಸಂಗತಿಯೂ ಆಗಿದೆ.

ಕುವೆಂಪುರವರಿಗಿಂತ ಚೆನ್ನಾಗಿ ಬರೆದ ಕವಿಗಳಿರಬಹುದು, ಕತೆಗಾರರಿರಬಹುದು ಆದರೆ ಕುವೆಂಪು ಅವರನ್ನು ಮೀರಿಸುವ ಪ್ರತಿಭೆಯ ವ್ಯಕ್ತಿ ಮತ್ತು ಗುರು ಇನ್ನೊಬ್ಬರಿಲ್ಲ. ಸುತ್ತಣ ಜಗತ್ತು ಎಚ್ಚರವೇ ಇಲ್ಲದೆ, ಮೌಢ್ಯವನ್ನು ತೊಲಗಿಸುವ ಛಲವಿಲ್ಲದೆ ಸತ್ತ ಸ್ಥಿತಿಯಲ್ಲಿದ್ದಾಗ ಕುವೆಂಪು ಸೂಕ್ಷ್ಮವಾಗಿ ವ್ಯಂಗ್ಯ, ಕೋಪ, ಪ್ರೀತಿ ಮತ್ತು ನೋವಿನಿಂದ ಬರೆಯುತ್ತಾರೆ. ಅವರ ಭಾವಗೀತೆಗಳಲ್ಲಿ ಸಂಕೀರ್ಣತೆ, ಉನ್ಮಾದ ನಿರೀಕ್ಷಿಸಿದವರಿಗೆ ಎದುರಾಗುವುದು ಅವರ ಮುಗ್ಧತೆ ಮತ್ತು ಸರಳತೆ. "ಟುವ್ವಿ ಟುವ್ವಿ" ಎಂದು ಹಾಡುವ ಹಕ್ಕಿಯನ್ನು ಧ್ಯಾನಿಸಿದರೆ ಇದು ತಿಳಿಯುತ್ತದೆ ಎಂದು ಪತ್ರಕರ್ತ, ಸಾಹಿತಿ ಪಿ. ಲಂಕೇಶ್ ಕುವೆಂಪು ಅವರನ್ನು ಕುರಿತು ಹೇಳಿದ್ದಾರೆ.

**ನಿರಂಕುಶ ಮತಿಗಳಾಗಿ:**

ನಿರಂಕುಶಮತಿಗಳಾಗಬೇಕಾದರೆ ದಾಸ್ಯ ಬುದ್ಧಿ ತೊಲಗಬೇಕು. ದಾಸ್ಯ ಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು.

ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶ ಮತಿ. ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತೀಯ ದೆಸೆಯಿಂದಲೇ ಪ್ರಾಣಿ ಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ ಎನ್ನುವ ಕವಿ ಕುವೆಂಪು ಅವರ ಆಶಯ ಮತ್ತು ಸಂದೇಶ ವಾಸ್ತವ ಜೀವನಕ್ಕೆ ಹತ್ತಿರವಾದದ್ದು ಎಂಬುದು ಕುವೆಂಪು ಅವರ ಸಂದೇಶವಾಗಿದೆ.

ನಿರಂಕುಶ ಮತಿಗಳಾಗಿ ಎಂದು ಶ್ರೀರಂಗಪಟ್ಟಣದ ಕಾರ್ಯಕ್ರಮವೊಂದರಲ್ಲಿ ಭಾಷಣದ ಮೂಲಕ ಕುವೆಂಪು ಅವರು ಕರೆಕೊಟ್ಟಾಗ ಅದೊಂದು ವಿವಾದವೇ ಆಗಿತ್ತು. ಇವರ ಈ ಭಾಷಣದ ಕುರಿತು ತನಿಖೆ ಮಾಡಿಸಿ ವರದಿ ಕೊಡಲು ಸಹ ಏರ್ಪಾಟು ಮಾಡಿದ್ದರೆಂದರೆ ಕುವೆಂಪು ಅವರ ನಿರಂಕುಶ ಮತಿಗಳಾಗಿ ಎನ್ನುವ ಕುವೆಂಪು ಅವರ ಸಂದೇಶ ಹಲವರ ನಿದ್ದೆಗೆಡಿಸಿತ್ತು ಎಂಬುದನ್ನು ನಾವು ಮನಗಾಣಬಹುದು.

ಯುಗದ ಕವಿ, ಜಗದ ಕವಿ ಎಂದು ಕನ್ನಡ ಸಾಹಿತ್ಯ ಕ್ಷೇತ್ರದ ಮತ್ತೊಂದು ಪ್ರತಿಭೆ ದ.ರಾ ಬೇಂದ್ರೆಯವರು ಕುವೆಂಪು ಅವರನ್ನು ಕುರಿತು ಹೇಳಿದ್ದಾರೆ. ಕುವೆಂಪು ಅವರ ಕಥೆ, ಕವನ, ಕಾದಂಬರಿ ಎಲ್ಲವೂ ಓದುವಿಕೆಗೆ, ಜ್ಞಾನಾರ್ಜನೆಗೆ ಮೀಸಲಾದರೂ ಅವರ ವೈಚಾರಿಕತೆ, ಮೌಢ್ಯದ ವಿರುದ್ಧದ ನಿಲುವು, ಪುರೋಹಿತಶಾಹಿ ವಿರುದ್ಧದ ನಿಲುವುಗಳು ಮತ್ತು ಮಂತ್ರ ಮಾಂಗಲ್ಯದ ಸೂತ್ರಗಳು ಸರ್ವಕಾಲಿಕ ಎಂದರೆ ತಪ್ಪಾಗಲಾರದು. ■



Downloaded From:www.kpscvaani.com





ಡಾ. ಅನ್ವಯ್ ಬಿ.ಎಸ್
(ಕನ್ನಡಕ್ಕೆ : ವೆಂಕಟೇಶ ಪ್ರಸಾದ್ ಬಿ.ಎಸ್)

# ಝೀಕಾ ವೈರಾಣು

## ಸೋಂಕಿನ ಬಗ್ಗೆ ತಿಳಿದಿರಬೇಕಾದ ವಿಷಯಗಳು

**ಚಿ**ಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿದ್ದ ಸೊಳ್ಳೆಯ ಮಾದರಿಯಲ್ಲಿ ಇತ್ತೀಚೆಗೆ ಝೀಕಾ ವೈರಾಣು ಪತ್ತೆಯಾದ ಮೇಲೆ ಅದು ಎಲ್ಲೆಡೆ ದೊಡ್ಡ ಸುದ್ದಿಯಾಗಿದೆ. ಇದು ಬಹುತೇಕರಿಗೆ ತಮ್ಮ ಆರೋಗ್ಯ ಸುರಕ್ಷತೆಯ ಬಗ್ಗೆ ಚಿಂತೆ ತಂದೊಡ್ಡಿದೆ. ಈ ವೈರಾಣುವಿನ ಬಗ್ಗೆ ಸ್ವಲ್ಪ ಅವಲೋಕಿಸಬೇಕಾದ ಸಂದರ್ಭವನ್ನು ಇದು ಉಂಟು ಮಾಡಿದೆ. ಹಾಗಾಗಿ ಈ ವೈರಾಣು ಸೋಂಕಿನಿಂದ ದೇಹದ ಮೇಲೆ ಆಗುವ ಪರಿಣಾಮವೇನು, ಈ ಸೋಂಕನ್ನು ಹೇಗೆ ತಡೆಗಟ್ಟಬೇಕು, ಮುಂತಾದ ಜನಸಾಮಾನ್ಯರ ಪ್ರಶ್ನೆಗಳಿಗೆ ಈ ಲೇಖನದ ಮೂಲಕ ಉತ್ತರವನ್ನು ನೀಡಲಾಗಿದೆ.

**ಝೀಕಾ ವೈರಾಣು ಎಂದರೇನು?**

ಇದು ಸೊಳ್ಳೆಗಳಿಂದ ಹರಡುವ ವೈರಾಣುವಾಗಿದೆ. ಮೊತ್ತಮೊದಲ ಬಾರಿಗೆ ಉಗಾಂಡಾದಲ್ಲಿ 1947ರಲ್ಲಿ ಕೋತಿಯಲ್ಲಿ (ಕೋತಿಯ ಒಂದು ಪ್ರಭೇದವಾದ ರೀಸಸ್ ಕೋತಿಯಲ್ಲಿ) ಇದು ಕಾಣಿಸಿಕೊಂಡಿತು. ಆನಂತರ 1950ರ ದಶಕದಲ್ಲಿ ಆಫ್ರಿಕಾ ಖಂಡದ ಬೇರೆ ಬೇರೆ ದೇಶಗಳಲ್ಲಿ ಸೋಂಕಿನ ಮತ್ತು ಕಾಯಿಲೆಯ ಪ್ರಕರಣಗಳು ಕಂಡು ಬಂದವು. ಇತ್ತೀಚಿನ ಕೆಲವು ವರ್ಷಗಳಲ್ಲಿ, ಅಂದರೆ 2007 ರಿಂದ ಈಚೆಗೆ ಈ ವೈರಾಣು ಕಾಯಿಲೆಯು ಆಫ್ರಿಕಾ, ಅಮೆರಿಕ, ಏಷ್ಯಾ ಮತ್ತು ಪೆಸಿಫಿಕ್ ವಲಯಗಳಿಂದಲೂ ವರದಿಯಾಗುತ್ತಿದೆ.

**ಝೀಕಾ ವೈರಾಣು ಕಾಯಿಲೆಯು ಭೀತಿ ಉಂಟುಮಾಡಲು ಕಾರಣವೇನು?**

ಝೀಕಾ ವೈರಾಣು ಸೋಂಕಿಗೂ ಗೀಲನ್–ಬಾರ್ ಸಮೂಹ ವ್ಯಾಧಿಗೂ (ಗೀಲನ್–ಬಾರ್ ಸಿಂಡ್ರೋಮ್) ಸಂಬಂಧ ಇದೆ ಎಂಬುದು ಕಳೆದೊಂದು ದಶಕದಲ್ಲಿ ದೃಢಪಟ್ಟಿದೆ. ಹಾಗಾದರೆ, ಗೀಲನ್– ಬಾರ್ ಸಿಂಡ್ರೋಮ್ ಎಂದರೇನು ಎಂಬ ಪ್ರಶ್ನೆ ಉದ್ಭವವಾಗುತ್ತದೆ? ಹೌದು, ಹೀಗೆಂದರೆ ಇಂಗ್ಲಿಷ್ ವೈದ್ಯಕೀಯ


Downloaded From:www.kpscvaani.com

ಪರಿಭಾಷೆಯಲ್ಲಿ "ಅಕ್ಯೂಟ್-ಆನ್ಸೆಟ್ ಇಮ್ಯೂನ್-ಮಿಡಿಯೇಟೆಡ್ ಡೀಮೇಲಿನೇಟಿಂಗ್ ನ್ಯೂರೋಪಥಿ" ಎನ್ನಲಾಗುತ್ತದೆ. ಹೀಗೆಂದರೆ, ಕನ್ನಡದ ಸಾಮಾನ್ಯ ಭಾಷೆಯಲ್ಲಿ ಪಾರ್ಶ್ವವಾಯು (ಲಕ್ವ) ಎಂದರ್ಥ.

ಝೀಕಾ ವೈರಾಣು 2015ರಲ್ಲಿ ಬ್ರೆಜಿಲ್‌ನಲ್ಲಿ ದೊಡ್ಡಮಟ್ಟದ ಸಾಂಕ್ರಾಮಿಕಕ್ಕೆ ಕಾರಣವಾದಾಗ ಝೀಕಾ ವೈರಾಣು ಸೋಂಕಿಗೂ ಮತ್ತು ಮೈಕ್ರೋಸೆಫಲಿ (ನವಜಾತ ಶಿಶುಗಳಲ್ಲಿ ತಲೆಯ ಗಾತ್ರ ಸಣ್ಣದಿರುವುದು)ಗೂ ಸಂಬಂಧವಿರುವುದು ಕಂಡುಬಂದಿತು. ಅಲ್ಲದೇ, ಇದೇ ಸಂದರ್ಭದಲ್ಲಿ ಝೀಕಾ ವೈರಾಣುವಿಗೂ ಹಾಗೂ ನವಜಾತ ಶಿಶುಗಳಲ್ಲಿ ಹುಟ್ಟಿನಿಂದಲೇ ಕಂಡುಬರುವ ನ್ಯೂನತೆಗಳಿಗೂ (ಗರ್ಭದಲ್ಲಿರುವ ಭ್ರೂಣಗಳ ಮೇಲೆ ಉಂಟಾಗುವ ದುಷ್ಪರಿಣಾಮದಿಂದಾಗಿ) ಪರಸ್ಪರ ಸಂಬಂಧವಿರುವುದು ದೃಢಪಟ್ಟಿತು.

**ಇದರ ರೋಗಲಕ್ಷಣಗಳೇನು?**

ಝೀಕಾ ವೈರಾಣುವಿನಿಂದ ಸೋಂಕಿತರಾದ ಬಹುತೇಕರಲ್ಲಿ ಯಾವ ರೋಗಲಕ್ಷಣವೂ ಕಂಡುಬರುವುದಿಲ್ಲ. ಯಾರಿಗೆ ಈ ವೈರಾಣುವಿನ ಸೋಂಕು ತಗಲುತ್ತದೋ ಅವರಿಗೆ 3 ರಿಂದ 14 ದಿನಗಳಾದ ಮೇಲೆ ಸಣ್ಣ ಪ್ರಮಾಣದ ತುರಿಕೆ, ಜ್ವರ, ಕಂಜಕ್ಟಿವೈಟಿಸ್ (ಕಣ್ಣು ಕೆಂಪಗಾಗುವುದು), ಸ್ನಾಯು ಮತ್ತು ಕೀಲು ನೋವು, ಅಸೌಖ್ಯದ ಭಾವನೆ ಹಾಗೂ ತಲೆನೋವು ಕಾಣಿಸಿಕೊಳ್ಳುತ್ತದೆ. ಈ ರೋಗಲಕ್ಷಣಗಳು ಸಾಮಾನ್ಯವಾಗಿ 2 ರಿಂದ 7 ದಿನಗಳವರೆಗೆ ಇರುತ್ತದೆ.

ಈ ರೋಗಲಕ್ಷಣಗಳು ಹೆಚ್ಚು ಕಡಿಮೆ ಡೆಂಗಿ ಮತ್ತು ಚಿಕುನ್ ಗುನ್ಯಾದ ರೋಗಲಕ್ಷಣಗಳಂತೆಯೇ ಇರುತ್ತದೆ. ಹೀಗಾಗಿ ರೋಗ ದೃಢೀಕರಣಕ್ಕಾಗಿ ಪ್ರಯೋಗಾಲಯ ಫಲಿತಾಂಶದಿಂದ ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ.

**ಯಾವ ಕಾರಣಕ್ಕಾಗಿ ಈ ಕಾಯಿಲೆಯು ಅಪಾಯಕಾರಿ ಯಾಗಿದೆ?**

ಝೀಕಾ ವೈರಾಣು ಸೋಂಕು ಮಹಿಳೆಯರು ಗರ್ಭಧರಿಸಿದ ಅವಧಿಯಲ್ಲಿ ಹುಟ್ಟಲಿರುವ ಶಿಶುಗಳಲ್ಲಿ ಮೈಕ್ರೋಸೆಫಲಿ ಮತ್ತು ಇತರ ನ್ಯೂನತೆಗಳನ್ನು ಉಂಟುಮಾಡುತ್ತದೆ. ನವಜಾತ ಶಿಶುಗಳಲ್ಲಿ ಅಂಗಾಂಗಗಳ ಸಂಕುಚಿತನ, ಕಣ್ಣಿನ ಅಸಹಜತೆಗಳು ಮತ್ತು ಶ್ರವಣಶಕ್ತಿ ನಾಶಕ್ಕೆ ಎಡೆಮಾಡಿಕೊಡುತ್ತದೆ. ಈ ರೋಗಲಕ್ಷಣಗಳನ್ನು ಸಾಮೂಹಿಕವಾಗಿ "ಹುಟ್ಟಿನಿಂದಲೇ ಇರುವ ಝೀಕಾ ಸಮೂಹ ವ್ಯಾಧಿ" (ಅಭಿಜಾತ ಝೀಕಾ ಸಮೂಹ ವ್ಯಾಧಿ) ಎನ್ನಲಾಗುತ್ತದೆ.

ಇವುಗಳ ಜೊತೆಗೆ ಗೀಲನ್-ಬಾರ್ ಸಿಂಡ್ರೋಮ್, ನ್ಯೂರೋಪಥಿ ಮತ್ತು ಮೈಲಿಟಿಸ್ ಇವುಗಳನ್ನು ಈ ವೈರಾಣುವು ಅದರಲ್ಲೂ ವಯಸ್ಕರಿಗೆ ಮತ್ತು ಬಾಲ್ಯಾವಸ್ಥೆಯಲ್ಲಿರುವವರಿಗೆ ಹೆಚ್ಚಾಗಿ ತಂದೊಡ್ಡುತ್ತದೆ ಎಂಬುದನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು.

**ಯಾವ ನಮೂನೆಯ ಸೊಳ್ಳೆಯು ಈ ಸೋಂಕನ್ನು ಹರಡುತ್ತದೆ?**

ಸೋಂಕಿತವಾದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯು ಝೀಕಾ ವೈರಾಣುವನ್ನು ಹರಡುತ್ತದೆ. ಈ ಪ್ರಭೇದದ ಸೊಳ್ಳೆಯು ಸಾಮಾನ್ಯವಾಗಿ ಹಗಲಿನ ಅವಧಿಯಲ್ಲಿ ಕಚ್ಚುತ್ತದೆ. ಈ ಸೊಳ್ಳೆಯು ಡೆಂಗಿ, ಚಿಕುನ್‌ಗುನ್ಯಾ ಮತ್ತು ಹಳದಿ ಜ್ವರವನ್ನು ಕೂಡ ಹರಡುತ್ತದೆ.

ಗರ್ಭಧರಿಸಿದ ಅವಧಿಯಲ್ಲಿ ಇದು ತಾಯಿಯಿಂದ ಭ್ರೂಣಕ್ಕೂ ವರ್ಗಾವಣೆಯಾಗುತ್ತದೆ. ಲೈಂಗಿಕ ಸಂಪರ್ಕ, ವ್ಯಕ್ತಿಯ ದೇಹಕ್ಕೆ ರಕ್ತ ಅಥವಾ ರಕ್ತದ ಘಟಕಾಂಶಗಳನ್ನು ವರ್ಗಾಯಿಸುವಾಗ ಮತ್ತು ಅಂಗಾಂಗ ಕಸಿ ಸಂದರ್ಭದಲ್ಲಿಯೂ ಇದು ಹರಡುವ ಸಾಧ್ಯತೆ ಇರುತ್ತದೆ.

**ಈ ಕಾಯಿಲೆಗೆ ಚಿಕಿತ್ಸೆ ಏನು?**

ಇದಕ್ಕೆ ನಿರ್ದಿಷ್ಟವಾದ ಯಾವ ಚಿಕಿತ್ಸೆಯೂ ಇಲ್ಲ. ಹೆಚ್ಚು ವಿಶ್ರಾಂತಿ ತೆಗೆದುಕೊಳ್ಳಲು, ಹೆಚ್ಚೆಚ್ಚು ದ್ರವ ಪದಾರ್ಥವನ್ನು ಸೇವಿಸಬೇಕು ಮತ್ತು ರೋಗಲಕ್ಷಣಗಳನ್ನು ಶಮನಗೊಳಿಸುವುದಕ್ಕಾಗಿ ಆಂಟಿ ಪೈರೆಟಿಕ್ಸ್ ಹಾಗೂ ಅನಲ್ಜೆಸಿಕ್ಸ್ ಬಳಸಲು ವೈದ್ಯರು ಸಲಹೆ ನೀಡುತ್ತಾರೆ.

**ಈ ಕಾಯಿಲೆ ಬಾರದಂತೆ ತಡೆಗಟ್ಟಲು ಯಾವ ರೀತಿಯಲ್ಲಿ ಮುಂಜಾಗ್ರತೆ ವಹಿಸಬೇಕು?**

ಝೀಕಾ ವೈರಾಣು ಸೋಂಕು ಬಾರದಂತೆ ತಡೆಗಟ್ಟಲು ಅಥವಾ ವೈರಾಣು ಸೋಂಕು ಕಂಡುಬಂದ ಮೇಲೆ ಚಿಕಿತ್ಸೆ ನೀಡಲು ಯಾವ ಲಸಿಕೆಯೂ ಇದುವರೆಗೆ ಅಭಿವೃದ್ಧಿಗೊಂಡಿಲ್ಲ. ಹಗಲಿನ ಅವಧಿಯಲ್ಲಿ ಹಾಗೂ ಸಂಜೆ ಶುರುವಾಗುವ ಅವಧಿಯಲ್ಲಿ ಸೊಳ್ಳೆ ಕಚ್ಚದಂತೆ ಎಚ್ಚರಿಕೆ ವಹಿಸುವುದು ಈ ಸೋಂಕು ತಡೆಗಟ್ಟಲು ಅನುಸರಿಸಬೇಕಾದ ಮುಖ್ಯ ಕ್ರಮವಾಗಿರುತ್ತದೆ.

ಇನ್ನು ವೈಯಕ್ತಿಕ ಅರೈಕೆಯ ಭಾಗವಾಗಿ ಶರೀರ ಸಾಕಷ್ಟು ಮುಚ್ಚುವಂತೆ ತಿಳಿ ಬಣ್ಣದ ಬಟ್ಟೆ ಧರಿಸುವುದು, ಕಿಟಕಿಗಳನ್ನು ಪರದೆಯಿಂದ ಮುಚ್ಚುವುದು, ಬಾಗಿಲುಗಳು ಮತ್ತು ಕಿಟಕಿಗಳನ್ನು ಸೊಳ್ಳೆಗಳು ಬಾರದಂತೆ ಮುಚ್ಚುವುದು, ತ್ವಚೆಗೆ ಕ್ರಿಮಿ ನಿರೋಧಕ (ಇನ್ಸೆಕ್ಟ್ ರೆಪಲೆಂಟ್) ಹಚ್ಚಿಕೊಳ್ಳುವುದು ಅಥವಾ ಕ್ರಿಮಿನಿರೋಧಕಗಳಾದ DEET, IR3535 or icaridin ಇರುವ ಉಡುಪು ಬಳಸುವುದು ಇಂತಹ ಕ್ರಮಗಳನ್ನು ಅನುಸರಿಸಬಹುದು.

ಚಿಕ್ಕ ಮಕ್ಕಳು ಮತ್ತು ಗರ್ಭಧರಿಸಿದ ಮಹಿಳೆಯರು ಕಡ್ಡಾಯವಾಗಿ ಸೊಳ್ಳೆ ಪರದೆ ಕಟ್ಟಿಕೊಂಡೇ ಮಲಗಬೇಕು. ನೀರು ಸಂಗ್ರಹವಾಗುವ ಸ್ಥಳಗಳ ಬಗ್ಗೆ ನಿಗಾವಹಿಸಿ ಅಂತಹ ಜಾಗಗಳಲ್ಲಿ ಸೊಳ್ಳೆ ಸಂತತಿ ಬೆಳೆಯದಂತೆ ತಡೆಯೊಡ್ಡಬೇಕು.

ನಿಂತ ನೀರನ್ನು ತೆಗೆದು ಹಾಕುವುದು, ಕಸದ ರಾಶಿ ಒಟ್ಟು ಬೀಳದಂತೆ ಎಚ್ಚರಿಕೆ ವಹಿಸುವುದು ಮತ್ತು ಬಳಕೆಯಾದ ಟೈರುಗಳನ್ನು ಪೇರಿಸಿ ಇಡದಿರುವುದು ಇಂತಹ ಎಚ್ಚರಿಕೆ ಕ್ರಮಗಳನ್ನು ವಹಿಸಬೇಕು. ಆರೋಗ್ಯ ಇಲಾಖೆಯವರು ಸೊಳ್ಳೆ ಸಂತತಿ ತಗ್ಗಿಸುವ ಜೊತೆಗೆ ರೋಗ ಹರಡುವುದನ್ನು ತಡೆಯಲು ಲಾರ್ವಿಸೈಡ್ ಮತ್ತು ಕ್ರಿಮಿ ನಾಶಕ ಬಳಸಲು ಸೂಚಿಸಬಹುದು.

ಈ ರೋಗವು ಲೈಂಗಿಕ ಸಂಪರ್ಕದ ಮೂಲಕವೂ ಹರಡಬಲ್ಲದು ಎಂಬ ಮಾಹಿತಿ ಜನರಿಗೆ ಗೊತ್ತಿರಬೇಕು. ಇದಕ್ಕಾಗಿ ಲೈಂಗಿಕ ಸಕ್ರಿಯ ಪುರುಷರು ಮತ್ತು ಮಹಿಳೆಯರಿಗೆ ಗರ್ಭನಿರೋಧಕಗಳ ಬಗ್ಗೆ ಅರಿವು ಮೂಡಿಸಲು ಸಮಾಲೋಚನೆಗಳನ್ನು ಏರ್ಪಡಿಸಬೇಕು.

ಒಟ್ಟಾರೆ ಹೇಳುವುದಾದರೆ ನಮ್ಮ ಸುತ್ತಮುತ್ತಲ ಜಾಗಗಳ ಸ್ವಚ್ಛತೆ ಹಾಗೂ ನೈರ್ಮಲ್ಯದ ಬಗ್ಗೆ ನಿಗಾವಹಿಸಿದರೆ ಝೀಕಾ ವೈರಾಣುವಿನ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಆದ್ದರಿಂದ ನಾವು ತುಂಬಾ ಆತಂಕ ಪಡುವುದನ್ನು ಬಿಟ್ಟು ಸೋಂಕು ಹರಡದಂತೆ ತಡೆಗಟ್ಟಲು ಏನೇನು ಮಾಡಬಹುದೋ ಅದನ್ನು ಕಾರ್ಯರೂಪಕ್ಕೆ ಇಳಿಸಲು ಮುಂದಾಗೋಣ. ■



Downloaded From:www.kpscvaani.com



# ಆತ್ಮಹತ್ಯೆಯು

## ಮನುಕುಲದ ನಷ್ಟ....

**ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಮನೋ ವೈದ್ಯಾಧಿಕಾರಿಯಾದ ಡಾ. ಹರ್ಷಿತಾ ವಿ. ಹೆಚ್ ಅವರು ಈ ಲೇಖನದಲ್ಲಿ ಆತ್ಮಹತ್ಯೆ ತಡೆಯುವ ಕುರಿತು ಅರಿವು ನೀಡಿದ್ದಾರೆ.**

ಡಾ. ಹರ್ಷಿತಾ ವಿ. ಹೆಚ್

ಆತ್ಮಹತ್ಯೆ ಎನ್ನುವುದು ಉದ್ದೇಶ ಪೂರ್ವಕವಾಗಿ ಒಬ್ಬರ ಸ್ವಂತ ಸಾವನ್ನು ಉಂಟುಮಾಡುವ ಕ್ರಿಯೆಯಾಗಿದೆ. ಒತ್ತಡ ಹೆಚ್ಚುತ್ತಿರುವ ಈ ಪ್ರಪಂಚದಲ್ಲಿ ಆತ್ಮಹತ್ಯೆಯ ಸಂಖ್ಯೆಯು ಜಾಸ್ತಿಯಾಗುತ್ತಿದೆ. ಅನೇಕ ಜನರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಇದು ಕೇವಲ ಆ ವ್ಯಕ್ತಿಯ ಕುಟುಂಬದ ನಷ್ಟವಲ್ಲ, ಇದು ಇಡೀ ಮನುಕುಲದ ನಷ್ಟವಾಗಿದೆ. ಆತ್ಮಹತ್ಯೆ ಎಂದರೇನು ಮತ್ತು ಅದರ ಪರಿಣಾಮಗಳು ಏನು ಎಂಬುದನ್ನು ಅರಿತರೆ ಕಂಡಿತಾ ಆತ್ಮಹತ್ಯೆ ಬಗ್ಗೆ ಯೋಚಿಸುವವರು ಅದರಿಂದ ಹೊರಬರಬಹುದು.

2021ರ ಎನ್. ಸಿ. ಆರ್. ಬಿ ವರದಿ ಪ್ರಕಾರ 1.64 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದರೆ. ಆತ್ಮಹತ್ಯೆ ಹೆಚ್ಚಾಗಿ ಹದಿ ಹರೆಯದ ವಯಸ್ಸಿನವರು, ವಯಸ್ಕರು, ಕೀಳರಿಮೆ ಉಳ್ಳವರು, ಮಾನಸಿಕ ಅಸ್ವಸ್ಥತೆ ಮತ್ತು ದೈಹಿಕ ಅಸ್ವಸ್ಥತೆಯಿಂದ ಬಳಲುತ್ತಿರುವವರು, ಒಂಟಿತನ, ನಿರುದ್ಯೋಗ ಸಮಸ್ಯೆ, ನಿರಂತರವಾದ ಕೌಟುಂಬಿಕ ಕಲಹಗಳಿಂದ ಬಳಲುತ್ತಿರುವವರಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ.

ಇದನ್ನು ತಡೆಗಟ್ಟಬೇಕಾದರೆ  ನಿಮ್ಮ ಆಪ್ತರ ಮನಸ್ಥಿತಿಯಲ್ಲಿ ಇದ್ದಕ್ಕಿದ್ದಂತೆ ಕಂಡುಬರುವ ಈ ವಿಧದ ಬದಲಾವಣೆಗಳನ್ನು ಗಮನಿಸಬೇಕು. ಒಬ್ಬರೇ ಇರಲು ಬಯಸುವುದು, ಅತಿಹೆಚ್ಚು ನಿದ್ದೆ ಅಥವಾ ಅತಿ ಕಡಿಮೆ ನಿದ್ದೆ ಮಾಡುವುದು, ಸಣ್ಣಪುಟ್ಟ ವಿಷಯಕ್ಕೆ ದುಃಖಿಸಿ ಕಣ್ಣೀರಿಡುವುದು, ಊಟದ ಬಗ್ಗೆ ನಿಗಾ ಇರದಿರುವುದು,


Downloaded From:www.kpscvaani.com



ಕೆಲವರಲ್ಲಿ ಏಕಾಗ್ರತೆ ಹೋಗುವುದು. ಕೆಲವೊಮ್ಮೆ ಅವರೇ ಸ್ವತಃ ತಮ್ಮ ಆತ್ಮಹತ್ಯೆ ಆಲೋಚನೆಗಳನ್ನು ವ್ಯಕ್ತಪಡಿಸಬಹುದು.

ಇಂತಹ ಲಕ್ಷಣಗಳು ಕಿನ್ನತೆ ಹೊಂದಿರುವವರಲ್ಲಿ ಕಾಣಿಸುತ್ತದೆ. ಮುಂದೆ ಇದೇ ಕಿನ್ನತೆಯೇ ಅವರನ್ನು ಆತ್ಮಹತ್ಯೆಗೆ ಪ್ರಚೋದನೆ ನೀಡುತ್ತದೆ. ಅಂತಹ ವ್ಯಕ್ತಿಗಳನ್ನು ಗುರುತಿಸಿ, ಅವರಿಗೆ ಸಹಾಯ ಹಸ್ತ ನೀಡಬೇಕು. ಪದೇ ಪದೇ ಸಾಯುವ ಆಲೋಚನೆಗಳು ಇವರಲ್ಲಿ ಬರುವುದು ಸಹಜ. ಒಂಟಿಯಾಗಿ ಇದ್ದಾಗ ಅವರು ಪ್ರಾಣ ತೆಗೆದುಕೊಳ್ಳುವ ಸಾಧ್ಯತೆ ಹೆಚ್ಚು. ಆದ್ದರಿಂದ ಪಾರಿವಾರದವರು ಇಂತಹವರೊಂದಿಗೆ ಹೆಚ್ಚು ಸಮಯ ಕಳೆಯಬೇಕು. ಅವರ ನೋವನ್ನು ಸೂಕ್ಷ್ಮವಾಗಿ ಆಲಿಸಿ, ಧೈರ್ಯ ತುಂಬಬೇಕು. ಅವರ ಹತ್ತಿರದಲ್ಲಿ ಯಾವುದೇ ಚೂಪಾದ ವಸ್ತುಗಳು, ಅನಗತ್ಯ ಔಷಧಗಳು ಇಲ್ಲದಿರುವಂತೆ ನೋಡಿಕೊಳ್ಳಬೇಕು. ಮನೋವೈದ್ಯರ ಬಳಿಗೆ ಕರೆದುಕೊಂಡು ಹೋಗಬೇಕು. ಮನೋವೈದ್ಯರು ಅನೇಕ ರೀತಿಯ ಚಿಕಿತ್ಸಾ ವಿಧಾನಗಳಿಂದ ಅಂದರೆ ಸಲಹೆ ನೀಡುವುದು, ವಿಷಯ ವಿಮರ್ಶೆಗಳಿಂದ, ಚರ್ಚೆ ಇತ್ಯಾದಿ ಮೂಲಕ, ಇಲ್ಲವಾದಲ್ಲಿ ಕೆಲವು ಮಾತ್ರೆಗಳನ್ನು ನೀಡಿ ಇಂತಹ ಮನಸ್ಥಿತಿಯಿಂದ ಹೊರಬರಲು ಸಹಾಯ ಮಾಡುತ್ತಾರೆ.



ಈ ಮನೋಭಾವವು ಮದ್ಯಪಾನವನ್ನು ಮಾಡುವವರಲ್ಲಿ ಹೆಚ್ಚಾಗಿ ಕಂಡುಬರುವುದು. ಇವು ಮಾನಸಿಕ ಅಸಾಮಾತೋಲನೆಯನ್ನು ಉಂಟುಮಾಡುತ್ತದೆ. ಮದ್ಯಪಾನ ಹಾಗೂ ಇತರ ಮಾದಕವಸ್ತುಗಳಿಂದ ದೂರವಿದ್ದಷ್ಟು ಉತ್ತಮ.

**ಆತ್ಮಹತ್ಯೆ ಮನೋಭಾವನೆಯನ್ನು ಹೀಗೆ ಎದುರಿಸಿ ನಿಲ್ಲುವುದು?**

ಪ್ರಾಣಹಾನಿ ಆಲೋಚನೆಗಳು ಅಲೆಅಲೆಯಂತೆ ಬರುತ್ತವೆ, ಅಲೆಯಂತೆ ಒಮ್ಮೆ ಹೆಚ್ಚಾಗಿ ಕ್ರಮೇಣ ಕಡಿಮೆಯಾಗುತ್ತದೆ. ಇಂತಹ ಆಲೋಚನೆಗಳು ಹೆಚ್ಚಾದಾಗ ಅನೇಕರು ಪ್ರಾಣಹಾನಿ ಮಾಡಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಪ್ರಾಣಹಾನಿ ಮಾಡಿಕೊಳ್ಳುವ ಬದಲಿಗೆ ಆಪ್ತರೊಡನೆ ದುಃಖ ಹಂಚಿಕೊಂಡರೆ ಮನಸು ಹಗುರವಾಗುತ್ತದೆ. ಹಳೆಯ ಒಳಿತುಗಳನ್ನು, ಸವಿನೆನಪುಗಳನ್ನು ನೆನಪಿಸುವ ಚಿತ್ರಪಟ್ಟಿಯನ್ನು ನೋಡುವುದು, ಸಹಾಯವಾಣಿಗೆ ಕರೆ ಮಾಡಿ ಸಲಹೆ ಪಡೆಯುವುದು, ಮನೋವೈದ್ಯರನ್ನು ಭೇಟಿ ಮಾಡುವುದು. ಸರಿಯಾದ ಸಮಯದಲ್ಲಿ ಸಿಗುವ ನೆರವಿನಿಂದ ಶಾಂತಿ, ನೆಮ್ಮದಿ, ವಿವೇಕ ಲಭಿಸುತ್ತದೆ ಹಾಗೂ ಪ್ರಾಣ ಉಳಿಯುತ್ತದೆ.

ಆತ್ಮಸ್ಥೈರ್ಯ, ಉತ್ತಮ ಸಮಸ್ಯೆ ನಿರ್ವಹಣ ಕೌಶಲ್ಯಗಳು, ಆಶಾ ಮನೋಭಾವ, ಆಧ್ಯಾತ್ಮಿಕ ಚಿಂತನೆಗಳು, ಉತ್ತಮ ದಿನಚರಿ, ಆರೋಗ್ಯದ ಬಗ್ಗೆ ಕಾಳಜಿ, ಸಮತೋಲನವಾದ ನಿದ್ರೆ, ಕೌಟುಂಬಿಕ ಅನ್ಯೋನ್ಯತೆ, ಧನಾತ್ಮಕ ಆಲೋಚನೆಗಳು ಪ್ರಾಣಹಾನಿ ಮನಸ್ಥಿತಿಯಿಂದ ದೂರವಿಡುತ್ತವೆ.

ಆತ್ಮಹತ್ಯೆಯು ವ್ಯಕ್ತಿ, ಕುಟುಂಬ, ಸಮಾಜ ಮತ್ತು ರಾಷ್ಟ್ರಮಟ್ಟದಲ್ಲಿ ಅನೇಕ ರೀತಿಯ ಕೆಟ್ಟಪರಿಣಾಮವನ್ನು ಉಂಟು ಮಾಡುತ್ತದೆ. ಒತ್ತಡದಿಂದ ಹೊರಬರುವ ಮಾರ್ಗಗಳನ್ನು ತರ್ಕಿಸಿ, ವಿಚಾರಿಸಿ ಮತ್ತು ಉತ್ತಮವಾದ ಸಮಸ್ಯೆ ಪರಿಹರಿಸುವ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು, ಪರಸ್ಪರ ಪ್ರೀತಿ, ವಿಶ್ವಾಸದಿಂದ ಇರುವುದು, ಆತ್ಮಹತ್ಯೆ ಮನೋಭಾವನೆಯಿಂದ ದೂರ ಇಡುತ್ತದೆ.

ಆತ್ಮಹತ್ಯೆಯನ್ನು ಕಡಿಮೆ ಮಾಡಲೆಂದೇ ರಾಷ್ಟ್ರಮಟ್ಟದಲ್ಲಿ ಅನೇಕ ಸಹಾಯವಾಣಿಗಳು 24 x 7 ಲಭ್ಯವಿರುತ್ತದೆ. ಮನೋವೈದ್ಯರು ಇಂತಹ ಕರೆಗಳಿಗೆ ಸ್ಪಂದಿಸಿ ತಮ್ಮ ನೆರವು ನೀಡುತ್ತಾರೆ. ಅಗತ್ಯವಿದ್ದಲ್ಲಿ ಯಾವ ಹಿಂಜರಿಕೆಯೂ ಇಲ್ಲದೆ ಕರೆ ಮಾಡಿ ನೆರವು ಪಡೆಯಬಹುದು.

ಸರಿಯಾದ ಸಮಯದಲ್ಲಿ ದೊರೆಯುವ ಸಹಾಯವು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ್ದವರ ಜೀವನದ ಹಾದಿಯನ್ನೇ ಬದಲಿಸುತ್ತದೆ. ಆದ್ದರಿಂದ ಪರಸ್ಪರ ಪ್ರೀತಿ, ವಿಶ್ವಾಸ, ಸಹಾನುಭೂತಿಯಿಂದ ಬಾಳುವ ಮೂಲಕ ಅತ್ಯಮೂಲ್ಯ ಜೀವನವನ್ನು ಸಾರ್ಥಕ ಜೀವನವನ್ನಾಗಿ ಮಾಡುವ ಪ್ರಯತ್ನ ಮಾಡೋಣ. ■


Downloaded From:www.kpscvaani.com



# ಸರ್ಕಾರದ ಕಾರ್ಯಕ್ರಮಗಳ ಯಶಸ್ಸಿಗೆ
# ಕ್ಷೇತ್ರಪ್ರಚಾರದ ಮಹತ್ವ

**ಎನ್. ರವಿಶಂಕರ್**

**ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಕಚೇರಿಯಲ್ಲಿ ವಿಶೇಷ ಕರ್ತವ್ಯಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಎನ್. ರವಿಶಂಕರ್ ಅವರು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಬೆಂಗಳೂರು ವಿಭಾಗೀಯ ಕಚೇರಿಯಲ್ಲಿ ಉಪ ಪ್ರಧಾನ ವ್ಯವಸ್ಥಾಪಕರಾಗಿ ಕೆಲಸ ಮಾಡುವಾಗ ನಡೆಸಲಾದ ವಿಸ್ತರಣಾ ಕಾರ್ಯಚಟುವಟಿಕೆಯ ಕುರಿತು ತಮ್ಮ ಅನುಭವವನ್ನು ಈ ಲೇಖನದಲ್ಲಿ ಹಂಚಿಕೊಂಡಿದ್ದಾರೆ.**

ಕ್ಷೇತ್ರಮಟ್ಟದಲ್ಲಿ ಸರ್ಕಾರಿ ಕಾರ್ಯಕ್ರಮಗಳ 'ಅರಿವು' ಮೂಡಬೇಕಾದಲ್ಲಿ, ಅದಕ್ಕೆ 'ವಿಸ್ತರಣೆ' (Extension work) ಕಾರ್ಯಕ್ಕೆ ಹೆಚ್ಚಿನ ಮಹತ್ವ ಇದೆ. ಕೃಷಿ ಇಲಾಖೆ ಹಾಗೂ ಕೃಷಿ ಮಾರಾಟ ಇಲಾಖೆಗಳೆರಡರಲ್ಲೂ ವಿಸ್ತರಣಾ ಘಟಕಗಳಿವೆ.

ತಜ್ಞರ ವೈಜ್ಞಾನಿಕ ಸಂಶೋಧನೆಗಳು ಹಾಗೂ ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ ಆಗಬೇಕಾದರೆ, 'ಕ್ಷೇತ್ರ ಪ್ರಚಾರ' ಕಾರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುವ ಅವಶ್ಯಕತೆ ಇದೆ. ರೈತರು ಹಾಗೂ ಅಧಿಕಾರಿಗಳು ಪರಸ್ಪರರ ಅವಶ್ಯಕತೆಗಳ ಬಗ್ಗೆ ತಿಳಿದುಕೊಳ್ಳುವುದು ಕೂಡಾ ಬಹು ಮುಖ್ಯ. ರೈತರಿಗೆ ಹಲವು ಬಾರಿ ಸರ್ಕಾರದ ಅನೇಕ ಕಾರ್ಯಕ್ರಮಗಳ ಬಗ್ಗೆ ಪೂರ್ಣ ತಿಳುವಳಿಕೆ ಸಿಗದಿರಬಹುದು. ಆ ಸಂದರ್ಭಗಳಲ್ಲಿ ವಿವಿಧ ಇಲಾಖೆಗಳಿಗೆ ಸೇರಿದ ಕ್ಷೇತ್ರಾಧಿಕಾರಿಗಳು ಒಂದೆಡೆ ಸೇರಿ ರೈತರಿಗೆ ಅವರವರ ಇಲಾಖಾ ಕಾರ್ಯಕ್ರಮಗಳ ಬಗ್ಗೆ ತಿಳುವಳಿಕೆ ನೀಡಿದಲ್ಲಿ, ಸರ್ಕಾರದ ಕಾರ್ಯಕ್ರಮಗಳಿಗೂ ಯಶಸ್ಸು ಸಿಗುತ್ತದೆ, ಜೊತೆಗೆ ರೈತರಿಗೂ ಸಹ ಅದರ ಪ್ರಯೋಜನ ಪೂರ್ಣ ಪ್ರಮಾಣದಲ್ಲಿ ಆಗುತ್ತದೆ.

ಕ್ಷೇತ್ರಮಟ್ಟದ ಅಧಿಕಾರಿಗಳು ಕ್ಷೇತ್ರ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಹಲವು ದಾರಿಗಳನ್ನು ಕಂಡುಕೊಳ್ಳುತ್ತಾರೆ. ಕ್ಷೇತ್ರಮಟ್ಟದ ಅಧಿಕಾರಿಗಳಿಗೆ, ಅವರು ಕೆಲಸ ಮಾಡುವ ಸರ್ಕಾರದ ಕಚೇರಿಗಳು ಇಂತದ್ದೇ ಕಾರ್ಯದ ಮೂಲಕ ಪ್ರಚಾರ ಕೈಗೊಳ್ಳುವುದು ಎಂದೇನೂ ಹೇಳಿರುವುದಿಲ್ಲ. ಈ ಪ್ರಚಾರ ಕಾರ್ಯಗಳು ಯಶಸ್ವಿಯಾಗಿ ಆಗಬೇಕಾದಲ್ಲಿ, ಆಯಾ ಕ್ಷೇತ್ರಾಧಿಕಾರಿಗಳ ವೈಯಕ್ತಿಕ ಶ್ರಮ/ಪ್ರಯತ್ನಗಳು ಬಹುತೇಕ ಕಾರಣವಾಗಿರುತ್ತವೆ.

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಬೆಂಗಳೂರು ವಿಭಾಗೀಯ ಕಚೇರಿಯಲ್ಲಿ ಉಪ ಪ್ರಧಾನ ವ್ಯವಸ್ಥಾಪಕರಾಗಿ ಕೆಲಸ ಮಾಡುವಾಗ ರೈತರಿಗೆ ಸರ್ಕಾರಿ ಕಾರ್ಯಕ್ರಮಗಳ ಅರಿವು ಮೂಡಿಸಲು ಹಲವು ಮಾರ್ಗಗಳನ್ನು ಕಂಡುಕೊಳ್ಳಲಾಗಿತ್ತು.

**ಶಾಲೆಗಳಲ್ಲಿ ಅರಿವು ಕಾರ್ಯ:**

ಕೃಷಿಯ ಬಗ್ಗೆ ಗ್ರಾಮೀಣ ಮಕ್ಕಳಲ್ಲಿ ಅರಿವು ಮೂಡಿಸುವುದರ ಮೂಲಕ, ಅವರಿಂದ ಅವರ ಹಿರಿಯರಿಗೂ ಸಹ ಮನವೊಲಿಕೆ ಮಾಡಲು ಸಾಧ್ಯ. ಹಾಗಾಗಿ ಗ್ರಾಮೀಣ ಭಾಗದ ಶಾಲೆಗಳಿಗೆ ಭೇಟಿ ನೀಡಿ 'ಕೃಷಿ' ಯ ಮಹತ್ವ ವಿವರಿಸಲಾಯಿತು.

ಕೃಷಿ, ಆರ್ಥಿಕ ಹಿಂಜರಿಕೆ (Economic recession) ಇಲ್ಲದ ಚಟುವಟಿಕೆ. ಜಿ.ಡಿ.ಪಿ. ಎಂದರೇನು?, ಅದಕ್ಕೆ ನಮ್ಮ ಕೃಷಿಯ ಕಾಣಿಕೆ ಏನು?, ಆಹಾರ ಭದ್ರತೆ ಮಹತ್ವ ಎಷ್ಟಿದೆ?, ಆರ್ಥಿಕತೆಯಲ್ಲಿ ಉತ್ಪಾದನೆ ಹಾಗೂ ಸೇವೆಗಳು ಎಂದು ಮಾಡಬಹುದಾದ ವರ್ಗೀಕರಣ (Economy = Production + Service Sector). ಅದಕ್ಕೆ, ಕೃಷಿಯ ಕಾಣಿಕೆ. ದುಡಿಮೆಗೆ ಹೇಗೆ ಆರ್ಥಿಕ ಪ್ರತಿಫಲ ಕಡಿಮೆ ಆಗುತ್ತಿದೆ?, ತನ್ಮೂಲಕ ಮಹತ್ವ ಕಡಿಮೆ ಆಗುತ್ತಿದೆ?, ದುಡಿಮೆಯನ್ನು ಗ್ರಾಹಕರಿಗೆ ಮುಟ್ಟಿಸುವ Service Sector ಜನಗಳು ಶ್ರಮಜೀವಿಗಳಿಗಿಂತಾ ಹೇಗೆ ಹೆಚ್ಚಿನ ಹಣ ಮಾಡಿಕೊಳ್ಳುತ್ತಿದ್ದಾರೆ?, ಈ ವ್ಯವಸ್ಥೆ ಬದಲಾವಣೆ ಆಗಬೇಕಾದರೆ ರೈತರು ಹೇಗೆ ಒಗ್ಗೂಡಬೇಕು? ಈ ದೃಷ್ಟಿಯಿಂದ ರೈತ ಉತ್ಪಾದಕ ಸಂಸ್ಥೆಗಳು ರೈತರಿಗೆ ಹೇಗೆ ಸಹಾಯ ಮಾಡಬಲ್ಲವು?, ಸಣ್ಣ



Downloaded From:www.kpscvaani.com



ಹಿಡುವಳಿದಾರರಿಂದ ನಮ್ಮ ಕೃಷಿಗೆ ಆಗಿರುವ ತೊಂದರೆಗಳೇನು?, ವಿದೇಶಗಳಲ್ಲಿ ಸಾಧ್ಯವಿರುವಂತೆ, ಇಲ್ಲಿ ಯಾಕೆ ಕೃಷಿ ಲಾಭದಾಯಕ ಆಗಿಲ್ಲ? ರೈತರ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ಸಿಗಲು ಏನು ಮಾಡಬೇಕು? ಬೆಂಬಲ ಬೆಲೆ ಎಂದರೆ ಏನು? ಕೃಷಿಯನ್ನು career ಆಗಿ ಆಯ್ದುಕೊಳ್ಳಲು ಇರುವ ಅವಕಾಶಗಳೇನು? ಇದರಿಂದ ಸ್ವಾವಲಂಬನೆಯ ಜೀವನ ಹೇಗೆ ಮಾಡಬಹುದು? ಮಿಶ್ರ ಬೆಳೆಗಳ ವ್ಯವಸಾಯ ಮಾಡಿ ಬದುಕು ಕಟ್ಟಿಕೊಂಡಿರುವ ಪ್ರಗತಿಪರ ರೈತರ ಯಶೋಗಾಥೆಗಳು.... ಈ ರೀತಿ ಹಲವಾರು ವಿಷಯಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುತಿತ್ತು. ಹಲವು ವೇಳೆ ಅವರಿಂದ ನಮಗೂ ಜ್ಞಾನ ಸಿಗುತ್ತಿತ್ತು.

**ನಮ್ಮ ಪ್ರಚಾರ ತಂಡ:**

ತೋಟಗಾರಿಕಾ ಇಲಾಖೆಯಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಕೆಲಸ ಮಾಡಿ ನಿವೃತ್ತರಾದ ಡಾ: ಹಿತ್ತಲಮನಿ ಅವರು ನಮ್ಮ ಕ್ಷೇತ್ರಮಟ್ಟ ತಂಡದ ಮುಖ್ಯ ಹಾಗೂ ಶಾಶ್ವತ ಸದಸ್ಯರು. ಆಗಾಗ, IIHR ಸಂಸ್ಥೆಯ ವಿಜ್ಞಾನಿ ಹಾಗೂ ಮಾವು ತಜ್ಞರಾದ ವೈ.ಟಿ.ಎನ್.ರೆಡ್ಡಿ ರವರು ಸಹ ಸೇರಿಕೊಳ್ಳುತ್ತಿದ್ದರು (ಬೆಂಗಳೂರು ಗ್ರಾಮಾಂತರದಲ್ಲಿ 'ಮಾವು' ಬೆಳೆಗೆ ಪ್ರಮುಖ ಸ್ಥಾನವಿದೆ). ಸಾಮಾನ್ಯವಾಗಿ 30 ರಿಂದ 50 ಜನ ರೈತರ ತಂಡಗಳಿಗೆ ನಾವು ಮಾಹಿತಿ ನೀಡುತ್ತಿದ್ದೆವು. ಬಹುತೇಕ, ಈ ರೀತಿಯ ಎರಡು ಕಾರ್ಯಕ್ರಮವನ್ನು ಒಂದು ದಿನ ಮಾಡುತ್ತಿದ್ದೆವು. ಇಂತಹ 120 ಕಾರ್ಯಕ್ರಮಗಳನ್ನು ವರ್ಷಕ್ಕೆ ಮಾಡುವ ಗುರಿ ನಮ್ಮ ವಿಸ್ತರಣಾ ವಿಭಾಗಕ್ಕೆ ನೀಡಲಾಗಿತ್ತು.

ಈ ಕಾರ್ಯಕ್ರಮಗಳನ್ನು ರೈತರ ಹೊಲ ಅಥವಾ ಆ ಗ್ರಾಮದ ದೇವಸ್ಥಾನದ ಚಾವಡಿ ಅಥವಾ ಶಾಲೆಯ ಆವರಣ ಅಥವಾ ರೈತ ಉತ್ಪಾದಕ ಸಂಘಗಳ ಕಚೇರಿಗಳು ಅಥವಾ ಅಂಗನವಾಡಿ ಕೇಂದ್ರಗಳು ಅಥವಾ ಯಾರದಾದರೂ ಮನೆಯ ಅಂಗಳ ಅಥವಾ ಕೆ.ವಿ.ಕೆ. (ಕೃಷಿ ವಿಜ್ಞಾನ ಕೇಂದ್ರಗಳು) ಧರ್ಮಸ್ಥಳ ಶ್ರೀಕ್ಷೇತ್ರ ಗ್ರಾಮ ಯೋಜನೆಯ ಕಾರ್ಯಕ್ರಮಗಳೊಂದಿಗೆ.... ಇತ್ಯಾದಿ ಕಡೆ ಮಾಡುತ್ತಿದ್ದೆವು.

ಕಾರ್ಯಕ್ರಮದ ಭಾಗವಾಗಿ ರೈತರ ತೋಟ/ಹೊಲಗಳಿಗೆ ಸಹ ಭೇಟಿ ನೀಡಿ, ಗಿಡ / ಬೆಳೆಗಳಿಗೆ ಅಗತ್ಯವಿರುವ ಪೋಷಕಾಂಶ, ಆಯಾ ಹೊಲಗಳ ಮಣ್ಣಿನಲ್ಲಿ ಬೆಳೆಯಬಹುದಾದ ಬೆಳೆಗಳ ವಿವರ ಇತ್ಯಾದಿಗಳ ಬಗ್ಗೆ ಪ್ರೊಫೆಸರ್ ಹಿತ್ತಲಮನಿ ಹಾಗೂ ಕೃಷಿ ತಜ್ಞರು ಮಾಹಿತಿ ನೀಡುತ್ತಿದ್ದರು.

ಪ್ರೊಫೆಸರ್ ಹಿತ್ತಲಮನಿಯವರನ್ನು ನಡೆದಾಡುವ ಕೃಷಿ ವಿಶ್ವವಿದ್ಯಾಲಯ ಎಂದೇ ರೈತರು ಪರಿಗಣಿಸಿದ್ದಾರೆ. ರೈತರ ಬಹುತೇಕ ಸಮಸ್ಯೆಗಳಿಗೆ ಅವರು ಪರಿಹಾರ ಸೂಚಿಸುತ್ತಿದ್ದರು. ಸುಮಾರು 5000ಕ್ಕೂ ಮಿಕ್ಕಿದ ಗಿಡ/ಮರ/ಬಳ್ಳಿಗಳ ಜೈವಿಕ ಹೆಸರುಗಳನ್ನು (biological name of plants) ಇಂಗ್ಲೀಷ್‌ನಲ್ಲಿ ಹೇಳಬಲ್ಲವರಾಗಿದ್ದ ಅವರ ಅಗಾದ ಜ್ಞಾನಕ್ಕೆ ಎಂತಹವರೂ ಬೆರಗಾಗಬೇಕು. ಇವೆಲ್ಲಕ್ಕೂ ಕಳಸವಿಟ್ಟಂತೆ, ಅವರು ಅತ್ಯಂತ ಸರಳ ಜೀವಿ. ಈಗಲೂ ಸಹ ರೈತರು ಕರೆದ ಕಡೆ ಬಸ್ಸಿನಲ್ಲಿ ಹೋಗಿ ಅವರಿಗೆ ಮಾಹಿತಿ ನೀಡಿ ಸಹಾಯ ಮಾಡುತ್ತಿದ್ದಾರೆ. ಅವರ ಸ್ತುತ್ಯಾರ್ಹ ಸೇವೆಗೆ ಏನೂ ಹೇಳಿದರೂ ಕಡಿಮೆಯೇ.

IIHR ಸಂಸ್ಥೆಯಲ್ಲಿ ವಿಜ್ಞಾನಿ ಹಾಗೂ ಮಾವು ತಜ್ಞರಾಗಿ ನಿವೃತ್ತರಾಗಿರುವ ಡಾ: ವೈ.ಟಿ.ಎನ್.ರೆಡ್ಡಿ ರವರ ನಿಸ್ಪೃಹ ಸೇವೆಯನ್ನು ಸಹ ನಾನು ವಿಶೇಷವಾಗಿ ನೆನೆಯಬೇಕು.

ಸರ್ಕಾರಿ ಸಂಸ್ಥೆಗಳಲ್ಲಿ ಹಿರಿಯ ಅಧಿಕಾರಿಗಳಾಗಿ ನಿವೃತ್ತರಾಗಿರುವ ಈ ವ್ಯಕ್ತಿಗಳಿಗೆ, ಈ ವಯಸ್ಸಿನಲ್ಲಿ ನಮ್ಮೊಂದಿಗೆ ಬಂದು ರೈತರಿಗೆ ತಿಳುವಳಿಗೆ ನೀಡುವ ದರ್ದು ಏನೂ ಇಲ್ಲ. ಆದರೂ ಅವರಿಗೆ ತಿಳಿದಿರುವ ವಿಷಯವನ್ನು ನಾಲ್ಕು ಜನ ರೈತರಿಗೆ ಹಂಚುವ ಮೂಲಕ ಸಹಾಯ ಮಾಡುತ್ತಿರುವ ಅವರ ಸೇವಾ ಮನೋಭಾವ ಹಾಗೂ ಕಳಕಳಿಗೆ ಸಮಾಜ ಸದಾ ಕೃತಜ್ಞವಾಗಿರಬೇಕು.

**ಮಾಡಿಕೆರೆ ಕ್ರಾಸ್ ನಲ್ಲಿನ ವಿಸ್ತರಣೆ ಕಾರ್ಯ:**

ಚಿಂತಾಮಣಿಯ ಮಾಡಿಕೆರೆ ಕ್ರಾಸ್ ಬಳಿ ಇರುವ ಮಾವು ಅಭಿವೃದ್ಧಿ ಕೇಂದ್ರದಲ್ಲಿ ನಡೆಸಿದ 'ಸಂವಾದ' ವಿಸ್ತರಣೆ ಕಾರ್ಯ ನನ್ನ ಪಾಲಿಗೆ ಅನೂಹ್ಯವಾದ ಕಾರ್ಯಕ್ರಮ. ಇಷ್ಟೂ ದಿನ ವಿಸ್ತರಣೆ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ತಜ್ಞರು ಮಾತನಾಡುತ್ತಿದ್ದೆವು. ಈ ವಿಸ್ತರಣಾ ಕಾರ್ಯಕ್ರಮದಲ್ಲಿ ಸಾಮಾನ್ಯ ರೈತರು ಹಾಗೂ ಪ್ರಗತಿಪರ ರೈತರನ್ನು ಒಟ್ಟುಗೂಡಿಸಿ ಅವರ ಸಮಸ್ಯೆಗಳನ್ನು ಅವರೇ ಹೇಳಿಕೊಳ್ಳಲು ಹಾಗೂ ಅದಕ್ಕೆ ಪ್ರಗತಿಪರ ರೈತರಿಂದ ಪರಿಹಾರದ ಮಾರ್ಗೋಪಾಯಗಳನ್ನು ಸೂಚಿಸಲು ಸಹಾಯ ಮಾಡಲು ಅನುವಾಗುವಂತೆ ವೇದಿಕೆ ಕಲ್ಪಿಸಬೇಕೆಂದುಕೊಂಡಿದ್ದೆವು. ಈ ಪ್ರಯತ್ನ ನಮ್ಮ ನಿರೀಕ್ಷೆಯನ್ನು ಮೀರಿ ಯಶಸ್ವಿಯಾಯಿತು.

ಚಿಂತಾಮಣಿ ಬಹುತೇಕ ಒಣಭೂಮಿ ಪ್ರದೇಶ. 2,98,070 ಜನಸಂಖ್ಯೆಯ ಈ ತಾಲೂಕಿನಲ್ಲಿ 49,928 ಸಂಖ್ಯೆಯ ರೈತರಿದ್ದಾರೆ. ಉಷ್ಣವಲಯದಲ್ಲಿ ಚೆನ್ನಾಗಿ ಬರುವ ಮಾವು ಈ ತಾಲೂಕಿನ ವಾಣಿಜ್ಯ ಬೆಳೆ. ಬಹುತೇಕ ಮರಳು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿರುವ ಚಿಂತಾಮಣಿ ಮಾವಿನ ಬೆಳೆಗೆ ಸೂಕ್ತ. ಮಾವನ್ನು ಹೊರತುಪಡಿಸಿದಲ್ಲಿ ಚಿಂತಾಮಣಿಯಲ್ಲಿ ಹುಣಸೇಹಣ್ಣು, ಗೋಡಂಬಿ, ರಾಗಿ, ಅವರೆ ಪ್ರಮುಖ ಬೆಳೆಗಳು.

ಈ ಸಂವಾದ ವಿಸ್ತರಣಾ





Downloaded From:www.kpscvaani.com

ಕಾರ್ಯಕ್ರಮದಲ್ಲಿ, ನಮ್ಮೊಡನೆ ನನ್ನ ಸಹೋದ್ಯೋಗಿ ಎಂ.ಸಿ.ಸ್ವಾಮಿ, ಎ.ಪಿ.ಎಂ.ಸಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು, ತೋಟಗಾರಿಕಾ ಇಲಾಖೆಯ ಅಧಿಕಾರಿಗಳು, ಕೃಷಿ ಇಲಾಖೆಯ ಅಧಿಕಾರಿಗಳು, ಡಾ:ಹಿತ್ತಲಮನಿ ಹಾಗೂ IIHR ಸಂಸ್ಥೆಯ ಮಾವು ಬೆಳೆ ತಜ್ಞರಾದ ಡಾ: ವೈ.ಟಿ.ಎನ್. ರೆಡ್ಡಿ, ತಾಲೂಕಿನ ಪ್ರಗತಿಪರ ಮಾವು ಬೆಳೆಗಾರರು ಹಾಗೂ ಮಾವು ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀನಿವಾಸಗೌಡ, ಚಿಂತಾಮಣಿಯ ಅಮರನಾರಾಯಣ ತೋಟಗಾರಿಕೆ ರೈತ ಉತ್ಪಾದಕ ಕಂಪನಿಯ ಪದಾಧಿಕಾರಿಗಳು ಇತ್ಯಾದಿ ಹಿರಿಯರು / ಸಹೋದ್ಯೋಗಿಗಳು ಇದ್ದರು. ಅಲ್ಲಿಗೆ ಕೃಷಿ ಹಾಗೂ ಕೃಷಿ–ಸಂಬಂಧಿತ ಎಲ್ಲಾ ಇಲಾಖೆಗಳೂ ಅಲ್ಲಿ ಇದ್ದ ರೀತಿ ಆಯಿತು. ವಿಸ್ತರಣಾ ಕಾರ್ಯಕ್ರಮಕ್ಕೆ ಅವಶ್ಯವಿರುವ ಬಹುಮುಖ್ಯವಾದ ಅಂಶವೆಂದರೆ ಇದೇ. ಇದರಿಂದ ರೈತರಿಗೆ ಅಗತ್ಯವಿರುವ ಎಲ್ಲಾ ಮಾಹಿತಿಗಳೂ ಒಂದೇ ವೇದಿಕೆಯಲ್ಲಿ ಸಿಗಲು ಅನುಕೂಲವಾಗುತ್ತದೆ.

ಈ ಕಾರ್ಯಕ್ರಮದಲ್ಲಿ ತಾಲೂಕಿನ ರೈತರಿಗೆ ಅಧಿಕಾರಿಗಳಿಂದ ಬಹುಮುಖ್ಯವಾಗಿ ಬೇಕಾಗಿದ್ದ ಮಾಹಿತಿ ಬೆಳೆ ವಿಮೆ, ಕೃಷಿ ಹೊಂಡ ಹಾಗೂ ತಾಲೂಕಿನಲ್ಲಿಯೂ ಸಹ ಎ.ಪಿ.ಎಂ.ಸಿ. ವಹಿವಾಟುಗಳನ್ನು ಆನ್ ಲೈನ್ ಮಾಡುವುದು. ಈ ಎಲ್ಲಾ ಸಮಸ್ಯೆಗಳಿಗೂ ಅಧಿಕಾರಿಗಳು ವಿವರಣೆ ನೀಡಿದರು.

ಆನಂತರ ನಡೆದದ್ದು ರೈತರಿಂದ ರೈತರಿಗಾಗಿ ರೈತರೊಡನೆಯ ಸಂವಾದ. ತಾಲೂಕಿನ ಸಾಮಾನ್ಯ ರೈತರು ಅವರ ಸಮಸ್ಯೆಗಳ ಬಗ್ಗೆ ಹೇಳಿಕೊಂಡರು. ಪ್ರಗತಿಪರ ರೈತರು ಆ ಸಮಸ್ಯೆಗಳಿಗೆ ಪರಿಹಾರದ ಮಾರ್ಗೋಪಾಯಗಳನ್ನು ಸೂಚಿಸಿದರು. ನಾವು ಅಂದುಕೊಂಡದ್ದು ಗರಿಷ್ಠ 2 ಘಂಟೆಗಳ ಕಾರ್ಯಕ್ರಮ. ಆದರೆ, ಬೆಳಿಗ್ಗೆ 11.00 ಘಂಟೆಗೆ ಪ್ರಾರಂಭವಾದ ರೈತ ಸಂವಾದ ಕಾರ್ಯಕ್ರಮವು ಸಂಜೆ 4.00 ಘಂಟೆಯಾದರೂ, ಊಟದ ಪರಿವೆಯೂ ಇಲ್ಲದಂತೆ ಮುಂದುವರೆಯುತ್ತಲೇ ಇತ್ತು. ಕೊನೆಗೆ ನಾವೇ, ಇದೇ ಕಾರ್ಯಕ್ರಮವನ್ನು ಇನ್ನೊಮ್ಮೆ ಮಾಡೋಣವೆಂದು ಹೇಳಿ, ಬಲವಂತವಾಗಿ ಮುಗಿಸಬೇಕಾಯಿತು.

ಸರ್ಕಾರ ರೈತರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ವಿವರಗಳನ್ನು ಈ ಸಂದರ್ಭದಲ್ಲಿ ಅಧಿಕಾರಿಗಳು ನೀಡಿದರು. ಇನ್ನುಳಿದಂತೆ ಅವರ ಸಮಸ್ಯೆಗಳಿಗೆ, ಅದೇ ಕೃಷಿಯಲ್ಲಿ ತೊಡಗಿಕೊಂಡು ಯಶಸ್ಸು ಸಾಧಿಸಿರುವ ಅವರ ಬಾಂಧವ ರೈತರೇ ಪರಿಹಾರ ಸೂಚಿಸಿದರು. ನಾವು, ಅಧಿಕಾರಿಗಳು ಸೂಚಿಸುವ ಅನುಭವರಹಿತ ಪರಿಹಾರಕ್ಕಿಂತಾ ಅವರೇ (ಪ್ರಗತಿಪರ ರೈತರು) ಅಳವಡಿಸಿಕೊಂಡು ಯಶಸ್ಸು ಸಾಧಿಸಿದ ವಾಸ್ತವ ಪರಿಹಾರ ಮಾರ್ಗಗಳೇ ಸೂಕ್ತವಲ್ಲವೇ?

ಒಟ್ಟಾರೆ, ಕ್ಷೇತ್ರ ಕಾರ್ಯಕ್ಕೆ ಕಚೇರಿಯ ಎಲ್ಲಾ ಕಾರ್ಯಗಳಿಗಿಂತ ಹೆಚ್ಚಿನ ಮಹತ್ವ ಇದೆ ಎನ್ನುವುದು ನನ್ನ ಭಾವನೆ. ಸರ್ಕಾರ ಯಾವುದೇ ಯೋಜನೆಯನ್ನು ಹಾಕಿಕೊಂಡರೂ ಅವುಗಳು ಫಲಾನುಭವಿಗಳಿಗೆ ತಲುಪಿದರೆ ತಾನೇ ಯಶಸ್ವಿಯಾಗುವುದು? ಈ ದೃಷ್ಟಿಯಿಂದ, ಕ್ಷೇತ್ರ ಕಾರ್ಯವನ್ನು ಮಾಡುವ ಅಧಿಕಾರಿ ಜ್ಞಾನಪಿಪಾಸು ಆಗಿರಬೇಕು. ಕನಿಷ್ಠ ಅವರ ಇಲಾಖೆಯ ಯೋಜನೆಗಳ ಬಗ್ಗೆ ಚೆನ್ನಾಗಿ ತಿಳಿದಿರಬೇಕು. ಇದರೊಂದಿಗೆ ಸೋದರ ಇಲಾಖೆಗಳ ಕಾರ್ಯಕ್ರಮಗಳ ಪರಿಚಯ ಅವರ ಕಾರ್ಯಕ್ಕೆ ಇನ್ನೂ ಹೆಚ್ಚಿನ ಮೆರಗು / ಅನುಕೂಲ ತಂದುಕೊಡುತ್ತದೆ. ಮಾಹಿತಿಗಳೊಡನೆ ಸನ್ನದ್ಧವಾಗಿರುವ ಕ್ಷೇತ್ರಾಧಿಕಾರಿ, ರೈತರು ಹಾಗೂ ಸಾರ್ವಜನಿಕರ ದೃಷ್ಟಿಯಿಂದ ಶ್ರೇಷ್ಠವಾದ ಮಾನವ ಸಂಪನ್ಮೂಲ ವ್ಯಕ್ತಿಯಾಗುತ್ತಾನೆ.

ಕೃಷಿ ಉತ್ಪನ್ನಗಳು ಹಾಗೂ ಅವುಗಳ ಮಾರಾಟಕ್ಕೆ ಸಂಬಂಧಿಸಿದಂತೆ ಇರುವ ದೊಡ್ಡ ಇಲಾಖೆಗಳು, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಹಾಗೂ ಕೃಷಿ ಮಾರಾಟ ಇಲಾಖೆ. ರಾಜ್ಯದ 742 ಹೋಬಳಿಗಳಲ್ಲಿ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿವೆ (RSK). ಈ ಕೇಂದ್ರಗಳಲ್ಲಿ ಕೃಷಿ ಇಲಾಖೆಗೆ ಸೇರಿದ ಕೃಷಿ ಅಧಿಕಾರಿ ಹಾಗೂ ಅವರ ಸಿಬ್ಬಂದಿ ಇರುತ್ತಾರೆ. ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಸಹ ಇದೇ ಕೇಂದ್ರದಿಂದ ಕಾರ್ಯ ನಿರ್ವಹಿಸುತ್ತಾರೆ. ಕೃಷಿ ಮಾರಾಟ ಇಲಾಖೆಯಡಿ ಕಾರ್ಯ ನಿರ್ವಹಿಸುವ ಮಾರಾಟ ಮಂಡಳಿ ಸಹ ರಾಜ್ಯದಲ್ಲಿ ನಾಲ್ಕು ವಿಭಾಗೀಯ ವಿಸ್ತರಣಾ ಕಛೇರಿಗಳನ್ನು ಹೊಂದಿವೆ.

ಈ RSKಗಳು ಆಯಾ ಇಲಾಖೆಯ ಸರ್ಕಾರದ ಯೋಜನೆಗಳನ್ನು ರೈತರಿಗೆ ತಳಮಟ್ಟದಲ್ಲಿ (grass roots level) ತಲುಪಿಸುವ ಸರ್ಕಾರಿ ಕಚೇರಿಗಳು. ರೈತರಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳು ಹಾಗೂ ಕಾರ್ಯಗಳು ಈ ತಳಮಟ್ಟದ ಕಚೇರಿಗಳಿಂದ ರೈತರನ್ನು ತಲುಪಿಸುವ ದೃಷ್ಟಿಕೋನ ಹಾಗೂ ಗುರಿಯನ್ನು ತಪ್ಪದೇ ಇಟ್ಟುಕೊಂಡು ಕೃಷಿ ಹಾಗೂ ಕೃಷಿ ಸಂಬಂಧಿತ ಕಚೇರಿಗಳು ಕಾರ್ಯನಿರ್ವಹಿಸಬೇಕು. ಇದಕ್ಕೆ ಈ ರೈತರ ತಳಮಟ್ಟದ ಕಚೇರಿಗಳನ್ನು ಮಾಹಿತಿಗಳು/ ಪ್ರಾತ್ಯಕ್ಷಿಕೆಗಳು/ ಸಂದರ್ಶನಗಳಿಂದ ಸನ್ನದ್ಧವಾಗಿಟ್ಟಿರಬೇಕು. ಅವು ರೈತರ ಮಾಹಿತಿ ಕೇಂದ್ರವಾಗಬೇಕು. ಪ್ರತಿ RSK ಯಲ್ಲೂ ಕೃಷಿಗೆ ಸಂಬಂಧಪಟ್ಟ ಮಾಹಿತಿಗಳ ಪುಸ್ತಕಗಳು ಲಭ್ಯವಿರಬೇಕು. ಅಲ್ಲಿ ಸುಸಜ್ಜಿತ ಕೃಷಿ ಲೈಬ್ರರಿ ಇರಬೇಕು. ಪ್ರಗತಿಪರ ರೈತರ ಯಶೋಗಾಥೆಗಳ ಪುಸ್ತಕಗಳು/ವೀಡಿಯೋಗಳು ಸಿಗಬೇಕು. ದೊಡ್ಡ ಪ್ಲಾಸ್ಮಾ ಟಿ.ವಿ. ಇರಬೇಕು. ಆಗಾಗ್ಗೆ, ಅಲ್ಲಿ ಅಧಿಕಾರಿಗಳು ಆಯಾ ಪ್ರದೇಶಗಳ ಬೆಳೆಗಳಿಗೆ ಸಂಬಂಧಪಟ್ಟಂತೆ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಸಂವಾದ ಏರ್ಪಡಿಸಬೇಕು.

ಒಟ್ಟಾರೆ, ಈ ತಳಮಟ್ಟದ ಕಚೇರಿಗಳನ್ನು ಮಾಹಿತಿ ಹಾಗೂ ಪರಿಕರಗಳಿಂದ ಸುಸಜ್ಜಿತಗೊಳಿಸಿ ಮಾಹಿತಿ ಕೇಂದ್ರವಾಗಿ ಪರಿವರ್ತಿಸುವುದು ಅವಶ್ಯಕವಾಗಿದೆ. ಹಾಗಾಗಿ ಇಂತಹಾ RSK ಮಾಹಿತಿ ಕೇಂದ್ರವನ್ನು ಸ್ಥಳಾವಕಾಶ ಹಾಗೂ ಹತ್ತಿರವಿರುವ ಕೆ.ವಿ.ಕೆ ಅಥವಾ ಕೃಷಿ ಮತ್ತು ಕೃಷಿ ಸಂಬಂಧಿತ ಕಚೇರಿಗಳಲ್ಲಿ ಬೇಕಾದರೂ ಸ್ಥಾಪಿಸಬಹುದಾಗಿರುತ್ತದೆ. ಈ ಮಾಹಿತಿ ಕೇಂದ್ರದಲ್ಲಿ ಕೃಷಿ ಮತ್ತು ಕೃಷಿ ಸಂಬಂಧಿತ ಎಲ್ಲಾ ಇಲಾಖೆಗಳ ವಿಸ್ತರಣಾ ಘಟಕಗಳ ಅಧಿಕಾರಿಗಳು ರೈತರಿಗೆ ನಿಗದಿತ ಸಮಯದಲ್ಲಿ ಸಿಗುವಂತಿರಬೇಕು. ಇಷ್ಟೂ ದಿನಗಳ ಕಾಲ ಮಾಡುತ್ತಿರುವ ಕೆಲಸವನ್ನು ಈ ರೀತಿ ಒಪ್ಪವಾಗಿ ಮಾಡಲು ಸಾಧ್ಯವಾದರೆ, ರೈತರಿಗೆ ಸರ್ಕಾರದ ಯೋಜನೆಗಳು ಸುಲಭವಾಗಿ ತಲುಪುತ್ತವೆ ಹಾಗೂ ಅವರಿಗೆ ಅಷ್ಟರ ಮಟ್ಟಿನ ಅನುಕೂಲ ಖಂಡಿತವಾಗಿ ಆಗುತ್ತದೆ. ಯೋಜನೆಗಳು, ಅವು ಅಂತಿಮ ಫಲಾನುಭವಿಯನ್ನು (end user) ತಲುಪಿದಾಗ ಮಾತ್ರ ಪ್ರಯೋಜನಕಾರಿಯಾಗುವುದು. ■



Downloaded From:www.kpscvaani.com



## ಬರಡು ನೆಲದಲ್ಲೂ

# ಬೆಳೆಯುವ ನವಣೆ



ಆರ್. ಎಸ್. ಪಾಟೀಲ

**ನಮ್ಮ ದೇಶದಲ್ಲಿ ರಾಗಿ ನಂತರ ಅತಿ ಹೆಚ್ಚಾಗಿ ಬೆಳೆಯುವ ಸಿರಿಧಾನ್ಯವೆಂದರೆ ಅದು ನವಣೆ.**

ಧಾನ್ಯಭರಿತ ನವಣೆ ತೆನೆ ಥೇಟ್ ನರಿ ಬಾಲದಂತೆ ಕಾಣುವುದರಿಂದ ಇದಕ್ಕೆ ನರಿ ಬಾಲದ ಧಾನ್ಯ ಎನ್ನುವುದು ಅನ್ವರ್ಥಕವಾಗಿದೆ. ಫಾಕ್ಸ್ ಟೇಲ್ ಮಿಲ್ಲೇಟ್ (Fox Tail Millate) ಇದರ ಆಂಗ್ಲ ಪದ, 'ಸೆಟಾರಿಯಾ ಇಟಾಲಿಕಾ' (Setaria Italica) ಇದರ ದ್ವಿನಾಮ ನಾಮಕರಣ. ನರಿ ಬಾಲದ ಈ ಧಾನ್ಯದ ಮೂಲವನ್ನು ಹುಡುಕುತ್ತಾ ಹೋದರೆ ಚೀನಾ ಅನ್ನುವುದು ಗೊತ್ತಾಗುತ್ತದೆ. ನವಣೆಯನ್ನು ಕಂಬನಿ, ಕೊರ್ರ, ರಾಲಿ, ತೆನ್ನೈ ಇತ್ಯಾದಿ ಸ್ಥಳೀಯ ಹೆಸರುಗಳಿಂದಲೂ ವಿವಿಧ ಕಡೆ ಕರೆಯಲಾಗುತ್ತದೆ.

ಹಾಗೆ ನೋಡಿದರೆ ರಾಗಿಯ ನಂತರ ನಮ್ಮ ದೇಶದಲ್ಲಿ ಅತಿ ಹೆಚ್ಚು ಬೆಳೆಯುವ ಸಿರಿಧಾನ್ಯವೆಂದರೆ ನವಣೆ ಅನ್ನಬೇಕು. ರಾಜ್ಯದಲ್ಲಿ ಹಾವೇರಿ, ಬ್ಯಾಡಗಿ, ಶಿಗ್ಗಾಂವ, ಸವಣೂರು, ಹಿರೇಕೆರೂರು, ರಾಣೇಬೆನ್ನೂರು, ಚಿತ್ರದುರ್ಗ, ತುಮಕೂರು, ಗದಗ, ಬಾಗಲಕೋಟೆ, ಭಾಗದಲ್ಲಿ ಇದನ್ನು ಬೆಳೆಯುವುದು ಸರ್ವೆ ಸಾಮಾನ್ಯ.

ಹಾಲು ನವಣೆ, ದೊಡ್ತೆನೆ (ದೊಡ್ಡ ತೆನೆ) ನವಣೆ ಹೀಗೆ ಎರಡು ತಳಿ ನವಣೆಗಳು ರೈತಾಪಿ ಬದುಕಿನಲ್ಲಿ ಹಾಸು ಹೊಕ್ಕಾಗಿದ್ದವು. ಹಾಲು ನವಣೆ ಬೆಳೆ ಎತ್ತರ ಸ್ವಲ್ಪ ಕಮ್ಮಿ. ಹೆಸರೇ ಹೇಳುವಂತೆ ಧಾನ್ಯದ ಬಣ್ಣ ಸ್ವಲ್ಪ ಬಿಳಿ. ಇನ್ನು ದೊಡ್ತೆನೆ ನವಣೆ ತೆನೆ ಗಾತ್ರ ದೊಡ್ಡದು. ತೆನೆಯ ಭಾರಕ್ಕೆ ಗಿಡವೇ ಬಾಗಿ ಭೂತಾಯಿಗೆ ನಮಿಸುವ ಭಂಗಿಯಂತಿರುತ್ತದೆ. ಎರಡೂ ತಳಿಗಳಿಂದಲೂ ಉತ್ತಮ ಇಳುವರಿ ಹಾಗೂ ಪಶುಗಳಿಗೆ ರುಚಿಯಾದ ಹೊಟ್ಟು ಮೇವು ಲಭ್ಯವಾಗಲಿದೆ.



Downloaded From:www.kpscvaani.com

ಕೃಷಿ ವಿಶ್ವವಿದ್ಯಾಲಯಗಳಲ್ಲಿ ವಿವಿಧ ಬಗೆಯ ನವಣೆ ತಳಿಗಳನ್ನು ಅಭಿವೃದ್ಧಿ ಪಡಿಸಿದ್ದಾರೆ. ಎಚ್.ಎಂ.ಟಿ 100–1, ಎಸ್.ಐ.ಎ–2644, ಡಿ.ಎಚ್.ಎಫ್.ಟಿ–109–3 ಬಳಕೆಯಲ್ಲಿರುವ ನವಣೆ ತಳಿಗಳಾಗಿವೆ. ಬಿತ್ತನೆ ಮಾಡಿದ ತೊಂಬತ್ತರಿಂದ ನೂರು ದಿನಗಳಲ್ಲಿ ಕಟಾವಿಗೆ ಬರುವ ತಳಿಗಳು ಇವಾಗಿವೆ. ಮುಂಗಾರು ಜೂನ್–ಜುಲೈ ಬಿತ್ತನೆಗೆ ಸಕಾಲ. ತಡ ಮುಂಗಾರು ಋತುವಿನಲ್ಲೂ ನವಣೆ ಬೇಸಾಯ ಕೈಗೊಳ್ಳುವುದೂ ರೂಢಿಯಲ್ಲಿದೆ. ಬಿತ್ತನೆ ಭೂಮಿ ಇಂತದ್ದೇ ಇರಬೇಕೆಂದೇನಿಲ್ಲ. ಕಲ್ಲು ನೆಲ, ಮಸಾರೆ, ಗುಡ್ಡದ ಇಳಿಜಾರು, ಬರಡು ಭೂಮಿ ಯಾವುದೇ ಇರಲಿ. ಹುಯ್ ಹುಯ್ ಎಂದು ಬೆಳೆದು ನಿಲ್ಲುತ್ತದೆ.

ನವಣೆಯನ್ನು ಏಕ ಬೆಳೆ ವಿಧಾನ ಹಾಗೂ ಮಿಶ್ರ ಬೆಳೆ ವಿಧಾನದಲ್ಲಿ ಬೆಳೆಯುವುದು ರೂಢಿಯಲ್ಲಿದೆ. ತೊಗರಿ, ಹುರುಳಿ ಜೊತೆಗೆ ಮಿಶ್ರ ಬೆಳೆಯಾಗಿ ಬೆಳೆಯುವುದು ಹಾವೇರಿ ವಿಭಾಗದಲ್ಲಿ ಹೆಚ್ಚು ರೂಢಿಯಲ್ಲಿದೆ. ಐದು ಸಾಲು ನವಣೆ ಒಂದು ಸಾಲು ತೊಗರಿ ಬಿತ್ತಿ ಒಂದೆರೆಡು ಬಾರಿ ಎಡೆಕುಂಟೆ ಹೊಡೆದಾದ ಮೇಲೆ ಕೂರಿಗೆಯಿಂದ ನವಣೆ ಸಾಲುಗಳ ಮಧ್ಯ ಹುರುಳಿಯನ್ನು ಬಿತ್ತನೆ ಮಾಡುವ ರೂಢಿ ಪ್ರಸಿದ್ಧವಾಗಿದೆ. ತೊಂಬತ್ತು ದಿನಗಳೊಳಗೆ ನವಣೆಯನ್ನು ಕಟಾವು ಮಾಡಲಾಗುತ್ತದೆ. ನವಣೆ ಕಟಾವು ಮಾಡಿದ ನಂತರ ಚೆನ್ನಾಗಿ ಗಾಳಿ, ಬೆಳಕು ಆಡುವುದರಿಂದ ಹುರುಳಿ, ತೊಗರಿ ನಂತರದ ದಿನಗಳಲ್ಲಿ ಹುಲುಸಗಿ ಬೆಳೆಯುತ್ತವೆ. ಹುರುಳಿ, ತೊಗರಿ, ನವಣೆ ಎಲ್ಲವೂ ಉತ್ತಮ ಪೋಷಕಾಂಶಯುಕ್ತ ಆಹಾರ ಧಾನ್ಯವಾದರೆ ದೊರೆಯುವ ಹೊಟ್ಟು, ಹುಲ್ಲು ಪಶುಗಳಿಗೆ ಅದ್ಭುತ ಮೇವು.

**ನವಣಕ್ಕಿ ಕಿಚಡಿ:**

ನವಣೆ ಉಂಡವನು ಹವಣದಂತೆ ಗಟ್ಟಿಯಾಗುವನು ಅನ್ನುವ ಮಾತಿದೆ. ನವಣೆಯಿಂದ ಮಾಡಿದ ಆಹಾರ ದೇಹಾರೋಗ್ಯಕ್ಕೂ ಕ್ಷೇಮ, ಬಾಯಿಗೂ ರುಚಿ ಕಟ್ಟು. ಉಳಿದ ಸಿರಿಧಾನ್ಯಗಳಂತೆ ಧಾನ್ಯವನ್ನು ಮಿಲ್ ಮಾಡಿಸಿ ತೌಡಿನಿಂದ ಬೇರ್ಪಡಿಸಿದ ನವಣಕ್ಕಿಯದೇ ಪ್ರಧಾನ ಬಳಕೆ. ಒಂದು ಭಾಗ ನವಣಕ್ಕಿಯನ್ನು ಎರಡುವರೆ ಭಾಗ ನೀರಿನೊಂದಿಗೆ ಕುದಿಸಿ ಮಾಡಿದ ನವಣಕ್ಕಿ ಕಿಚಡಿಯನ್ನು ಸಾಕಷ್ಟು ಹಾಲು, ಮೊಸರಿನೊಂದಿಗೆ ಉಂಡರೆ ಇಡೀ ದಿನ ಊಟದ ಚಿಂತೆಯೇ ಇರುವುದಿಲ್ಲ. ಅದೇ ನವಣಕ್ಕಿಯನ್ನು ಹೆಚ್ಚು ನೀರಿನೊಂದಿಗೆ ಹೆಚ್ಚು ಕುದಿಸಿ ಮಾಡಿದ ಅಂಬಲಿಯಂತೂ ಬೇಸಿಗೆ ಬಿಸಿಲಿಗೆ ಬಲು ಬೇಷ್, ನವಣಕ್ಕಿ ಅಂಬಲಿಗೆ ಮೊಸರು ಮಜ್ಜಿಗೆ ಹೇಳಿ ಮಾಡಿಸಿದ ಜೋಡಿ.

**ತಂಬಿಟ್ಟು, ಕರ್ಚಿಕಾಯಿ:**

ನಾಗರ ಪಂಚಮಿ ಹಬ್ಬದಲ್ಲಿ ಉತ್ತರ ಕರ್ನಾಟಕದ ಭಾಗದಲ್ಲಿ ನವಣಕ್ಕಿಯಿಂದ ತಯಾರಿಸುವ ತಂಬಿಟ್ಟು ಭಾರಿ ಪ್ರಸಿದ್ಧ. ಒಂದು ರೀತಿಯ ಘಮ ಹೊರಡುವ ತನಕ ನವಣಕ್ಕಿ ಹುರಿಯುವರು, ಹುರಿದ ನವಣಕ್ಕಿಯನ್ನು ಬೆಲ್ಲ, ಶುಂಠಿ, ಗಸಗಸಿ, ಕೊಬ್ರಿಯೊಂದಿಗೆ ಕುಟ್ಟಿ ಕುಟ್ಟಿ ಹದಗೊಳಿಸಿದಾಗ ದೊರೆಯುವ ಮೃದುವಾದ ಮೇಣದಂತಹ ತಂಬಿಟ್ಟನ್ನು ಮಣ್ಣಿನ ಗಡಿಗೆಯಲ್ಲಿ ಸಂಗ್ರಹಿಸಿ ತಿಂಗಳು ಕಾಲ ತಿನ್ನುತ್ತಿದ್ದರು. ತಂಬಿಟ್ಟಿನ ರುಚಿ, ಅದರ ಘಮ, ವಿಶಿಷ್ಟ ಸ್ವಾದ ಅಯ್ಯೊ ನೆನಪಾದರೆ ಬಾಯಲ್ಲಿ ನೀರು. ತಂಬಿಟ್ಟು ಹಣಿಯಲು ನುರಿತ ಹಿರಿಯರೇ ಬೇಕು. ಮದುವೆ ಮಾಡುವ ಸಂದರ್ಭದಲ್ಲಿ "ಸೂರಿಗೆ ಶಾಸ್ತ್ರ" ಇರುತ್ತದೆ. ನಾಲ್ಕು ಮಣ್ಣಿನ ಕೊಡಗಳನ್ನು ಚೌಕಾಕಾರದಲ್ಲಿ ಇಟ್ಟು ದಾರ ಸುತ್ತಿ ಮಾಡುವ ಶಾಸ್ತ್ರವೇ ಸೂರಿಗಿ. ನಾಲ್ಕು ಕೊಡಗಳ ಬಾಯಿಗೆ ಎಣ್ಣೆ ಹೋಳಿಗೆ ಇಟ್ಟಿರುತ್ತಾರೆ. ಎಣ್ಣೆ ಹೋಳಿಗೆ ಮಾಡಲು ನವಣಕ್ಕಿಯೇ ಪ್ರಧಾನ. ಕರ್ಚಿಕಾಯಿ ಉತ್ತರ ಕರ್ನಾಟಕದ ವಿಶೇಷ ಸಿಹಿ ತಿನಿಸು. ನವಣಕ್ಕಿಯನ್ನು ಹುರಿದು ಪುಡಿ ಮಾಡಿ ಬೆಲ್ಲದೊಂದಿಗೆ ಬೆರೆಸಿ ಮಾಡಿದ ಗರಿಗರಿ ಕರ್ಚಿಕಾಯಿ ತಿಂಗಳು ಕಾಲ ಇಟ್ಟುಕೊಂಡು ತಿನ್ನಬಹುದು.




ನವಣೆ ಸೇವನೆಯಿಂದ ಮೆದುಳಿನ ಬೆಳವಣಿಗೆ ಉತ್ತಮಗೊಂಡು ಬುದ್ಧಿ ಮತ್ತೆ ಹೆಚ್ಚಾಗುತ್ತದೆ ಅಂತೆ. ಇದರಿಂದ ನವಣೆ ಸೇವನೆಯಲ್ಲಿ ಹೊಟ್ಟೆ ಸುಖ, ನೆತ್ತಿಸುಖ, ಎರಡೂ ಇದೆ ಏನಂತೀರಿ.

ಪೋಷಕಾಂಶಗಳ ವಿಚಾರಕ್ಕೆ ಬಂದರೆ ಪ್ರತಿ ನೂರು ಗ್ರಾಂ.ನವಣೆ 12.3 ಗ್ರಾಮ ಸಸಾರಜನಕ, 60.9 ಗ್ರಾಂ. ಪಿಷ್ಟ, 4.3 ಗ್ರಾಂ ಕೊಬ್ಬು, 8.0 ಗ್ರಾಂ ನಾರಿನಾಂಶ, 3.3 ಮಿ.ಗ್ರಾಂ. ಖನಿಜಾಂಶ, 31 ಮೀ.ಗ್ರಾಂ ಸುಣ್ಣ, 29 ಮೀ.ಗ್ರಾಂ.ರಂಜಕ, 5 ಮಿ. ಗ್ರಾಂ. ಕಬ್ಬಿಣ, 21.4 ಮಿ.ಗ್ರಾಂ. ಸತುಗಳಿಂದ ಕೂಡಿದೆ. ಮಾನವ ದೇಹದ ಎಲ್ಲ ಜೈವಿಕ ಕ್ರಿಯೆಗಳು ಸುಗಮವಾಗಿ ನಡೆಯಲು ಬೇಕಾಗಿರುವ ಎಲ್ಲ ಸತ್ವಗಳನ್ನು ನರಿ ಬಾಲದ ಈ ಧಾನ್ಯ ಹೊಂದಿದೆ ಅನ್ನುವುದರಲ್ಲಿ ಎರಡು ಮಾತಿಲ್ಲ.





Downloaded From:www.kpscvaani.com



# ನಿಸರ್ಗದ ಮಧ್ಯೆ ಕೂಡಲಗಿ

**ಕಾಡು ಮತ್ತು ಕಣಿವೆಗಳ ಸುತ್ತಾಡುತ್ತಾ ನದಿಯ ನಿಸರ್ಗದ ಮನಮೋಹಕ ಸೊಬಗನ್ನು ಸವಿಯಬೇಕು ಎನ್ನುವವರು ಕೂಡಲಗಿಗೆ ಒಮ್ಮೆ ಭೇಟಿ ನೀಡಬಹುದು.**

ಗಣಪತಿ ಹಾಸ್ಪುರ



ನಮ್ಮ ರಾಜ್ಯದಲ್ಲಿ ಅಸಂಖ್ಯಾತ ಪ್ರವಾಸಿ ತಾಣಗಳಿವೆ. ಪ್ರತಿಯೊಂದು ತಾಣಗಳಲ್ಲಿಯೂ ಒಂದೊಂದು ವೈವಿಧ್ಯ, ವೈಶಿಷ್ಟ್ಯತೆಯಿದೆ. ಈ ಪ್ರವಾಸಿ ತಾಣಗಳಲ್ಲಿ ಸುತ್ತಾಡಿದಾಗ ಆಗುವ ಖುಷಿ, ಆಹ್ಲಾದತೆಯೇ ವಿಶಿಷ್ಟವಾದುದು. ಅಂತಹ ಉಲ್ಲಾಸ, ಮನೋರಂಜನೆ ನೀಡುವ ಸ್ಥಳಗಳಲ್ಲಿ "ಕೂಡಲಗಿ"ಯೂ ಒಂದು.

ಇದು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಹಿತ್ಲಳ್ಳಿ ಗ್ರಾಮ ಪಂಚಾಯತಿಯ ಗುಂಡಾನಜಡ್ಡಿ ಸನಿಹವೇ ಕೂಡಲಗಿ ಇದೆ. ಈ ತಾಣವು ತಾಲೂಕು ಕೇಂದ್ರದಿಂದ ಸುಮಾರು 40 ಕಿ. ಮೀ. ದೂರದಲ್ಲಿದ್ದು, ಗುಂಡಾನಜಡ್ಡಿಯಿಂದ ಸುಮಾರು 4 ಕಿ. ಮೀ. ಅಂತರದಲ್ಲಿದೆ.

**ಏನಿದರ ವೈಶಿಷ್ಟ್ಯ?**

ಕಾಡು–ಕಣಿವೆ ಸುತ್ತಾಡಬೇಕು. ನದಿಯ ಇಕ್ಕೆಲಗಳಲ್ಲಿ ಹಸಿರಾಗಿ ಹರಡಿಕೊಂಡಿರುವ ಗಿಡ–ಮರಗಳ ಸೌಂದರ್ಯವನ್ನು ನೋಡಬೇಕು. ಬಂಡೆಗಳ ಮೇಲೆ ಓಡಾಡಬೇಕು. ನೀರಿನಲ್ಲಿ ಕುಣಿದು ಕುಪ್ಪಳಿಸಬೇಕು. ಪ್ರಕೃತಿಯ ಸೌಂದರ್ಯ–ವೈವಿಧ್ಯಗಳನ್ನು ಕಣ್ಣಾರೆ ನೋಡಿ ಆಸ್ವಾದಿಸಬೇಕು ಎನ್ನುವವರಿಗೆ ಇದು ಪ್ರಶಸ್ತವಾದ ಸ್ಥಳ, ಸ್ಥಳೀಯರಿಗೆ ಒಂದು ದಿನದ ಫಿಕ್‌ನಿಕ್‌ಗೂ ಕೂಡಲಗಿ ಯೋಗ್ಯ ತಾಣವಾಗಿದೆ.

ಭೇಡ್ತಿ–ಶಾಲ್ಮಲಾ ನದಿಗಳು ಸೇರುವ ಸ್ಥಳವನ್ನೇ 'ಕೂಡಲಗಿ' ಎಂದು ಸ್ಥಳೀಯರು ಕರೆಯುತ್ತಾರೆ. ಆ ಎರಡು ನದಿಗಳು ಸಂಗಮವಾಗಿ, ಮುಂದೆ ಗಂಗಾವಳಿ ಆಗಿ ಹರಿಯುವುದೇ ಈ ಸ್ಥಳದ ವೈಶಿಷ್ಟ್ಯ. ವಿಚಿತ್ರ ಅಂದ್ರೆ, ಭೇಡ್ತಿ ನದಿಯ ನೀರು ಸದ್ದು ಮಾಡದೇ ಹರಿದರೆ.... ಶಾಲ್ಮಲೆಯ ನೀರು ಸದ್ದು ಮಾಡುತ್ತಾ ಹರಿಯುತ್ತದೆ. ಅಲ್ಲಿನ ಬಂಡೆಗಲ್ಲುಗಳಿಗೆ ಈಶ್ವರ ಲಿಂಗವನ್ನು ಆಕರ್ಷಕವಾಗಿ ಕೆತ್ತಲಾಗಿದ್ದು, ಸಮೀಪದ ನಾಗರಿಕರು ಶಿವರಾತ್ರಿಯಂದು ಪೂಜೆ ಅರ್ಪಿಸುತ್ತಾರೆ.

ಈ ಪ್ರವಾಸಿ ತಾಣವು ಮೆಣಸಿ ಸೀಮೆ, ಭರತನಹಳ್ಳಿ ಸೀಮೆ, ಮಾಗೋಡ್‌ನ ಗಡಿ ಪ್ರದೇಶದಲ್ಲಿದೆ. ಅಲ್ಲಿಂದ ಯಾವುದೇ ಕಡೆಗೆ ಹೋದರೂ ಸುಮಾರು 4 ಕಿ. ಮೀ. ದೂರದಲ್ಲಿಯೇ ಜನ ವಸತಿಯಿದೆ. ಅಲ್ಲಿನ ಪರಿಸರ, ಗಿಡ–ಮರಗಳ ಸೊಬಗು, ಮುಗಿಲೆತ್ತರದ ಪರ್ವತದ ವೈವಿಧ್ಯ, ಬಂಡೆಗಲ್ಲಿನಲ್ಲಿ ನುಸುಳಿ ಬರುವ ನೀರಿನ ವೈಯ್ಯಾರವನ್ನು ಕಣ್ತುಂಬಿಕೊಳ್ಳಲು ಎರಡು ಕಣ್ಣುಗಳು ಸಾಲದು ಅನ್ನಿಸುತ್ತದೆ.

ಈ ಸುಂದರ ಪ್ರವಾಸಿ ತಾಣಕ್ಕೆ ಡಿಸೆಂಬರ್‌ನಿಂದ ಮೇ ವರೆಗಿನ ದಿನದಲ್ಲಿ ಭೇಟಿ ನೀಡಬಹುದು. ಇಲ್ಲಿಗೆ ಬಸ್ಸಿನ ಸೌಕರ್ಯವೇನು ಇಲ್ಲಾ. ಖಾಸಗಿ ವಾಹನದಲ್ಲಿ ಬರುವವರು ಗುಂಡಾನಜಡ್ಡಿವರೆಗೆ ಗಾಡಿ ತರಬಹುದು. ಮುಂದೆ ಪಾದಯಾತ್ರೆ ಅನಿವಾರ್ಯ. ಜೊತೆಯಲ್ಲಿ ತಿನ್ನಲು ಬೇಕಾಗುವ ಆಹಾರವನ್ನು ತೆಗೆದುಕೊಂಡು ಹೋಗುವುದು ಸೂಕ್ತ. ಆದರೆ ಪರಿಸರಕ್ಕೆ ಹಾನಿಯಾಗದಂತೆ ಸ್ವಚ್ಛತೆಯನ್ನು ಕಾಪಾಡಬೇಕು.

ಈ ಸ್ಥಳಕ್ಕೆ ಹೋಗಲು ಸಹಾಯಬೇಕಿದ್ದರೆ ಸ್ಥಳೀಯರಾದ ಮಾಬ್ಲೇಶ್ವರ ಭಟ್ ಅವರನ್ನು ದೂರವಾಣಿ ಸಂಖ್ಯೆ 9480789844 ರ ಮೂಲಕ ಸಂಪರ್ಕಿಸಬಹುದು. ಇವರ ಮನೆಯ ದಾರಿಯಲ್ಲೇ ಈ ಪ್ರವಾಸಿ ತಾಣಕ್ಕೆ ಹೋಗಬೇಕಾಗುವುದರಿಂದ ಇವರ ಮನೆಯ ಹತ್ತಿರವೇ ವಾಹನವನ್ನು ನಿಲ್ಲಿಸಿ ಹೋಗಬೇಕು.



Downloaded From:www.kpscvaani.com




# ಚದುರಂಗದ ಮೂಲಕ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುತ್ತಿರುವ ಬಾಲಕಿ

**ಅಮೆರಿಕದಲ್ಲಿ ಹುಟ್ಟಿ ಬೆಳೆದಿರುವ ಈ ಬಾಲಕಿಯು ಚದುರಂಗದಾಟ ಬಳಸಿಕೊಂಡು ಎಲ್ಲರನ್ನು ಒಳಗೊಳ್ಳುವ ಸಮುದಾಯ ನಿರ್ಮಾಣಕ್ಕೆ ಪಣತೊಟ್ಟಿದ್ದಾಳೆ**

ರಮೇಶ್

"ಎಲ್ಲರನ್ನೂ ಬದಲಾಯಿಸಬೇಕೆಂದು ಬಯಸುವ ಬದಲು ನೀನೇ ಬದಲಾಗು." ಎಂದು ಅಮ್ಮ ಯಾವಾಗಲೂ ಹೇಳುತ್ತಿದ್ದರು. ಮೊದಲಿನಿಂದಲೂ ನನಗೆ ವಿಭಿನ್ನವಾಗಿ ಏನನ್ನಾದರೂ ಮಾಡುವಾಸೆ. ನನಗೋ ಚದುರಂಗ ದಾಟವೆಂದರೆ ಬಹಳ ಇಷ್ಟ. ಇದರಿಂದ ಏನಾದರೂ ಬದಲಾವಣೆ ಸಾಧಿಸಬಹುದು ಎಂದೆನಿಸಿತ್ತು. ಅದಕ್ಕಾಗಿ ಚದುರಂಗವನ್ನೇ ಆಯ್ದುಕೊಂಡೆ" ಎನ್ನುತ್ತಾಳೆ ಧೃತಿ. ಕಳೆದೆರಡು ದಶಕಗಳಿಂದ ಅಮೆರಿಕೆಯಲ್ಲಿ ನೆಲೆಸಿರುವ ಕಾಂಚನ ಮತ್ತು ವಿಜಯ್ ಶಾ ದಂಪತಿಗಳ ಪುತ್ರಿ ಈ ಧೃತಿ. ಅವಳಿಗೀಗ 16 ವರ್ಷ ವಯಸ್ಸು. ಅವಳ ವಾಸ ಅಮೆರಿಕದ ಓಹಿಯೋ ರಾಜ್ಯದ ಡಬ್ಲಿನ್‌ನಲ್ಲಿ. ಅಮೆರಿಕೆಯಲ್ಲಿ ಹುಟ್ಟಿ ಬೆಳೆದ ಧೃತಿಗೆ ಭಾರತದ ಕುರಿತು ಅಪೂರ್ವ ಆಸಕ್ತಿ.

ಆರನೇ ವಯಸ್ಸಿನಿಂದಲೇ ಚೆಸ್ ಆಡಲು ಆರಂಭಿಸಿರುವ ಧೃತಿ, ಓಹಿಯೋ ರಾಜ್ಯದ ಗರ್ಲ್ಸ್ ಚೆಸ್ ಚಾಂಪಿಯನ್. ಚೆಸ್‌ನಿಂದ ಎಲ್ಲರನ್ನೂ ಒಳಗೊಳ್ಳುವ ಮತ್ತು ವೈವಿಧ್ಯಮಯವಾಗಿರುವ ಸಮುದಾಯವನ್ನು ಕಟ್ಟಬೇಕು ಎನ್ನುವುದು ಆಕೆಯ ಮಹದಾಶಯ. ಅದಕ್ಕಾಗಿಯೇ ಅವಳು ನೈಟಿಂಗೇಲ್ಸ್ ಚೆಸ್ ಅಕಾಡೆಮಿ ಅನ್ನುವ ಒಂದು ಸಂಸ್ಥೆ ಕಟ್ಟಿದ್ದಾಳೆ. ಆನ್‌ಲೈನ್ ಮತ್ತು ವೈಯುಕ್ತಿಕವಾಗಿ ನಿಯಮಿತವಾಗಿ ಚೆಸ್ ತರಗತಿಗಳನ್ನೂ ನಡೆಸುತ್ತಾಳೆ. ಅವಳ ಈ ಎಲ್ಲ ಚಟುವಟಿಕೆಗಳಿಗೆ ಆಸರೆಯಾಗಿ ನಿಲ್ಲುವುದು ಅವಳ ತಂಗಿ, ವಾಲಿಬಾಲ್ ಆಟಗಾರ್ತಿ ಪ್ರಿಶಾ ಶಾ. ಧೃತಿಯ ಶಿಷ್ಯ ಬಳಗ ದೊಡ್ಡದು. ಅದು ಎಲ್ಲ ವಯಸ್ಕರನ್ನೂ ಒಳಗೊಂಡಿರುವ ಒಂದು ಜನಪ್ರಿಯ ಚೆಸ್ ಕುಟುಂಬ.

"ಚದುರಂಗವೆಂದರೆ ಅದೊಂದು


Downloaded From:www.kpscvaani.com



ಅನೇಕ ಸಾಧ್ಯತೆಗಳನ್ನು ನಿಮ್ಮ ಮುಂದೆ ತೆರೆದಿಡುವ ಅದ್ಭುತ ಕ್ರೀಡೆ. ಈ ಸಾಧ್ಯತೆಗಳನ್ನು ಹುಡುಕಾಡಬಾರದೇಕೆ ಎಂದು ಯೋಚಿಸಿದಾಗ ನನಗೆ ಹೊಳೆದದ್ದು ಈ ದಾರಿ. ಎಲ್ಲವನ್ನೂ ಸಮಚಿತ್ತದಿಂದ ನೋಡುವ, ಮಾನಸಿಕ ಶಕ್ತಿಯನ್ನು ಗಟ್ಟಿಗೊಳಿಸುವ ಮತ್ತು ಆಟಗಾರರಲ್ಲಿ ಆತ್ಮ ವಿಶ್ವಾಸ ತುಂಬುವ ಚದುರಂಗ ಹದಿಹರೆಯದವರಿಗೆ ಹೇಳಿ ಮಾಡಿಸಿದ ಕ್ರೀಡೆ." ಎಂದೆನ್ನುವ ಧೃತಿಯ ಆಶಯಕ್ಕೆ ನೀರೆರೆದು ಪೋಷಿಸಿದವರು ಅವಳ ಪಾಲಕರು. ಭಾರತದ ಗ್ರಾಮೀಣ ಪ್ರದೇಶಗಳಲ್ಲಿರುವ ತನ್ನ ಸಮವಯಸ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಚದುರಂಗ ಕುರಿತು ಆಸಕ್ತಿ ಮೂಡಿಸಬೇಕು ಎಂದು ಧೃತಿ ತನ್ನ ಬಯಕೆ ವ್ಯಕ್ತ ಪಡಿಸಿದಾಗ ಅವಳ ಪಾಲಕರು ಅವಳ ಮುಂದೆ ಅನೇಕ ಆಯ್ಕೆಗಳನ್ನು ಹರಡಿದರು.

ಅವುಗಳಲ್ಲಿ ಒಂದು ಗುಜರಾತಿನ ಅಹಮದಾಬಾದ್‌ನಲ್ಲಿ ಜಸ್ವಂತ ಲಾಲ್ ಜೀವನ ಲಾಲ್ ಚಾರಿಟೇಬಲ್ ಟ್ರಸ್ಟ್ ನಡೆಸುತ್ತಿರುವ ಶಾಲೆಯಾಗಿತ್ತು. ಮಾನಸಿಕ ವಿಶೇಷ ಚೇತನರಾದ ಮಕ್ಕಳಿಗಾಗಿ ಇರುವ ಈ ಶಾಲೆಯಲ್ಲಿನ ಮಕ್ಕಳಿಗೆಂದು ಒಂದು ಚದುರಂಗ ಕ್ಯಾಂಪ್ ನಡೆಸುವ ಧೃತಿಯ ನಿರ್ಧಾರಕ್ಕೆ ಅವಳ ತಂದೆ ತಾಯಿ ಸಮ್ಮತಿಸಿದರು. ವಿಶೇಷ ಚೇತನವಿರುವ ಮಕ್ಕಳಲ್ಲಿ ಆತ್ಮ ವಿಶ್ವಾಸ ತುಂಬಿ ಈ ಪ್ರಯತ್ನದ ಮೂಲಕ ಅವರನ್ನು ಮುಖ್ಯವಾಹಿನಿಯ ಸಮೀಪಕ್ಕೆ ಇನ್ನಷ್ಟು ಹತ್ತಿರ ತರಬೇಕು ಎನ್ನುವುದು ಧೃತಿಯ ಆಶಯವಾಗಿತ್ತು.

ಈ ಕಾರ್ಯಕ್ರಮದ ತಯಾರಿಯನ್ನು ತಿಂಗಳುಗಳ ಮೊದಲಿನಿಂದಲೇ ಧೃತಿ ಆರಂಬಿಸಿದ್ದಳು. ಮೊದಲು ಈ ಮಕ್ಕಳನ್ನು ನೋಡಿಕೊಳ್ಳುವ ಸಹ ಶಿಕ್ಷಕರಿಗೆ ಪೂರ್ವತಯಾರಿ. ಚದುರಂಗದ ಒಳ ಹೊರಗುಗಳೇನು? ಇದನ್ನು ಆಡಬಯಸುವ ವಿಶೇಷ ಚೇತನ ಮಕ್ಕಳನ್ನು ಹೇಗೆ ತಯಾರು ಮಾಡಬೇಕು? ತಮ್ಮ ಎಂದಿನ ಕಾರ್ಯಗಳ ಜೊತೆಗೇ ಚದುರಂಗಕ್ಕಾಗಿ ಹೇಗೆ ಸಮಯ ಮೀಸಲಿಡಬೇಕು ? ವಿಶೇಷವಾಗಿ ಈ ಮಕ್ಕಳ ಗಮನವನ್ನು ಹೇಗೆ ಸಾಂದ್ರೀಕರಿಸಬೇಕು ? ಎಂಬೆಲ್ಲಾ ವಿಷಯಗಳ ಕುರಿತು ಧೃತಿ ಒಂದು ತಿಂಗಳ ಕಾಲ ಈ ಸಹಶಿಕ್ಷಕರಿಗೆ ಆನ್‌ಲೈನ್‌ನಲ್ಲಿ ತಿಳಿ ಹೇಳಿದಳು. ಇದಕ್ಕೆ ಸಹಶಿಕ್ಷಕರ ಪ್ರತಿಕ್ರಿಯೆ ಅಭೂತ ಪೂರ್ವವಾಗಿತ್ತು. ಹೊಸ ಅನುಭವಕ್ಕೆ ಅವರೂ ಸಿದ್ಧವಾದರು.

ನಿಗದಿತ ದಿನದಂದು ತನ್ನ ತಂದೆ ತಾಯಿಯೊಂದಿಗೆ ಅಹಮದಾಬಾದಿನ ಈ ಶಾಲೆಗೆ ಹೋದಳು. ಅವಳಿಗಾಗಿ ಆ ವಿಶೇಷ ಚೇತನ ಮಕ್ಕಳು ಹಾಗೂ ಅವರ ಶಿಕ್ಷಕರು ಕುತೂಹಲದಿಂದ ಕಾಯುತ್ತಿದ್ದರು. ಮೊದಲರ್ಧ ಅವಧಿಯಲ್ಲಿ, ಮಕ್ಕಳಿಗೆ ಚದುರಂಗದ ಕುರಿತು, ಅದರ ಕಾಯಿಗಳ ಕುರಿತು, ಆ ಕಾಯಿಗಳ ನಡೆಯ ವೈಶಿಷ್ಟ್ಯ, ಅವುಗಳಿಗೆ ಇರುವ ವಿಶೇಷ ಶಕ್ತಿಗಳು, ಮುಂತಾದವುಗಳನ್ನು ಧೃತಿ ಚೊಕ್ಕವಾಗಿ ವಿವರಿಸಿದಳು. ಅವಳ ಕ್ಲಿಷ್ಟ ಉಚ್ಚಾರಣೆಯನ್ನು ಮಕ್ಕಳಿಗೆ ಅರ್ಥ ಮಾಡಿಸುವ ಹೊಣೆಯನ್ನು ಧೃತಿಯ ತಾಯಿ ಅಚ್ಚುಕಟ್ಟಾಗಿ ನಿಭಾಯಿಸಿದರು. ಮಕ್ಕಳಂತೂ ಅತ್ಯುತ್ಸಾಹ ಭರಿತರಾಗಿ ಚದುರಂಗ ಆಟವನ್ನು ಕಲಿತು ಆಡಿದರು. ಅಲ್ಲಿಯೇ ಚೆಸ್ ಟೂರ್ನಮೆಂಟ್ ಒಂದನ್ನು ಆಯೋಜಿಸಲಾಗಿತ್ತು.

ಅಲ್ಲೊಂದು ಹೊಸ ಲೋಕ ಅನಾವರಣ ಗೊಂಡಿತ್ತು. ಗಳಿಸಿದ ಹೊಸ ಪಾಠವನ್ನು ಒರೆಗೆ ಹಚ್ಚಿ ಆಟವಾಡಲು ಮಕ್ಕಳು ತುದಿಗಾಲ ಮೇಲೆ ತುಡಿಯುತ್ತಿದ್ದರು. ಈ ವಿಶೇಷ ಚೇತನ ಮಕ್ಕಳು ಹೊಸದಾಗಿ ಚೆಸ್ ಆಡಲು ಉಪಕ್ರಮಿಸಿದ ರೀತಿ, ಪಡೆದ ಯಶಸ್ಸು, ಎಲ್ಲ ನಿರೀಕ್ಷೆಗಳನ್ನೂ ದಾಟಿ ದಾಪುಗಾಲು ಹಾಕಿತ್ತು. ಆ ಹುಡುಗರ ಕಣ್ಣಲ್ಲಿ ಕಂಡ ಹೊಳಪು, ಹೊಸ ಸವಾಲಿಗೆ ಸ್ಪಂದಿಸುತ್ತಿದ್ದ ಅವರ ಶಾರೀರಿಕ ಭಾಷೆ, ಅಲ್ಲಿ ಮೊಳೆಯುತ್ತಿದ್ದ ಆತ್ಮ ವಿಶ್ವಾಸದ ಪ್ರತಿಬಿಂಬದಂತಿತ್ತು.

"ಚದುರಂಗವನ್ನು ಹೇಳಿಕೊಡಲು ಆರಂಭಿಸಿದ ದಿನಗಳಲ್ಲಿ ಈ ಹುಡುಗರಲ್ಲಿ ಬಹುತೇಕರು ಆಡಲು ಹಿಂಜರಿಯುತ್ತಿದ್ದರು. ಆದರೆ 10 ದಿನಗಳಾದ ನಂತರ ಶೇಕಡಾ 70 ರಷ್ಟು ಹುಡುಗರು ಆಸಕ್ತಿ ತೋರಲಾರಂಭಿಸಿದರು. ಅವರ ಕಲ್ಪನಾ ಪ್ರಜ್ಞೆ ಗಣನೀಯವಾಗಿ ಬದಲಾವಣೆ ತೋರುತ್ತಿದ್ದುದು ಬಹಳ ಮುಖ್ಯವಾಗಿತ್ತು. ಈ ಸ್ವಾಗತಾರ್ಹ





Downloaded From:www.kpscvaani.com



ಬದಲಾವಣೆಗೆ ಕಾರಣರಾದ ಧೃತಿ ಮತ್ತು ಅವಳ ಪಾಲಕರಿಗೆ ಅಲ್ಲಿನ ಶಿಕ್ಷಕರು ಧನ್ಯವಾದ ಅರ್ಪಿಸಿದರು.

ನೈಟಿಂಗೇಲ್ಸ್ ಚೆಸ್ ಅಕಾಡೆಮಿ ವತಿಯಿಂದ ಅಹಮದಾಬಾದ್‌ನ ಜಸ್ವಂತ ಲಾಲ್-ಜೀವನ ಲಾಲ್ ಚಾರಿಟೇಬಲ್ ಟ್ರಸ್ಟ್‌ಗೆ 5000 ಡಾಲರ್‌ಗಳನ್ನು ಕೊಡುಗೆಯಾಗಿ ನೀಡಿದ ಧೃತಿ ಈ ಸಂಸ್ಥೆಯ ಪುರೋಭಿವೃದ್ಧಿಗೆಂದು ಅಲ್ಲಿಯೇ ಸ್ಥಳೀಯ ದಾನಿಗಳು ಮತ್ತು ವೈಯುಕ್ತಿಕವಾಗಿ ಒಟ್ಟು 5 ಲಕ್ಷ ರೂಪಾಯಿಗಳ ನಿಧಿಯನ್ನು ಕೂಡಿಸಿಕೊಟ್ಟಿದ್ದು ಈ ಪ್ರಯತ್ನದ ಯಶಸ್ಸಿಗೆ ಸಾಕ್ಷಿಯಾಗಿತ್ತು. ವಿಶೇಷ ಚೇತನ ಮಕ್ಕಳಿಗೆ ಚೆಸ್ ಕಲಿಸುವ ಮೊಟ್ಟ ಮೊದಲ ಪ್ರಯತ್ನವೂ ಇದಾಗಿತ್ತು ಎನ್ನುವುದು ವಿಶೇಷ.

ಅಹಮದಾಬಾದ್‌ನ ಯಶಸ್ಸಿನ ನಂತರ ಧೃತಿ ಆಯ್ದುಕೊಂಡಿದ್ದು ನಮ್ಮ ಕೆಂಗೇರಿಯಲ್ಲಿನ ನ್ಯೂ ಬಾಲಾಜಿ ವಿಕ್ರಂ ಶಾಲೆಯನ್ನು. 8.06.2023ರಂದು ಅಲ್ಲಿ ಚೆಸ್ ಆಡಲು ಆಸಕ್ತಿ ತೋರಿದ ವಿದ್ಯಾರ್ಥಿಗಳಿಗೆ ಚೆಸ್ ಪಂದ್ಯಾವಳಿಯನ್ನು ಸಂಘಟಿಸಿದ್ದಳು. ಪಂದ್ಯಾವಳಿಗಳಿಗೆ ಬೇಕಾಗುವ ಚೆಸ್ ಬೋರ್ಡುಗಳು, ಪಾನುಗಳೆಲ್ಲವನ್ನೂ ತಾನೇ ತಂದು ಶಾಲೆಗೆ ಒದಗಿಸಿ ನಂತರ ಅವುಗಳನ್ನು ಶಾಲೆಗೆ ಕೊಟ್ಟು ಚೆಸ್ ಆಡುವ ಪ್ರಕ್ರಿಯೆಗೆ ಒಂದು ನಿರಂತರತೆಯನ್ನೂ ಕಲ್ಪಿಸಿ ಕೊಟ್ಟಿದ್ದಾಳೆ. ಚೆಸ್‌ನಲ್ಲಿ ಗೆದ್ದ ಮಕ್ಕಳಿಗೆ ಬಹುಮಾನವನ್ನೂ ಆಕೆಯೇ ವ್ಯವಸ್ಥೆ ಮಾಡಿದ್ದಳು.

ಈ ಚೆಸ್ ಪಂದ್ಯಾವಳಿಯ ಯಶಸ್ಸನ್ನು ಕಂಡು ಕೆಂಗೇರಿ ಎಜುಕೇಶನಲ್ ಟ್ರಸ್ಟ್‌ನ ಮತ್ತೊಂದು ಪ್ರೌಢ ಶಾಲೆಯ ವ್ಯವಸ್ಥಾಪಕ ಸಮಿತಿಯು ಧೃತಿಯನ್ನು ತಮ್ಮ ಶಾಲೆಯಲ್ಲಿಯೂ ಈ ತರಹದ ಕ್ಯಾಂಪ್ ನಡೆಸಿ ಕೊಡುವಂತೆ ಆಹ್ವಾನ ನೀಡಿತು. ಕೆಂಗೇರಿಯ ಸುತ್ತ ಮುತ್ತಲೂ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳೇ ಹೆಚ್ಚಾಗಿದ್ದ ಈ ಶಾಲೆಯಲ್ಲಿಯೂ ಧೃತಿ ಚೆಸ್ ಕ್ಯಾಂಪ್ ನಡೆಸಿಕೊಟ್ಟಳು.

ಇದುವರೆವಿಗೂ ಚೆಸ್ ಆಟವನ್ನೇ ಆಡದ ಈ ಶಾಲೆಯ ಮಕ್ಕಳು ತಮ್ಮಲ್ಲಿಯೇ ಗುಂಪುಗಳನ್ನು ರಚಿಸಿಕೊಂಡು ಚದುರಂಗದ ಮೊದಲ ಮೀಟುಗಳನ್ನು ಅರಿಯಲು ಸಿದ್ಧರಾದರು. ಮೊದಲ ಭಾಗದಲ್ಲಿಯೆ ತಮ್ಮ ಸಾಮಾನ್ಯ ಜ್ಞಾನ ಪ್ರದರ್ಶಿಸಿದ ಈ ಮಕ್ಕಳು ಚದುರಂಗಕ್ಕೆ ಅಂಟಿಕೊಂಡ ರೀತಿ ಅಪರೂಪ ಎನಿಸುವಂತಿತ್ತು. "ಚೆಸ್ ಕೇವಲ ಕೆಲವರೇ ಆಡುವ ಬೋರಿಂಗ್ ಆಟ ಎನ್ನುವುದು ನನ್ನ ನಂಬಿಕೆಯಾಗಿತ್ತು. ಅದು ಇಷ್ಟೊಂದು ಆಸಕ್ತಿದಾಯಕ ಮತ್ತು ನಮ್ಮ ಗಮನವನ್ನೆಲ್ಲಾ ತನ್ನತ್ತ ಸೆಳೆಯುವ ಅದ್ಭುತ ಆಟ ಎನ್ನುವುದು ಈಗ ಮನವರಿಕೆಯಾಯಿತು.....ನಾನೀಗ ಚೆಸ್ ಅನ್ನು ಪ್ರೀತಿಸಲು ಆರಂಭಿಸಿದ್ದೇನೆ....." ಎಂದು ವಿದ್ಯಾರ್ಥಿ ಗಂಗೂಲಿ ಹೇಳಿದರು. ತರಬೇತಿ ಮತ್ತು ಟೂರ್ನಮೆಂಟ್ ಗಳೆರಡರಲ್ಲೂ ಗಮನಾರ್ಹ ಪ್ರತಿಭೆ ತೋರಿದ ಈ ಹುಡುಗ ಟೂರ್ನಮೆಂಟ್‌ನಲ್ಲಿ ವಿಜಯ ಸಾಧಿಸಿದ್ದು ಸಹಜವಾಗಿಯೆ ಇತ್ತು.

ಗಂಗೂಲಿಯ ಅಭಿಪ್ರಾಯ ಉಳಿದೆಲ್ಲರದೂ ಆಗಿತ್ತು. ಈಗ ಅವರೆಲ್ಲರೂ ಧೃತಿಯ ಶಿಷ್ಯರು. ಆನ್ ಲೈನ್‌ನಲ್ಲೂ ಚೆಸ್ ಕಲಿಯಲು ಸಿದ್ಧವಾಗಿರುವ ಉತ್ಸಾಹಿಗಳು. ಚೆಸ್ ಎನ್ನುವ ಮೋಹಕ ಆಟ ಧೃತಿಯ ಮೂಲಕ ಮಕ್ಕಳ ಮನದ ಮೇಲೆ ಮೋಡಿ ಮಾಡಿದ ಪರಿ ಇದು.

ಧೃತಿಯ ಭಾರತ ಪಯಣದ ಕೊನೆಯ ನಿಲ್ದಾಣ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿರುವ ದೀನ ಬಂಧು ಆಶ್ರಮ. ಕನ್ನಡದ ಖ್ಯಾತ ಸಾಹಿತಿ, ನಾಟಕಕಾರ ಮತ್ತು ಸಮಾಜಮುಖಿ ಚಿಂತಕರಾದ ಪ್ರೊ. ಜಯದೇವ ಅವರು ನಡೆಸುತ್ತಿರುವ ಈ ವಿಶಿಷ್ಟ ಸಂಸ್ಥೆ 1994 ರಿಂದಲೂ ಕೆಳ ವರ್ಗದ ಮತ್ತು ಅನಾಥ ಮಕ್ಕಳ ಕಲಿಕಾ ಕೇಂದ್ರವಾಗಿ, ಆಶ್ರಯ ಧಾಮವಾಗಿ, ಸಲ್ಲಿಸುತ್ತಿರುವ ಸೇವೆ ನಾಡಿನ ಎಲ್ಲ ಸ್ತರದಲ್ಲಿಯೂ ಜನ ಮೆಚ್ಚುಗೆಗೆ ಪಾತ್ರ. ಇಲ್ಲಿನ ಶಿಕ್ಷಕ ಸಂಪನ್ಮೂಲ ಕೇಂದ್ರ, ಕಲಿಕಾ ಕ್ಷೇತ್ರದಲ್ಲಿ ಪ್ರಾಯೋಗಿಕ ಶಿಕ್ಷಣ ಕಲಿಕಾ ವಿಧಾನವನ್ನು ಜನಪ್ರಿಯಗೊಳಿಸಿರುವ ಒಂದು ಅಪರೂಪದ ಸಂಘಟನೆ. ಬೆಂಗಳೂರಿನಲ್ಲಿರುವ ತನ್ನ ಚಿಕ್ಕಪ್ಪ ರಾಮಮೋಹನ್ ಅವರಿಂದ ಈ ಕೇಂದ್ರದ ಕುರಿತು ತಿಳಿದುಕೊಂಡ ಧೃತಿ ಇಲ್ಲಿನ ಸೇವಾ ಸಂಘಟಕಿ ಶ್ರೀಮತಿ ಪ್ರಜ್ಞಾ ಅವರೊಂದಿಗೆ ತಿಂಗಳುಗಳ ಮುಂಚೆಯೇ ಜ಼ ಟಚುಟ ಮೂಲಕ ಸಂಪರ್ಕ ಸಾಧಿಸಿ ಇಲ್ಲಿನ ಮಕ್ಕಳಿಗೆ ಚೆಸ್ ಕ್ಯಾಂಪ್ ಆಯೋಜಿಸುವ ಕುರಿತು ಸಮಾಲೋಚನೆ ನಡೆಸಿ ಒಪ್ಪಿಗೆ ಪಡೆದು ಕೊಂಡಿದ್ದಳು.


11.06.2023 ರ ನಿಗದಿತ ದಿನದಂದು ಕ್ಯಾಂಪ್ ಆಯೋಜಿತವಾಗಿತ್ತು. ಆಶ್ರಮದ 20 ಜನ ಹುಡುಗ ಹುಡುಗಿಯರು ಕ್ಯಾಂಪ್‌ನಲ್ಲಿ ಭಾಗವಹಿಸಿದ್ದರು. ಇವರು ತೋರಿದ ಆಸಕ್ತಿ ಮತ್ತು ತುಲನಾತ್ಮಕವಾಗಿ ಅವರು ತೋರಿದ ಉತ್ತಮ ಬುದ್ದಿಮತ್ತೆ ಅಸಾಧಾರಣ ಎನಿಸಿತ್ತು. ಅತಿ ಬೇಗ ಚದುರಂಗದ ಒಳ ನೋಟಗಳನ್ನು ಗ್ರಹಿಸಿದ ಈ ಮಕ್ಕಳು ಪಂದ್ಯಾವಳಿಯಲ್ಲಿ ತೋರಿದ ಚಾಕಚಕ್ಯತೆ ಮತ್ತು ಕೌಶಲ ಬೆರಗು ಹುಟ್ಟಿಸುವಂತಿತ್ತು. ಧೃತಿಯ ಪಾಠಕ್ಕೆ ಅವಳ ತಾಯಿಯ ಕನ್ನಡ ಭಾಷೆಯ ಬೆಂಬಲ ಅತ್ಯಂತ ಉಪಯುಕ್ತವಾಗಿತ್ತು.

"ಅಕ್ಕಾ.... ತಿರುಗಿ ಯಾವಾಗ ಬರ್ತೀಯ....?" ಎಂದು ಕೇಳಿದ ತಂಡದ ಅತಿ ಕಿರಿಯ ಹುಡುಗ ಕುಬೇರನ ಪ್ರೀತಿ ಮತ್ತು ಕಕ್ಕುಲಾತಿ, ತಂಡದ ಎಲ್ಲಾ ಹುಡುಗರ ಭಾವವನ್ನೂ ಬಿಂಬಿಸಿ ಮನ ತಟ್ಟಿದ ರೀತಿ ಅನನ್ಯವಾಗಿತ್ತು.



Downloaded From:www.kpscvaani.com

# ಪದಬಂಧ-49



ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

2. ಅತಿಯಾದ ಬಯಕೆ (3)
5. ಅದೇ ತಾನೆ ಮದುವೆಯಾದ ಗಂಡಹೆಂಡತಿ (5)
7. ಭೂಮಿಗೂ ಆಕಾಶಕ್ಕೂ ನಡುವಣ ಪ್ರದೇಶ (4)
9. ವನಿತೆ ತೋರಿಸಿದ ಪರದೆ! (4)
12. ಕೋಲಾರ ಜಿಲ್ಲೆಗೆ ಕುಡಿಯುವ ನೀರು ನೀಡುವಯೋಜನೆ (4)
15. ಪತಿಯೊಳಗಿರುವ ಮೇರೆ ಕಾಣುತ್ತಿದೆಯೇ? (4)
17. ಈತ ಅಡುಗೆಯಲ್ಲಿ ನುರಿತವನು (5)
18. ಉತ್ತರದವರ ಬಾಯಲ್ಲಿ ವಿಪುಲತೆ (3)

## ಮೇಲಿಂದ ಕೆಳಕ್ಕೆ

1. ಕಾಡಿನ ಹೂವು (4)
2. ತರಗತಿಯಲ್ಲಿರುವ ಗುಂಪು (2)
3. ಕಾಗದ ಪತ್ರಗಳ ಕಟ್ಟು (3)
4. ಪ್ರತ್ಯಕ್ಷ ಪದದ ವಿರುದ್ಧ ಪದ (3)
6. ಚಿಗುರು ಎಂಬರ್ಥದ ರಾಜವಂಶ (3)
7. ಹತೋಟಿ ಅಥವಾ ಸಂಖ್ಯೆ (2)
8. ರೀತಿಯೊಡಗೂಡುವ ಜೋಡುನುಡಿ (3)
10. ಕರಾರುವಾಕ್ಕಾದುದು (3)
11. ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
12. ಇಂದ್ರಿಯನಿಗ್ರಹ ಮಾಡುವವನು (2)
13. ಹಣವನ್ನು ಕೂಡಿಡುವುದಕ್ಕಾಗಿ ಮುಚ್ಚಳದಲ್ಲಿ ರಂಧ್ರವಿರುವ ಡಬ್ಬಿ (3)
14. ಈ ಪರಿ ಕಾಣುತ್ತಿರುವ ನೈಪುಣ್ಯ (4)
15. ಕೆ ಎಸ್ ಆರ್ ಟಿ ಸಿ ಯ ಹವಾನಿಯಂತ್ರಣ ರಹಿತಸ್ಲೀಪರ್ ಬಸ್ (3)
16. ಸೂರ್ಯನ ಇನ್ನೊಂದು ಹೆಸರು (3)
17. ತೊಂದರೆ ಈ ರೀತಿ ಬಂದಿದೆ (2)

**ಉತ್ತರ**

**ಮೇಲಿಂದ ಕೆಳಕ್ಕೆ**

1. ವನಸುಮ 2. ತತಿ 3. ಕಡತ 4. ಪರೋಕ್ಷ 6. ಪಲ್ಲವ 7. ಅಂಕೆ 8. ರಿವಾಜು 10. ನಿಖರ 11. ನಗಾರಿ 12. ಯತಿ 13. ಗೋಲಕ 14. ಪರಿಣತಿ 15. ಪಲ್ಲಕ್ಕಿ 16.ಮಿಹಿರ 17. ಪಾಡು

**ಎಡದಿಂದ ಬಲಕ್ಕೆ**

2. ತವಕ 5. ನವದಂಪತಿ 7. ಅಂತರಿಕ್ಷ 9. ಯವನಿಕೆ 12.ಯರಗೋಳ್ 15. ಪರಿಮಿತಿ 17. ಪಾಕಪ್ರವೀಣ 18. ರಗಡು

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



2022–23 ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಸಮೂಹ ಛಾಯಾಚಿತ್ರ

Downloaded From:www.kpscvaani.com

RNI No. KAR/KAN/2017/75029
Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com